GOVERNMENT OF TAMIL NADU

# ಕನ್ನಡ ಸಿರಿ

# KANNADA READER

## ನಾಲ್ಕನೆಯ ತರಗತಿ

## STANDARD FOUR

Department of School Education

Untouchability is Inhuman and a Crime

**Government of Tamil Nadu**

First Edition - 2019

Reprint - 2020, 2021, 2022, 2023, 2024

(Published under New Syllabus)

**Content Creation**

State Council of Educational Research and Training
© SCERT 2019
**Printing & Publishing**

Tamil Nadu Textbook and Educational Services Corporation

www.textbooksonline.tn.nic.in

## ಪರಿಚಯ

ಶಿಕ್ಷಣವೆಂಬುದು ಜ್ಞಾನವನ್ನು ಹುಡುಕುವ ಪ್ರಕ್ರಿಯೆ ಮಾತ್ರವಲ್ಲದೆ, ಭವಿಷ್ಯದ ಜೀವನಕ್ಕೆ ಅಡಿಪಾಯ ಹಾಕುವ ಕನಸಿನ ಹಾದಿಯೂ ಹೌದು. ಹಾಗೆಯೇ ಪಠ್ಯಪುಸ್ತಕವೆಂಬುದು ವಿದ್ಯಾರ್ಥಿಗಳ ಕೈಯಲ್ಲಿ ಓಡಾಡುವ ಮಾರ್ಗದರ್ಶಿ ಮಾತ್ರವಲ್ಲದೆ, ಮುಂದಿನ ಪೀಳಿಗೆಯ ಮಕ್ಕಳಲ್ಲಿ ಚಿಂತನಾ ಶಕ್ತಿಯನ್ನು ಬಲಿಷ್ಠವಾಗಿ ವೃದ್ಧಿಸುವ ಅರಿವು ಮೂಡಿಸುವಂಥಹದ್ದು.

ಪೋಷಕ–ಬೋಧಕರು ಮತ್ತು ವಿದ್ಯಾರ್ಥಿಗಳ ಮುಂದಿನ ವರ್ಣರಂಜಿತ ಕನಸುಗಳನ್ನು ನನಸುಮಾಡುವ ಚಿತ್ರಣ ಇದಾಗಿದೆ. ಅದರೊಂದಿಗೆ ಈ ಕೆಳಕಂಡ ಗುರಿಯನ್ನು ತಲುಪುವುದು ಈ ಪಠ್ಯಪುಸ್ತಕದ ಉದ್ದೇಶವಾಗಿದೆ.

* ಕಲಿಕೆಯು ವಿಚಲಿತ ಮನಸ್ಸಿನ ದಿಕ್ಕನ್ನು ಬದಲಾಯಿಸಿ ಉತ್ತಮ ಜ್ಞಾನಮಾರ್ಗದ ಕಡೆಗೆ ಕೊಂಡೊಯ್ಯುತ್ತದೆ.
* ಕನ್ನಡ ಭಾಷೆಯ ಇತಿಹಾಸ, ಕಲೆ ಮತ್ತು ಸಂಸ್ಕೃತಿ, ಸಾಹಿತ್ಯ ಇತ್ಯಾದಿಗಳ ಮಹತ್ವವನ್ನು ಪ್ರತಿಬಿಂಬಿಸುವುದು ಈ ಪಠ್ಯದ ಉದ್ದೇಶವಾಗಿದೆ.
* ಆತ್ಮವಿಶ್ವಾಸದಿಂದ ವಿಜ್ಞಾನ, ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಹೊಸ ಜಗತ್ತಿನ ಯಶಸ್ಸಿನ ಹಾದಿಯಲ್ಲಿ ತೊಡಗಿಸಿಕೊಳ್ಳುವುದು.
* ಜ್ಞಾನಸಂಪಾದನೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ, ಮೌಲ್ಯವನ್ನು ಸರಳವಾಗಿ ಅಳವಡಿಸಿಕೊಳ್ಳುವ ದಾರಿದೀಪವಾಗಿದೆ.



4th_Kannada_Reader_Term1.indd 3 12-07-2019 15:15:50

# ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧೂ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ.
ತವಶುಭ ನಾಮೆ ಜಾಗೇ
ತವಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ !

– ರವೀಂದ್ರನಾಥ ಠಾಗೂರ್

## ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮ ಪಂಚಾಬ್, ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರ ಅಲೆಗಳಲ್ಲಿ ನಮನಗೊಳ್ಳುತ್ತದೆ. ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ

ಜಯಹೇ! ಜಯಹೇ! ಜಯಹೇ!





4th_Kannada_Reader_Term1.indd 4 12-07-2019 15:15:51

# ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



## ತಮಿಳ್ ತಾಯಿಯ ಪ್ರಾರ್ಥನೆಯ ಸಾರ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಕ್ಷನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



4th_Kannada_Reader_Term1.indd 5 12-07-2019 15:15:51

## ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಮತ್ತು ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೆ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯಾ, ಭಾಷಿಕ, ಪ್ರಾದೇಶಿಕ ಅಥವಾ ರಾಜಕೀಯ ಅಥವಾ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ವಿವಾದಗಳು ಶಾಂತಿಯುತವಾಗಿಯು ಸಂವಿಧಾನಕ್ಕನುಸಾರವಾಗಿಯು ಪರಿಹರಿಸಲ್ಪಡಬೇಕೆಂದು ದೃಡಪಡಿಸುತ್ತೇನೆ.

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡ ಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನು ವೈಶಿಷ್ಟವನ್ನು ಕಂಡು ಹೆಮ್ಮೆಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ. ನನ್ನ ತಂದೆ ತಾಯಿಯರು, ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯು ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ, ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನು ಸಮೃದ್ಧಿಯನ್ನು ಹೊಂದುವುದನ್ನು ಕಂಡು ನಾನು ಅತ್ಯಾನಂದ ಪಡುತ್ತೇನೆ.



4th_Kannada_Reader_Term1.indd 6 12-07-2019 15:15:52

# ನಾಡ ಗೀತೆ

## ಜಯ ಹೇ ಕರ್ಣಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ಣಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು



4th_Kannada_Reader_Term1.indd 7 12-07-2019 15:15:52

# ಕನ್ನಡ

## ನಾಲ್ಕನೆಯ ತರಗತಿ





4th_Kannada_Reader_Term1.indd 8 12-07-2019 15:15:56

# ಮುನ್ನುಡಿ

ಮಕ್ಕಳು ಹೂವಿನಂತೆ ಅದ್ಭುತವಾದವರು. ಅವರು ಹಲವು ಪರಿಸರಗಳಿಂದ ಶಾಲೆಗೆ ಬರುವರು. ಎಲ್ಲ ವಿದ್ಯಾರ್ಥಿಗಳೂ ಸ್ವ-ಪ್ರತಿಭೆಯುಳ್ಳ ಶಿಲ್ಪಿಗಳು.

ಆ ಶಿಲ್ಪಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಗೆ ತರುವುದೇ ನಿಜವಾದ ಶಿಕ್ಷಣ.



ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆಯನ್ನು ಬೆಳೆಸುವ ನಿಟ್ಟಿನಲ್ಲಿ ಮಕ್ಕಳ ಮನೋಸಾಮರ್ಥ್ಯದ ಆಧಾರದ ಮೇಲೆ ಸಂಸ್ಕೃತಿ, ಸಮಾನತೆಯನ್ನು ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ಇದರಲ್ಲಿ ವಿದ್ಯಾರ್ಥಿಗಳ ಹಿತಾಸಕ್ತಿಗನುಗುಣವಾಗಿ ಆಕರ್ಷಕವಾದ ವರ್ಣರಂಜಿತ ಒಳ್ಳೆಯ ಮೌಲ್ಯಾಧಾರಿತ ಕಥೆಗಳು, ಚಿತ್ರಕಥೆಗಳು, ರಾಗಬದ್ಧವಾದ ಕವಿತೆಗಳು ಇತ್ಯಾದಿಗಳಿವೆ.

ಮಕ್ಕಳು ನಿರ್ಭಯವಾಗಿ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಲು ಪ್ರೋತ್ಸಾಹಿಸುವುದೇ **'ಬನ್ನಿ ಮಾತನಾಡೋಣ!'**.





ಮಕ್ಕಳು ತರಗತಿಯಲ್ಲಿ ಸಂದರ್ಭಕ್ಕನುಗುಣವಾಗಿ ಚಿಂತನೆ ಮಾಡಿ, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ **'ಚಿಂತಿಸೋಣ!'**

ಮಕ್ಕಳು ಆಟವಾಡುತ್ತಲೇ ತಮ್ಮ ಭಾಷಾಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದೇ **'ಭಾಷೆಯೊಂದಿಗೆ ಆಟ ಆಡೋಣ!'**







ಪ್ರತಿಯೊಬ್ಬ ವಿದ್ಯಾರ್ಥಿಯ ಕ್ರಿಯಾತ್ಮಕ ರಚನಾ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶವೇ, 'ಚಿತ್ರಕಲೆಯ ಕೌಶಲ!'

ಯೋಚಿಸಿ ಒಂದೊಂದು ಚಟುವಟಿಕೆಯನ್ನೂ ಪೂರ್ಣಗೊಳಿಸಲು ಸಹಕಾರಿಯಾಗುವುದೇ 'ಕಾರ್ಯ ಯೋಜನೆ!'





ವಿದ್ಯಾರ್ಥಿಗಳು ಹೊಸ ಚಟುವಟಿಕೆಗಳನ್ನು ತಿಳಿದುಕೊಳ್ಳಲು ಸಹಕರಿಸುವುದೇ 'ತಿಳಿದುಕೊಳ್ಳೋಣವೇ?'

ಎಲ್ಲರೂ ಒಂದು ಕಡೆ ಕಲೆತು ಮಾಡುವಂತಹ ಚಟುವಟಿಕೆಯಾಧಾರಿತ ಕಲಿಕೆಯೇ 'ಗುಂಪು ಚಟುವಟಿಕೆ'



ಹೊಸ ಪಠ್ಯಪುಸ್ತಕದಲ್ಲಿ ನವೀನವಾದ ಕಲಿಕಾ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಕಲಿಯಬೇಕಾದಂತಹ ಕಲಿಕಾ ಸಾಮರ್ಥ್ಯಗಳನ್ನು ಆಯಾಯ ಪಠ್ಯ ವಿಭಾಗದ ಕೊನೆಯಲ್ಲಿ ಕೊಡಲಾಗಿದೆ.





4th_Kannada_Reader_Term1.indd 10 12-07-2019 15:16:04

# ಪರಿವಿಡಿ


| ಕ್ರಮಸಂಖ್ಯೆ | ಶೀರ್ಷಿಕೆ | ಪುಟಸಂಖ್ಯೆ |
|---|---|---|
| 1. | ಕನ್ನಡದ ಕಂಪು (ಪದ್ಯ) | 1 |
| 2. | ತಾಳೆ ಮರದ ವಿಶೇಷತೆ | 6 |
| 3. | ಏಳು ರೆಕ್ಕೆಗಳ ಪಕ್ಷಿಯೂ ತೆನಾಲಿರಾಮನೂ | 17 |
| 4. | ಸುಗ್ಗಿ ಹಾಡು (ಪದ್ಯ) | 24 |
| 5. | ಗಾದೆಗಳು | 29 |
| 6. | ರಾಜನಾದ ಮೊಲ | 36 |
| 7. | ಸೋಮೇಶ್ವರ ಶತಕ (ಪದ್ಯ) | 44 |
| 8. | ಮುಂಜಾನೆಯ ಸಮಯ | 52 |
| 9. | ಕರಿಕಾಲ ಚೋಳನು ನಿರ್ಮಿಸಿದ ಅಣೆಕಟ್ಟು(ಕಲ್ಲಣೈ) | 60 |
| 10. | ಕಾಲಗಳು (ಪದ್ಯ) | 68 |
| 11. | ಎಲ್ಲಾರೂ ಹೀಗೆಯೇ ಇದ್ದರೆ | 73 |
| 12. | ರಾಮಣ್ಣನ ತೀರ್ಪು | 83 |
| 13. | ವಚನಗಳು (ಪದ್ಯ) | 87 |
| 14. | ಹಿಮಗಿರಿ ಪಯಣ | 90 |
| 15. | ಸತ್ಯವನ್ನು ಪರಿಶೋಧಿಸಬೇಕು | 96 |
| 16. | ತಿರುಕ್ಕುರಳ್ ಕಥೆಗಳು | 104 |




4th_Kannada_Reader_Term1.indd 11

12-07-2019 15:16:08

# ಪರಿವಿಡಿ


| ಕ್ರಮಸಂಖ್ಯೆ | ಶೀರ್ಷಿಕೆ | ಪುಟಸಂಖ್ಯೆ |
|---|---|---|
| 17. | ಹಸುವಿಗೆ ದೊರಕಿದ ನ್ಯಾಯ | 111 |
| 18. | ಕೆಲಸಕ್ಕೆ ತಕ್ಕ ಕೂಲಿ | 117 |
| 19. | ಅಂತರ್ಜಾಲ ವಿಸ್ಮಯ (ಪದ್ಯ) | 124 |
| 20. | ಮಾಲಿನ್ಯ ರಹಿತ ಜಗತ್ತನ್ನು ಸೃಷ್ಟಿಸೋಣ | 128 |
| 21 | ಕಾಡಿನಲ್ಲೊಂದು ಸಂಗೀತ ಸ್ಪರ್ಧೆ | 134 |
| 22. | ಅನ್ನದಾತ (ಪದ್ಯ) | 141 |
| 23. | ಗಣಕ ಯಂತ್ರದ ಪ್ರಪಂಚ | 145 |
| 24. | ಬೆಟ್ಟವೂ ಪ್ರತಿಧ್ವನಿಯೂ | 152 |
| 25. | ಸರ್ವಜ್ಞನ ತ್ರಿಪದಿಗಳು (ಪದ್ಯ) | 159 |
| 26. | ಗೆಳತಿಗೊಂದು ಪತ್ರ | 163 |
| 27. | ಚಂದ್ರಿಕಳ ಬುದ್ಧಿವಂತಿಕೆ | 168 |
| | ಶಬ್ದಾರ್ಥಗಳು | 175 |




4th_Kannada_Reader_Term1.indd 12 12-07-2019 15:16:11

# 1 ಕನ್ನಡದ ಕಂಪು



ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈ ಮರೆಯುವುದು ||1||

ಕನ್ನಡ ಕನ್ನಡ ಹಾ! ಸವಿಗನ್ನಡ !
ಬಾಳುವುದೇತಕೆ ನುಡಿ ಎಲೆ ಜೀವ !
ಸಿರಿಗನ್ನಡದಲ್ಲಿ ಕವಿತೆಯ ಹಾಡೆ
ಸಿರಿಗನ್ನಡದೇಳಿಗೆಯನು ನೋಡೆ
ಕನ್ನಡ ತಾಯಿಯ ಸೇವೆಯ ಮಾಡ ||2||

– ಕುವೆಂಪು

## ಸಾರಾಂಶ

ಕನ್ನಡವೆಂದರೆ ನನ್ನ ಮನವು ಕುಣಿದಾಡುತ್ತದೆ. ಕಿವಿಯು ನಿಮಿರುತ್ತದೆ. ಆಕಾಶದಲ್ಲಿ ಕಾಣುವ ಕಾಮನ ಬಿಲ್ಲನ್ನು ಕಂಡ ಕವಿ ಮನಸ್ಸು ಮೈ ಮರೆಯುತ್ತದೆ. ಕನ್ನಡ ಭಾಷೆಯನ್ನು ಆಡುತ, ಕಲಿಯುತ, ಸಿರಿಗನ್ನಡ ಕವಿತೆಯನ್ನು ಹಾಡುವ ಜೀವನವನ್ನು ಅನುಭವಿಸೋಣವೆನ್ನುತ್ತಾರೆ ಕವಿ. ನನ್ನ ಜೀವವಿರುವವರೆಗೂ ಕನ್ನಡ ತಾಯಿಯ ಸೇವೆಯ ಮಾಡುತ್ತೇನೆ ಎಂದು ಕವಿ ಕುವೆಂಪು ಅವರು ಈ ಕವಿತೆಯಲ್ಲಿ ಹೇಳುತ್ತಾರೆ.



4th_Kannada_Reader_Term1.indd 1 12-07-2019 15:16:15

## ಬನ್ನಿ, ಮಾತಾಡೋಣ!



- ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ಸಂತೋಷಿಸಿರಿ.
- ಭಾಷೆಯ ವಿಶೇಷತೆಯನ್ನು ಹೇಳುವ ಬೇರೆ ಪದ್ಯಗಳನ್ನು ತಿಳಿದುಕೊಂಡು ಹಾಡಿರಿ.




ನಾವು ಬೆಳೆಯವಾಗ ನಮ್ಮೊಂದಿಗೆ ಸೇರಿ ಕನ್ನಡ ಭಾಷೆಯೂ ಬೆಳೆಯುವುದು.
ಹೇಗೆ? ಚರ್ಚಿಸಿರಿ
ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿ.

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯೋಣವೇ?

01 ಕುಣಿದು + ಆಡುವುದು – ಎಂಬುದನ್ನು ಸೇರಿಸಿ ಬರೆದಾಗ ಸಿಗುವ ಪದ ..........................

ಅ) ಕುಣಿದಾಡುವುದು ಆ) ಕುಣಿಕುಣಿದಾಡುವುದು

ಇ) ಕುಣಿಯುವುದೆಲ್ಲ ಈ) ಕುಣಿಯುವುದಿಲ್ಲ

02 ಸವಿ + ಕನ್ನಡ – ಎಂಬುದನ್ನು ಸೇರಿಸಿ ಬರೆದಾಗ ಸಿಗುವ ಪದ ..........................

ಅ) ಸವಿಕನ್ನಡ ಆ) ಸವಿಗನ್ನಡ

ಇ) ಸವಿಯಾದ ಕನ್ನಡ ಈ) ಸವಿಯದ ಕನ್ನಡ

03 ಬಾಳುವುದೇತಕೆ – ಎಂಬ ಪದವನ್ನು ಬಿಡಿಸಿ ಬರೆದಾಗ ____________

ಅ) ಬಾಳು + ಏತಕೆ ಆ) ಬಾಳುವುದೆಲ್ಲ + ಏತಕೆ

ಇ) ಬಾಳುವುದು + ಏತಕೆ ಈ) ಬಾಳು + ವುದೇತಕೆ

04 ಸಿರಿಗನ್ನಡ – ಎಂಬುದನ್ನು ಬಿಡಿಸಿ ಬರೆದಾಗ ಸಿಗುವ ಪದ ____________

ಅ) ಸಿರಿ + ಕನ್ನಡ ಆ) ಸಿರಿಯ + ಕನ್ನಡ

ಇ) ಸಿರಿ + ಗನ್ನಡ ಈ) ಸಿರಿಯು + ಕನ್ನಡ

05 ಏಳಿಗೆ – ಎಂಬ ಪದದ ಅರ್ಥ ____________

ಅ) ಏಳುವುದು ಆ) ಅಭಿವೃದ್ಧಿ

ಇ) ಏಳದಿರುವುದು ಈ) ಹೇಳಿಕೆ



4th_Kannada_Reader_Term1.indd 2 12-07-2019 15:16:16

## ಪ್ರಶ್ನೆಗಳಿಗೆ ಉತ್ತರಿಸಿ

01 ಕನ್ನಡವೆಂದರೆ ನಮ್ಮ ಮನಸ್ಸು ಹೇಗಾಗುತ್ತದೆ ?

02 ಕಾಮನಬಿಲ್ಲನು ನೋಡಿದ ಕವಿಯ ಮನಸ್ಸು ಹೇಗಿರುತ್ತದೆ ?

03 ಕನ್ನಡದ ಏಳಿಗೆಯನ್ನು ಕುರಿತು ಕವಿತೆಯನ್ನು ಹೇಗೆ ಹಾಡಬೇಕು ?

ಈ ಪದ್ಯದಲ್ಲಿ 'ಕ' ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಆರಿಸಿ ಬರೆಯಿರಿ.

ಈ ಪದ್ಯದಲ್ಲಿ ಕಂಡು ಬರುವ ಪ್ರಾಸ ಪದಗಳನ್ನು ಬರೆಯಿರಿ.



## ಕಾರ್ಯ ಯೋಜನೆ

- ಭಾಷೆಯ ವಿಶೇಷತೆಯನ್ನು ಕುರಿತು ಹೇಳುವ ಎರಡು ಪದ್ಯಗಳನ್ನು ಓದಿ, ಹಾಡಿರಿ.



4th_Kannada_Reader_Term1.indd 3 12-07-2019 15:16:16

## ಪದ್ಯವನ್ನು ಪೂರ್ಣಗೊಳಿಸೋಣ



ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಹಲವು ಬಣ್ಣವ .....................(ದೇಹದ ತುಂಬಾ)

ಬಣ್ಣ ಬಣ್ಣದ ಬೊಟ್ಟನು ತೊಟ್ಟ ಚಿಟ್ಟೆ...

ಹೂವಿಂದೂವಿಗೆ ಹಾರುವ ಚಿಟ್ಟೆ

ನೋಡುವ ಕಣ್ಣಿಗೆ .....................(ನೀ ಕನಸಾಗಿ ಬಿಟ್ಟೆ)

## ಪದಗಳನ್ನು ರಚಿಸೋಣವೇ?




1. ....................................................
2. ....................................................
3. ....................................................
4. ....................................................



4th_Kannada_Reader_Term1.indd 4 12-07-2019 15:16:18

## ಬಣ್ಣವನ್ನು ಹಾಕಿ ಆನಂದಿಸೋಣ



## ತಿಳಿದುಕೊಳ್ಳೋಣವೇ?



ಕನ್ನಡ ಕುಲಪುರೋಹಿತ, ಕನ್ನಡರತ್ನ ಎಂಬಂತೆ ಕನ್ನಡ ಎಂಬ ಪದವನ್ನು ಬಳಸಿ ಬಿರುದುಗಳನ್ನೂ, ಹೆಸರುಗಳನ್ನೂ ರಚಿಸಬಹುದು.



# 2 ತಾಳೆ ಮರದ ವಿಶೇಷತೆ

ಸಂಜೆ ಶಾಲೆ ಮುಗಿಸಿಕೊಂಡು ಸುಧಾಕರ ಮತ್ತು ಲಕ್ಷ್ಮಿಯೂ ಸಂತೋಷದಿಂದ ಮಾತನಾಡಿಕೊಂಡು ಮನೆಗೆ ಹೋಗುತ್ತಿದ್ದರು. ಮಾರ್ಗದಲ್ಲಿ ಚೆಂಡಿನಂತೆ ಕಪ್ಪು ಬಣ್ಣದ ಹಣ್ಣೊಂದು ಬಿದ್ದಿತ್ತು. ಅದನ್ನು ಕೈಯಲ್ಲಿ ತೆಗೆದುಕೊಂಡು ನೋಡಿದರು. ಅದೇನೆಂದು ಅವರಿಗೆ ತಿಳಿಯಲಿಲ್ಲ. ಅವರು, ಅದೇ ಮಾರ್ಗದಲ್ಲಿ ನಡೆದು ಬರುತ್ತಿದ್ದ ಅಜ್ಜನ ಬಳಿ ಓಡಿ ಬಂದು ಕೇಳಿದರು.

**ಸುಧಾಕರ** : ಅಜ್ಜ, ಅಜ್ಜ...! ಇದು ಯಾವ ಹಣ್ಣು ?

**ಅಜ್ಜ** : ಇದೇ ! ಇದು ತಾಳೆ ಮರದ ಹಣ್ಣು. ಇದನ್ನು ನುಂಗು, ತಾಟಿನುಂಗು ಎಂದು ಕೂಡ ಕರೆಯುತ್ತಾರೆ. ತಾಳೆ ಮರವನ್ನು ತಾಟಿಮರ, ತಾಟಿವೃಕ್ಷ, ತಾಡವೃಕ್ಷ, ಪಣಮರಂ ಎಂದೂ ಕರೆಯುತ್ತಾರೆ.

**ಸುಧಾಕರ** : ಈ ಹಣ್ಣನ್ನು ತಿನ್ನಬಹುದೇ ಅಜ್ಜ?

**ಅಜ್ಜ** : ಹುಂ! ತಿನ್ನಬಹುದು. ಇದು ತುಂಬಾ ರುಚಿಯಾಗಿರುತ್ತದೆ. ಜೊತೆಗೆ ಸತ್ವದಿಂದ ಕೂಡಿರುತ್ತದೆ.

**ಸುಧಾಕರ** : ಈ ಹಣ್ಣಿನ ಬಗ್ಗೆ ತಿಳಿದುಕೊಳ್ಳಲು ತುಂಬಾ ಆಸೆಯಾಗಿದೆ ಅಜ್ಜ.



**ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸಾಮೂಹಿಕ ಪ್ರಜ್ಞೆ ಮೂಡಿಸುವ ಸುದ್ದಿಗಳ ಬಗ್ಗೆ ತಿಳಿಯುವುದು**



4th_Kannada_Reader_Term1.indd 6 12-07-2019 15:16:19

**ಅಜ್ಜ** : ಹೇಳುತ್ತೇನೆ, ಕಂದಾ... ತಾಳೆ ಹಣ್ಣು, ತಾಳೆ ಮರದಲ್ಲಿ ಕಾಯಿಯಾಗಿ ಹಣ್ಣಾಗುತ್ತದೆ. ತಾಳೆ ಮರ ತುಂಬ ಎತ್ತರಕ್ಕೆ ಬೆಳೆಯುತ್ತದೆ. ಇದರ ಬೇರು ಭೂಮಿಯ ತಳಭಾಗದಲ್ಲಿ ಇಳಿಯುತ್ತದೆ. ಮಧ್ಯಭಾಗ ಕಾಂಡದಿಂದಲೂ, ಮೇಲ್ಭಾಗ ಗರಿಗಳಿಂದಲೂ, ಹಣ್ಣಿನ ಗೊಂಚಲುಗಳಿಂದಲೂ, ಮಟ್ಟೆಗಳಿಂದಲೂ, ಚಿಕ್ಕ ಗರಿಗಳಿಂದಲೂ ಹಾಗೂ ಇತರ ಭಾಗಗಳಿಂದಲೂ ಕೂಡಿರುತ್ತದೆ. ಈ ಮರದ ಒಂದೊಂದು ಭಾಗವೂ ಉಪಯೋಗದಿಂದ ಕೂಡಿರುತ್ತದೆ. ಹಾಗಾಗಿ ಈ ಮರವು ವಿಶೇಷತೆಯನ್ನು ಪಡೆದುಕೊಂಡಿದೆ.



**ಲಕ್ಷ್ಮಿ** : ಆಹಾ...! ತಾಳೆ ಮರವು ಇಷ್ಟೊಂದು ವಿಶೇಷತೆಯಿಂದ ಕೂಡಿದೆಯೇ? ನಾನು ತಾಳೆ ಹಣ್ಣನ್ನು ತಿಂದಿರುವೆ. ಈ ತಾಳೆ ಮರದಿಂದ ಇನ್ನೂ ಬೇರೆ ಯಾವ ಯಾವ ಪ್ರಯೋಜನಗಳಿವೆ ಅಜ್ಜಾ?



**ಅಜ್ಜ** : ತಾಳೆಹಣ್ಣು ಮತ್ತು ತಾಳೆ ಗೆಣಸನ್ನು ಆಹಾರವನ್ನಾಗಿ ಉಪಯೋಗಿಸುತ್ತಾರೆ. ತಾಳೆಯ ಗರಿಗಳಿಂದ ಬುಟ್ಟಿಗಳನ್ನೂ, ಚಾಪೆಗಳನ್ನೂ ಹಾಗೂ ತಾಳೆರಸವನ್ನೂ, ತಾಟಿಬೆಲ್ಲವನ್ನೂ ತಯಾರಿಸಲಾಗುವುದು.



**ಸುಧಾಕರ** : ಇದು ಇಷ್ಟೊಂದು ಪ್ರಯೋಜನಕಾರಿಯಾಗಿದೆಯೇ?

**ಅಜ್ಜ** : ಹೌದು, ಸುಂದರ. ಇಷ್ಟು ಮಾತ್ರವಲ್ಲದೆ, ನಮ್ಮ ಹಿರಿಯರು ಪುರಾತನ ಸಾಹಿತ್ಯ ಕೃತಿಗಳನ್ನು ತಾಳೆ ಓಲೆ ಅಥವಾ ಗರಿಗಳ ಮೇಲೆ ಬರೆಯುತ್ತಿದ್ದರು. ಇದನ್ನು ತಾಳೆಯೋಲೆ, ತಾಡಪತ್ರ ಎಂದೂ ಕರೆಯಲಾಗುತ್ತಿತ್ತು..



**ಲಕ್ಷ್ಮಿ** : ಹಾಗೇನು ?

**ಅಜ್ಜ** : ತಾಳೆ ಮರದ ಬೇರು ನೀರನ್ನು ಹೀರಿಕೊಳ್ಳುವ ಗುಣದಿಂದ ಕೂಡಿರುತ್ತದೆ. ಇದು ಅಂತರ್ಜಲವನ್ನು ಹೆಚ್ಚಿಸಲು ಕಾರಣವಾಗುತ್ತದೆ.

**ಸುಧಾಕರ** : ಅಬ್ಬಬ್ಬಾ...! ಈ ಮರಕ್ಕೆ ಇಷ್ಟೊಂದು ವಿಶೇಷತೆಗಳಿವೆಯೇ?





ಅಜ್ಜ : ತಾಳೆಮರದಿಂದ ತಾಳೆ ಗರಿಗಳ ಬೀಸಣಿಕೆ, ಗಾಳಿಗಿರುಕ, ಗೊಂಬೆಗಳು, ಚಾಪೆ, ತಟ್ಟಿ, ಗಾಡಿ ಮೊದಲಾದವುಗಳನ್ನು ತಯಾರಿಸುತ್ತಿದ್ದರು. ಇದರಿಂದ ಹಲವಾರು ಆಟಗಳನ್ನೂ ಹಿಂದಿನ ಕಾಲದ ಜನರು ಆಡುತ್ತಿದ್ದರು.

ಲಕ್ಷ್ಮಿ : ಈ ರೀತಿ ಉಪಯೋಗವಾಗುವ ತಾಳೆ ಮರವನ್ನು ಈಗ ನೋಡಲು ಸಾಧ್ಯವಿಲ್ಲವೇ ಅಜ್ಜ? !



ಅಜ್ಜ : ಸರಿಯಾಗಿ ಕೇಳಮ್ಮ... ತಮಿಳುನಾಡಿನ ಪ್ರಕೃತಿ ಸಂಪತ್ತನ್ನು ಹೆಚ್ಚಿಸುವ ಈ ಮರಗಳನ್ನು ಇಂದಿನ ಜನರು ಸೌದೆಗಳಿಗಾಗಿ ಕಡಿಯುತ್ತಿದ್ದಾರೆ. ಈ ಮರಗಳನ್ನು ನಾಶ ಮಾಡುತ್ತಿರುವುದರಿಂದ ಪಕ್ಷಿಗಳ ವಾಸಸ್ಥಳಕ್ಕೆ ತೊಂದರೆಯಾಗಿದೆ. 'ಮರಗಳಿಲ್ಲದೆ ಮನುಷ್ಯರಿಲ್ಲ' ಎಂಬುದನ್ನು ತಿಳಿದು ನಾವೆಲ್ಲರೂ ತಾಳೆ ಮರಗಳನ್ನು ಕಡಿಯುವುದನ್ನು ತಡೆಗಟ್ಟಬೇಕು..



ಸುಧಾಕರ : ತಾಳೆ ಮರದ ಬಗ್ಗೆ ಹಲವು ವಿಚಾರಗಳನ್ನು ನಿಮ್ಮಿಂದ ನಾವು ತಿಳಿದುಕೊಂಡೆವು ಅಜ್ಜ!



ಅಜ್ಜ : ಇದರ ಬಗ್ಗೆ ತಿಳಿದುಕೊಳ್ಳುವುದು ಮಾತ್ರವಲ್ಲದೆ, ತಾಳೆ ಮರದ ವಿಶೇಷತೆಯನ್ನು ನಿಮ್ಮ ಸ್ನೇಹಿತರಿಗೂ ಇತರರಿಗೂ ತಿಳಿಸಬೇಕು. .

ಇಬ್ಬರೂ : ಖಂಡಿತವಾಗಿಯೂ ತಿಳಿಸುತ್ತೇವೆ, ಅಜ್ಜ.



ಅಜ್ಜ : ತುಂಬಾ ಸಂತೋಷ ಮಕ್ಕಳೇ. ದ್ರಾವಿಡರ ಸಂಸ್ಕೃತಿಯನ್ನು ತಿಳಿಸುವ, ಈ ತಾಳೆಮರವನ್ನು ತಮಿಳುನಾಡು ಸರ್ಕಾರವು, 'ರಾಜ್ಯ ಮರ'ವೆಂದು ಘೋಷಿಸಿದೆ. ಇದರ ವಿಶೇಷತೆಯನ್ನು ತಿಳಿದು ನಾವೆಲ್ಲರೂ ತಾಳೆ ಮರದ ಬೀಜಗಳನ್ನು ಸಂಗ್ರಹಿಸಿ ಕೊಳ, ಕೆರೆ ಮುಂತಾದ ಕಡೆಗಳಲ್ಲಿ ನೆಟ್ಟು ಬೆಳೆಸುವುದು ಅಗತ್ಯವಾಗಿದೆ.



ಇಬ್ಬರೂ : ಹಾಗೆಯೇ ಮಾಡುತ್ತೇವೆ. 'ತಾಳೆ ಮರ ಬೆಳೆಸೋಣ. ಫಲ ಪಡೆಯೋಣ'. ತುಂಬ ಧನ್ಯವಾದಗಳು ಅಜ್ಜ.

ಅಜ್ಜ : ಸಂತೋಷ ಮಕ್ಕಳೇ. ಹೋಗಿ ಬನ್ನಿ!



4th_Kannada_Reader_Term1.indd 8 12-07-2019 15:16:21

# ತಮಿಳುನಾಡಿನ ಚಿಹ್ನೆಗಳು

## ತಿಳಿದುಕೊಳ್ಳೋಣ

**ಚಿಹ್ನೆ**

ಶ್ರೀವಿಲ್ಲಿಪುತ್ತೂರು ದೇವಸ್ಥಾನದ ಗೋಪುರ

**ಪಕ್ಷಿ**



ಮರಗದ ಪಕ್ಷಿ

**ಹಾಡು**

ನೀರಾರುಂ
ಕಡಲುಡುತ್ತ

(ತಮಿಳ್ ತಾಯ್ ವಾಳ್ತು)

**ಹೂ**



ಸೆಂಗಾಂದಳ್ ಹೂ

**ನೃತ್ಯ**



ಭರತನಾಟ್ಯ

**ಮರ**



ತಾಳೆಮರ

**ಪ್ರಾಣಿ**



ವರೈಆಡು

**ಕ್ರೀಡೆ**



ಕಬಡ್ಡಿ



4th_Kannada_Reader_Term1.indd 9 12-07-2019 15:16:25

## ಬನ್ನಿ, ಮಾತಾಡೋಣ!



ಮರವನ್ನು ಬೆಳೆಸುವುದರಿಂದ ನಾವು ಪಡೆಯುವ ಪ್ರಯೋಜನಗಳ ಬಗ್ಗೆ ಚರ್ಚಿಸುವುದು..



ಚಿಂತಿಸೋಣವೇ ?

ಗಿಳಿಯ ಸಾಕಿದೆ, ಹಾರಿ ಹೋಯಿತು.
ಅಳಿಲು ಸಾಕಿದೆ, ಓಡಿ ಹೋಯಿತು.
ಮರವನ್ನು ಬೆಳೆಸಿದೆ, ಎರಡೂ ತಿರುಗಿ ಬಂದವು.
– ಡಾ. ಅಬ್ದುಲ್ ಕಲಾಂ

## ಓದೋಣ! ಚಿಂತಿಸೋಣ! ಬರೆಯೋಣ!

### ಪದವನ್ನು ಆರಿಸಿ ಬರೆಯೋಣವೇ ?

01 'ಬುದ್ಧಿವಂತ' – ಎಂಬ ಪದದ ಅರ್ಥ ___________

ಅ) ಜಾಣ ಆ) ಪೆದ್ದ
ಇ) ದಡ್ಡ ಈ) ನಿಪುಣ

02 'ಮೇಲೆ' ಎಂಬ ಪದದ ವಿರುದ್ಧ ಪದ ___________

ಅ) ಕೆಳಗೆ ಆ) ಎತ್ತರ
ಇ) ನಡುವೆ ಈ) ದೂರ

03 'ಬಿದ್ದ' – ಎಂಬುದರ ವಿರುದ್ಧ ಪದ ___________

ಅ) ಜಾರಿದ ಆ) ನೆಗೆದ
ಇ) ಎದ್ದ ಈ) ಓಡಿದ

04 'ಕವಲೊಡೆದು' – ಎಂಬುದನ್ನು ಬಿಡಿಸಿ ಬರೆದಾಗ ಸಿಗುವ ಪದ ___________

ಅ) ಕವಲು + ಹೊಡೆದು ಆ) ಕವಲು + ಒಡೆದು
ಇ) ಕವಲಿನ + ಒಡೆದು ಈ) ಕವ + ಲೊಡೆದು



4th_Kannada_Reader_Term1.indd 10 12-07-2019 15:16:25

05 'ಎಲ್ಲೆಲ್ಲು' – ಎಂಬುದನ್ನು ಬಿಡಿಸಿ ಬರೆದಾಗ ಸಿಗುವ ಪದ ______________

ಅ) ಎಲ್ಲು + ಎಲ್ಲಿ  ಆ) ಎಲ್ಲಿ + ಎಲ್ಲು

ಇ) ಎಲ್ಲಿಯ + ಎಲ್ಲು  ಈ) ಎಲ್ಲಿ + ಎಲಿ

06 ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ

ಅ) ರಸ್ತೆಯಲ್ಲಿ = ............................ + ............................

ಆ) ಎಳೆಗರು = ............................ + ............................

## ಪ್ರಶ್ನೆಗಳಿಗೆ ಉತ್ತರಿಸಿ

01 ತಾಳೆ ಮರದಿಂದ ದೊರೆಯುವ ಆಹಾರ ಪದಾರ್ಥಗಳು ಯಾವುವು ?

02 ಚಿಕ್ಕ ಮಕ್ಕಳು ಆಟವಾಡಲು ತಾಳೆ ಮರವು ಹೇಗೆ ಸಹಕಾರಿಯಾಗಿದೆ ?

03 ತಾಳೆಮರವನ್ನು ನಾವು ಹೇಗೆ ಕಾಪಾಡಬಹುದು ?

04 ತಾಳೆಮರದ ಉಪಯೋಗಗಳ ಬಗ್ಗೆ ನಿಮಗೆ ತಿಳಿದಿರುವ ಮಾಹಿತಿಗಳನ್ನು ನೀವು ಹೇಗೆ ಬಳಸಿಕೊಳ್ಳುವಿರಿ? ತಿಳಿಸಿ.

## ನಿಮ್ಮ ಮನೆಯಲ್ಲಿ ಬಳಸುವ ಮರದ ವಸ್ತುಗಳನ್ನು ಪಟ್ಟಿ ಮಾಡಿರಿ.





4th_Kannada_Reader_Term1.indd 11 12-07-2019 15:16:25

# ಕೂಡಿ ಮಾಡೋಣ

## ಅಕ್ಷರಗಳಿಗೆ ತಕ್ಕಂತೆ ಸರಿಯಾದ ಚಿತ್ರಗಳಿಗೆ ಗೆರೆಹಾಕಿ

01 ಆ

02 ಕೈ

03 ಹೂ

04 ನಾ

05 ನೊ

06 ಕಾ















4th_Kannada_Reader_Term1.indd 12 12-07-2019 15:16:28

## ಭಾಷೆಯೊಡನೆ ಆಟವಾಡು



**ಒಂದೇ ಅರ್ಥವನ್ನು ಕೊಡುವ ಪದಗಳನ್ನು ಕಂಡು ಹಿಡಿದು ವೃತ್ತ ಹಾಕಿ.**

01 ಚಂದ್ರ : ಸೂರ್ಯ, ಶಶಿ, ಭೂಮಿ, ಸೋಮ, ನಕ್ಷತ್ರ, ತಿಂಗಳು

02 ಅಮ್ಮ : ಮಾತೆ, ಅಜ್ಜಿ, ಜನನಿ, ಅಕ್ಕ, ತಾಯಿ, ತಂಗಿ, ಅವ್ವ.

03 ಭೂಮಿ : ನೆಲ, ಇಳೆ, ಧರಣಿ, ಗಗನ, ಕಳೆ, ನಳ, ಪೃಥ್ವೀ, ಅವನಿ, ಜಲ.

04 ಜನಸಂದಣಿ : ಜನರಗುಂಪು, ಅಂಗಡಿಬೀದಿ, ಇಕ್ಕಟ್ಟು, ಜನಸಮೂಹ, ಅನೇಕ ಜನರು, ವ್ಯಕ್ತಿ, ಮಗು.

## ಕಾರ್ಯ ಯೋಜನೆ

### ಉದ್ದೇಶ

ನಮ್ಮ ಜಿಲ್ಲೆಯ ಪಂಚಾಯತ್ ಯೂನಿಯನ್ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಶಿಕ್ಷಕರು ಊರಿನ ಯುವಕರೊಡನೆ ಸೇರಿ ಶಾಲೆಯ ಆವರಣವನ್ನೂ, ಗ್ರಾಮವನ್ನೂ ಹಸಿರು ವನವಾಗಿ ಬದಲಾಯಿಸಲು ಗಿಡಮರಗಳನ್ನು ನೆಟ್ಟು ಬೆಳೆಸುವಂತೆ ತೀರ್ಮಾನಿಸಲಾಯಿತು.

### ಯೋಜನಾ ಕಾರ್ಯ

ಮಳೆ ಬಿದ್ದ ಮರುದಿನ ಮರಗಿಡಗಳನ್ನು ನೆಡುವುದಾಗಿ ತೀರ್ಮಾನಿಸಲ್ಪಟ್ಟಿತ್ತು. ಅದರೊಳಗೆ ಅಗತ್ಯವಾದ ಮರಗಿಡಗಳನ್ನು ಸ್ವಯಂ ಸೇವಕ ಸಮಿತಿಯಿಂದಲೂ, ಸರ್ಕಾರದ ಅರಣ್ಯ ಇಲಾಖೆಯಿಂದಲೂ ಪಡೆದುಕೊಳ್ಳುವುದಾಗಿಯೂ, ಅಗತ್ಯವಾದ ಗುಂಡಿಗಳನ್ನು ತೆಗೆದು ತಯಾರು ಮಾಡಿಕೊಂಡಿರುವಂತೆಯೂ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲ್ಪಟ್ಟಿತು.

### ಕಾರ್ಯ ರೂಪ

ಮಳೆ ಬಿದ್ದ ಮರುದಿನ ಶಾಲೆಯ ಆವರಣದಲ್ಲಿ ಬೇಕಾಗುವಷ್ಟು ಗುಂಡಿಯನ್ನು ತೆಗೆದು ಅದರೊಳಗೆ ಗೊಬ್ಬರವನ್ನು ಹಾಕಿದರು. ಫಲ ಕೊಡುವ ಬೇವು, ಹೊಂಗೆ ಮುಂತಾದ ಸಸಿಗಳನ್ನು ನೆಟ್ಟರು. ಗಿಡದ ರಕ್ಷಣೆಗಾಗಿ ಸುತ್ತಲೂ ಬಲೆಯನ್ನು ನಿರ್ಮಿಸಲಾಯಿತು. ರಸ್ತೆಯ ಎರಡು ಬದಿಗಳಲ್ಲೂ, ಕೊಳ ಮತ್ತು ಕೆರೆಗಳ ಬದಿಗಳಲ್ಲೂ ತಾಳೆ ಮರದ ಬೀಜಗಳನ್ನು ನೆಟ್ಟರು. ಹಾಗೆಯೇ ಸ್ವಯಂ ಸೇವಕ ಸಮಿತಿಯ ಮೂಲಕ ಎಲ್ಲ ವಿದ್ಯಾರ್ಥಿಗಳಿಗೂ ಗಿಡಗಳನ್ನು ಕೊಡಲಾಯಿತು. ಅವುಗಳನ್ನು ನೆಟ್ಟು, ಉಳಿಸಿ, ಬೆಳೆಸಿದವರಿಗೆ ಬಹುಮಾನಗಳನ್ನು ಕೊಡುವುದಾಗಿ ತಿಳಿಸಲಾಯಿತು.



4th_Kannada_Reader_Term1.indd 13 12-07-2019 15:16:29

## ಮೌಲ್ಯಮಾಪನ:

ಯೋಜನೆಯಂತೆ ಗಿಡ ನೆಡುವ ಕಾರ್ಯವನ್ನು ಪೂರ್ಣಗೊಳಿಸಲಾಯಿತು. ಎಲ್ಲರಿಗೂ ಮನಸ್ಸಿಗೆ ಸಮಾಧಾನವಾಯಿತು. ಈ ಕಾರ್ಯದಿಂದ ಬೇಗ ಹಸಿರು ಕ್ರಾಂತಿ ಉಂಟಾಗುವಂತೆ ಮಾಡುವುದು, ಹಾಗೆಯೇ ಮುಂಬರುವ ವರ್ಷಗಳಲ್ಲಿ ಮುಂಚಿತವಾಗಿಯೇ ಯೋಜನೆಯನ್ನು ಹಾಕಿಕೊಂಡು ಗಿಡಮರಗಳನ್ನು ಬೆಳೆಸುವಂತೆ ತೀರ್ಮಾನಿಸಲಾಯಿತು.

ಇದೇ ರೀತಿ ನೀವೂ ಗಿಡಗಳನ್ನು ನೆಟ್ಟು ಬೆಳೆಸಬಹುದಲ್ಲವೇ!

## ಕಲೆ ಮತ್ತು ಕರಕೌಶಲ್ಯ

### ಮಾಡುವ ವಿಧಾನ

**ಬೇಕಾಗುವ ವಸ್ತುಗಳು:**

ತಾಳೆ ಮರದ ಗರಿಗಳು ಅಗತ್ಯವಾದಷ್ಟು.

ತಾಳೆ ಮರದ ಗರಿಗಳಲ್ಲಿನ ಗಟ್ಟಿಯಾದ ದಿಂಡನ್ನು ತೆಗೆದು, ಗರಿಗಳನ್ನು ಬೇರ್ಪಡಿಸಿಕೊಳ್ಳಬೇಕು. ಹತ್ತು ಗರಿಗಳನ್ನು ತೆಗೆದುಕೊಂಡು ನೀಳವಾಗಿ, ಒತ್ತೊತ್ತಾಗಿ ಜೋಡಿಸಿಕೊಳ್ಳಬೇಕು. ಬೇರೆ ಗರಿಗಳನ್ನು ತೆಗೆದುಕೊಂಡು ಅಡ್ಡಲಾಗಿ, ಮೇಲೆ ಕೆಳಗೆ ಬರುವಂತೆ ನೀಳವಾಗಿರುವ ಗರಿಗಳೊಂದಿಗೆ ಜೋಡಿಸಿ ಹೆಣೆಯಬೇಕು. ಹಾಗೆಯೇ ಹೆಣೆದ ಗರಿ ಮುಗಿಯುತ್ತಿದ್ದಂತೆ ಒಂದೊಂದಾಗಿ ಗರಿಗಳನ್ನು ಸೇರಿಸಿಕೊಳ್ಳುತ್ತಾ ಹೋಗಬೇಕು. ಗರಿ ಮುಗಿದ ನಂತರ ಅಂದವಾದ ಚಾಪೆ ತಯಾರಾಯಿತು.





## ಕಾರ್ಯ ಯೋಜನೆ

ತಾಳೆ ಗರಿಗಳನ್ನು ಉಪಯೋಗಿಸಿ ಬೀಸಣಿಕೆ, ಬೊಂಬೆಗಳು, ಪೆಟ್ಟಿಗೆ ಹಾಗೂ ಇನ್ನಿತರ ವಸ್ತುಗಳನ್ನು ತಯಾರಿಸಿ.

## ವ್ಯಾಕರಣ — ಲಿಂಗಗಳು

ಲಿಂಗಗಳಲ್ಲಿ ಮೂರು ವಿಧಗಳು. ಅವುಗಳೆಂದರೆ,.

### ಪುಲ್ಲಿಂಗ

01



ಪುರುಷರನ್ನು ಸೂಚಿಸುವ ನಾಮಪದಗಳಿಗೆ ಪುಲ್ಲಿಂಗ ಎಂದು ಹೆಸರು. ಉದಾಹರಣೆಗೆ ರಾಮು, ಹುಡುಗ, ಅವನು, ಮಣಿಕಂಠ, ನಿರಂಜನ್, ಶ್ರೀವತ್ಸ ಇತ್ಯಾದಿ.

### ಸ್ತ್ರೀಲಿಂಗ

02



ಸ್ತ್ರೀಯರನ್ನು ಸೂಚಿಸುವ ನಾಮಪದಗಳಿಗೆ ಸ್ತ್ರೀಲಿಂಗ ಎಂದು ಹೆಸರು. ಉದಾಹರಣೆಗೆ: ಕಮಲ, ಸೀತಾ, ಲಕ್ಷ್ಮಿ, ಶಾರದಾ, ಅವಳು, ಆಕೆ, ಈಕೆ, ಇವಳು ಇತ್ಯಾದಿ.

### ನಪುಂಸಕಲಿಂಗ

03

ಗಂಡು ಅಥವಾ ಹೆಣ್ಣು ಎಂಬುದನ್ನು ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಾಗದಿರುವ ನಾಮಪದಗಳನ್ನು ನಪುಂಸಕ ಲಿಂಗ ಎನ್ನುವರು. ಉದಾಹರಣೆ: ಮರ, ಮಕ್ಕಳು, ಮಗು, ಪುಸ್ತಕ, ಪೆನ್ನು, ನಾಯಿ, ಗಿಳಿ, ಮನೆಗಳು ಇತ್ಯಾದಿ.









4th_Kannada_Reader_Term1.indd 15 12-07-2019 15:16:31

**ಕೆಳಗೆ ಕೊಟ್ಟಿರುವ ಪದಗಳನ್ನು ವರ್ಗೀಕರಿಸಿ.**

ಅವಳು, ಅಧ್ಯಕ್ಷೆ, ಹೊರಟರು, ಕೇಳಿದಳು, ಓದಿದನು, ಬಂದಿತು, ಹಾರಿತು, ಓಡಿದರು, ಬರೆದನು, ಆಟವಾಡಿದರು, ಹಾಡಿದಳು, ಹಾಸ್ಯಗಾರ, ನಾಟ್ಯಗಾರ, ತಿಂದಳು, ಕಲೆಗಾರ, ತರಗತಿ, ಕಲ್ಲುಗಳು, ಕಲಾವಿದೆ, ಶಿಕ್ಷಕ, ವಿದ್ಯಾರ್ಥಿಗಳು, ಮನೆ, ನಟಿ, ಪೋಷಕರು, ತಂಗಿ, ಅಣ್ಣ, ಮರಗಳು, ಗಿಡ, ಹೂಗಳು, ಶಾಲೆ, ಮಗು, ಪುಸ್ತಕ.

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ | ಏಕವಚನ | ಬಹುವಚನ |
|---|---|---|---|---|
| | | | | |

**ಹೊಂದಿಸಿ**




01 ....................

02 ....................

03 ....................

04 ....................

05 ....................



4th_Kannada_Reader_Term1.indd 16 12-07-2019 15:16:31

# 3 ಏಳು ರೆಕ್ಕೆಗಳ ಪಕ್ಷಿಯೂ ತೆನಾಲಿರಾಮನೂ

ವಿಜಯನಗರ ಸಾಮ್ರಾಜ್ಯ ತುಂಬಾ ಸಂಭ್ರಮದಿಂದ ಕೂಡಿತ್ತು. ವಿಜಯನಗರದ ಅರಸನಾದ ಶ್ರೀಕೃಷ್ಣದೇವರಾಯನು ಒಂದು ಸಮಾರಂಭವನ್ನು ಏರ್ಪಡಿಸಿದನು. ಅದರಲ್ಲಿ ಭಾಗವಹಿಸಲು ಪಕ್ಕದ ರಾಜ್ಯದ ವಿಜಯವರ್ಧನನೂ ಬಂದಿದ್ದನು. ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಆ ದಿನ ಸಂಜೆ ಅರಸನಾದ ಶ್ರೀಕೃಷ್ಣದೇವರಾಯನೂ, ಪಕ್ಕದ ರಾಜ್ಯದ ಅರಸನಾದ ವಿಜಯವರ್ಧನನೂ ಅರಮನೆಯ ತೋಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆಗ ವಿಜಯವರ್ಧನನು ಕೃಷ್ಣದೇವರಾಯನೊಡನೆ, 'ನಿಮ್ಮ ಆಸ್ಥಾನದಲ್ಲಿ ತೆನಾಲಿರಾಮನೆಂಬ ಹೆಸರಾಂತ ಬುದ್ಧಿವಂತ ಇದ್ದಾನಂತಲ್ಲ?!' ಎಂದು ಕೇಳಿದನು. ಅದಕ್ಕೆ ಕೃಷ್ಣದೇವರಾಯನು, 'ಅದರಲ್ಲೇನು ಸಂದೇಹ?' ಎಂದು ಹೇಳಿದನು. ವಿಜಯವರ್ಧನನು, 'ಹಾಗಾದರೆ ತೆನಾಲಿ ರಾಮನ ಬುದ್ಧಿವಂತಿಕೆಯನ್ನು ಪರೀಕ್ಷಿಸೋಣವೇ?' ಎಂದನು. 'ಓ...!' ಎಂದ ಕೃಷ್ಣದೇವರಾಯ..





ಮರುದಿನ ಸಭೆ ಸೇರಿತು. ತೆನಾಲಿ ರಾಮನನ್ನು ಕೃಷ್ಣದೇವರಾಯನು ಕರೆಸಿದನು. ತೆನಾಲಿ ರಾಮನು ಅರಸ–ರಿಬ್ಬರಿಗೂ ನಮಸ್ಕರಿಸಿ ನಿಂತನು. ವಿಜಯ ವರ್ಧನ ಅರಸರು ತೆನಾಲಿ ರಾಮನನ್ನು ಕುರಿತು, 'ನನಗೆ ಬೆಳಗಿನ ಸಮಯದಲ್ಲಿ ಹೊಂಬಣ್ಣದಿಂದಲೂ, ಮಧ್ಯಾಹ್ನದ ಸಮಯದಲ್ಲಿ ಕೆಂಪು ಬಣ್ಣದಲ್ಲೂ ರಾತ್ರಿಯಲ್ಲಿ ಏಳು ಬಣ್ಣಗಳಿಂದಲೂ ಇರುವಂತಹ ಅದ್ಭುತವಾದ ಪಕ್ಷಿಯೊಂದನ್ನು ತಂದು ಕೊಡಬೇಕು' ಎಂದು ಕೇಳಿದನು. 'ಹಾಗೆಯೇ ಅದು ಕೆಲವು ಸಮಯದಲ್ಲಿ ಮೂರು ಕಾಲುಗಳಿಂದಲೂ, ಕೆಲವು ಸಮಯದಲ್ಲಿ ಎರಡು ಕಾಲುಗಳಿಂದಲೂ ನಡೆಯಬೇಕು. ನಂತರ ಏಳು ರೆಕ್ಕೆಗಳನ್ನು ಉಪಯೋಗಿಸಿ ಆಕಾಶದಲ್ಲಿ ಹಾರಬೇಕು' ಎಂದನು.

ಕೃಷ್ಣದೇವರಾಯನು ತೆನಾಲಿ ರಾಮನ ಬಳಿ, 'ವಿಜಯ ವರ್ಧನ ಅರಸರು ಹೇಳಿದ ಹಾಗೆ ಅದ್ಭುತವಾದ ಪಕ್ಷಿಯನ್ನು ತೆಗೆದುಕೊಂಡು ಬಾ' ಎಂದು ಆದೇಶಿಸಿದನು. ಅದನ್ನು ಕೇಳಿ ತೆನಾಲಿ ರಾಮನಿಗೆ ತಲೆ ಸುತ್ತಿದಂತಾಯಿತು. ಆದರೆ ಮುಗುಳ್ನಗೆಯಿಂದ, 'ಸರಿ, ಅರಸರೇ! ನಾಳೆ ಅಂತಹ ಪಕ್ಷಿಯನ್ನು ತರುತ್ತೇನೆ' ಎಂದನು.

ಮರುದಿನ ತೆನಾಲಿ ರಾಮನು ಆಸ್ಥಾನದ ಸಭೆಗೆ ತಡವಾಗಿ ಬಂದನು. ಅವನ ಪರಿಸ್ಥಿತಿ ಮೋಸವಾಗಿತ್ತು. ಹರಿದ ಬಟ್ಟೆ, ಮೈಯಲ್ಲಿ ಮುಳ್ಳು, ಮಣ್ಣು ಅಂಟಿಕೊಂಡಿತ್ತು.

**(ಕಥೆಗಳನ್ನು ನೀವೇ ಸ್ವಂತವಾಗಿ ಸೃಷ್ಟಿಸಿ, ನಿಮಗಿಷ್ಟವಾದ ರೀತಿಯಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ)**



4th_Kannada_Reader_Term1.indd 18 12-07-2019 15:16:33

ಅವನ ಕೈಯಲ್ಲಿ ಖಾಲಿಯಾಗಿದ್ದ ಪಂಜರವಿತ್ತು. ತೆನಾಲಿ ರಾಮನು ಅರಸರಿಗೆ, 'ಅರಸರೇ! ಅಲ್ಲೊಂದು ಅತಿಶಯವಾದ ಕಥೆ ನಡೆಯಿತು. ವಿಜಯವರ್ಧನ ಅರಸರು ಹೇಳಿದಂತಹ ಪಕ್ಷಿ ಸಿಕ್ಕಿತು. ನಾನು ಆ ಪಕ್ಷಿಯನ್ನು ಪಂಜರದಲ್ಲಿ ಕೂಡಿಟ್ಟಿದ್ದೆ.

ಅದನ್ನು ಇಲ್ಲಿ ತರುವಾಗ ಆ ಪಕ್ಷಿ ತನ್ನ ಮಾಯದ ಏಳು ರೆಕ್ಕೆಗಳನ್ನು ಬಿಚ್ಚಿ ಕಾಡಿನ ಕಡೆಗೆ ಹಾರಿ ಹೋಯಿತು. ನಾನು ಅದನ್ನು ಹಿಂಬಾಲಿಸಿಕೊಂಡು ತುಂಬಾ ದೂರ ಹೋದೆ. ಹಾರಿ ಹೋಗುತ್ತಿದ್ದ ಆ ಪಕ್ಷಿಯು ನನ್ನ ಬಳಿ ಈ ರೀತಿ ಹೇಳಿತು: "ಅರಸರ ಬಳಿ ಹೋಗಿ ಹೇಳು. ಬೆಳಗಿನ ಸಮಯವೂ ಆಗಬಾರದು, ಮಧ್ಯಾಹ್ನವೂ ಆಗಬಾರದು, ಸಂಜೆಯಸಮಯ ಆಗಬಾರದು, ರಾತ್ರಿಯೂ ಆಗಬಾರದು. ಅಂತಹ ಸಮಯದಲ್ಲಿ ನಾನೇ ನನ್ನ ಏಳು ರೆಕ್ಕೆಗಳಿಂದ ಹಾರಿ ಬರುತ್ತೇನೆ ಎಂದು ಹೇಳಿತು" ಎಂದನು ತೆನಾಲಿ ರಾಮ.

ಅದನ್ನು ಕೇಳಿದ ಕೃಷ್ಣದೇವರಾಯ ಅರಸರಿಗೂ, ವಿಜಯವರ್ಧನ ಅರಸರಿಗೂ ತಲೆ ಸುತ್ತಿದಂತೆ ಆಯಿತು. ಅಂತಹ ಸಮಯ ಯಾವಾಗ ಬರುವುದೋ ಎಂದು ಎಲ್ಲರೂ ತತ್ತರಿಸಿದರು. ಆಮೇಲೆ ಸುಧಾರಿಸಿಕೊಂಡು ತೆನಾಲಿ ರಾಮನ ಮಾತಿಗೆ ಮೆಚ್ಚಿ, 'ಅದನ್ನು ನೀನು ನೇರವಾಗಿ ನೋಡಿದೆಯಲ್ಲ!' ಎಂದು ಹೇಳಿ, ಅವನಿಗೆ ಬಹುಮಾನ ನೀಡಿದರು.





4th_Kannada_Reader_Term1.indd 19 12-07-2019 15:16:34

## ಬನ್ನಿ, ಮಾತಾಡೋಣ!



- ಈ ಕಥೆಯನ್ನು ನೀವೇ ಸ್ವಂತವಾಗಿ ಹೇಳಿ
- *ಇದೇ ರೀತಿ ತೆನಾಲಿ ರಾಮನ ಬೇರೆ ಕಥೆಗಳನ್ನು ತಿಳಿದುಕೊಳ್ಳಿ.
- *ನೀವು ಚತುರತೆಯಿಂದ ನಡೆದುಕೊಂಡ ಯಾವುದಾದರೂ ಸಂದರ್ಭವನ್ನು ತಿಳಿಸಿ




ನೀವು ತೆನಾಲಿ ರಾಮನಾಗಿದ್ದರೆ ವಿಜಯವರ್ಧನ ಅರಸನ ಬೇಡಿಕೆಯನ್ನು ಹೇಗೆ ಈಡೇರಿಸುತ್ತಿದ್ದಿರಿ?

ನಿಮ್ಮ ಕಲ್ಪನೆಯಲ್ಲಿ ಬರೆಯಿರಿ.



4th_Kannada_Reader_Term1.indd 20 12-07-2019 15:16:35

## ಪ್ರಶ್ನೆಗಳಿಗೆ ಉತ್ತರಿಸಿ

01 ವಿಜಯನಗರ ಅರಸನ ಆಸ್ಥಾನ ಕವಿ ಯಾರು ?

02 ವಿಜಯ ವರ್ಧನ ರಾಜನು ಎಂತಹ ಪಕ್ಷಿಯನ್ನು ತರಬೇಕೆಂದು ತಿಳಿಸಿದನು ?

03 ತೆನಾಲಿ ರಾಮನು ಸಭೆಯಲ್ಲಿ, ಪಕ್ಷಿ ಏನು ಹೇಳಿತು ಎಂದು ಹೇಳಿದನು ?

## ಸೂಚನೆಗಳನ್ನು ಕಂಡು ಹಿಡಿದು ಕಿರೀಟವನ್ನು ಧರಿಸಿಕೋ!

01 ಪಕ್ಷಿಯ ಸಮಾನಾರ್ಥಕ ಪದ ____________

02 ಅರಸರು, ಮಂತ್ರಿಗಳು ಕೂಡುವ ಸ್ಥಳ ____________

03 ಚಂದ್ರ, ನಕ್ಷತ್ರಗಳು ಆಕಾಶದಲ್ಲಿ ಕಾಣುವ ಸಮಯ ____________

04 ಆಶ್ಚರ್ಯವನ್ನು ಸೂಚಿಸುವ ಚಿಹ್ನೆ ____________

05 ಕಾಯಿಲೆಯನ್ನು ಗುಣಪಡಿಸಲು ಸಹಾಯವಾಗುವ ವಸ್ತು ____________



## ಕೊಟ್ಟಿರುವ ಪದದ ಮಧ್ಯೆ ಬೇರೆ ಅಕ್ಷರವನ್ನು ಸೇರಿಸಿ ಹೊಸ ಪದವನ್ನು ರಚಿಸಿ.

01 ಕತೆ – (ಉದಾಹರಣೆ) ಕವಿತೆ

02 ಕಲೆ – ....................................

03 ಪತ್ರ – ....................................

04 ಕಲ – ....................................

05 ಧಣಿ – ....................................

06 ಮಜ – ....................................

07 ಕಡಿ – ....................................

08 ರಸ – ....................................

09 ಜನ – ....................................

10 ವನ – ....................................



4th_Kannada_Reader_Term1.indd 21 12-07-2019 15:16:35

## ಮತ್ತೆ ಮತ್ತೆ ಹೇಳೋಣ

- ಬನ್ನಿ ಬನ್ನಿ ಕುಳಿತುಕೊಳ್ಳಿ.
- ಹಲಸಿನ ಹಣ್ಣು ಮಾಗಿ ಹಳ್ಳದಲ್ಲಿ ಬಿದ್ದಿತು.
- ಮಗು ಬಾಳೆಹಣ್ಣಿಗೋಸ್ಕರ ಬಿದ್ದು ಬಿದ್ದು ಅತ್ತಿತು.
- ನಡೆ ನಡೆ, ದೊಡ್ಡವರ ವಿಚಾರ ನಿನಗೆ ಬೇಡ.
- ಶಿಕ್ಷಕರು ವಿದ್ಯಾರ್ಥಿಗಳಿಗೆ ಪರಿಪರಿಯಾಗಿ ಹೇಳಿದರು.



## ಕಲೆ ಮತ್ತು ಕರಕೌಶಲ್ಯ

ಈಕಥೆಯಲ್ಲಿ ಬರುವ ಏಳು ರೆಕ್ಕೆಯಪಕ್ಷಿಗೆ ನಿನ್ನ ಕಲ್ಪನೆಗೆ ತಕ್ಕ ಬಣ್ಣವನ್ನು ಹಚ್ಚಿ ಆನಂದಿಸಿ.



## ಅರಿತುಕೊಳ್ಳೋಣ !



ತೆನಾಲಿ ರಾಮನು ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿ ವಿಕಟಕವಿ ಎಂದು ಹೆಸರಾಗಿದ್ದನು. ವಿಕಟಕವಿ ಎಂದರೆ ಹಾಸ್ಯಭರಿತವಾಗಿ ಮಾತನಾಡುವ ಕವಿ. ತೆನಾಲಿ ರಾಮನ ನಗುವಿನಲ್ಲಿಯೂ ಸಹ ಚಿಂತನಾಶೀಲ ವಿಚಾರಗಳಿದ್ದವು.



## ಕಾರ್ಯ ಯೋಜನೆ



01 ನಿಮ್ಮ ಶಾಲೆಯ ಗ್ರಂಥಾಲಯದಲ್ಲಿರುವ ತೆನಾಲಿ ರಾಮನ ಕಥೆಗಳು, ಬೀರಬಲ್ಲನ ಕಥೆಗಳು, ಮರ್ಯಾದೆ ರಾಮನ ಕಥೆಗಳು, ಅಪ್ಪಾಜಿ ಕಥೆಗಳು ಮುಂತಾದ ಪುಸ್ತಕಗಳನ್ನು ಹುಡುಕಿ ಓದಿ, ಒಂದೊಂದು ಪುಸ್ತಕದಲ್ಲೂ ನಿಮಗಿಷ್ಟವಾದ ಒಂದು ಕಥೆಯನ್ನು ನಿಮ್ಮದೇ ಶೈಲಿಯಲ್ಲಿ ಬರೆಯಿರಿ.

02 ಗ್ರಂಥಾಲಯದಲ್ಲಿರುವ ಪುಸ್ತಕಗಳಲ್ಲಿ ಯಾವುದಾದರೂ ಐದು ಕಥೆಗಳ ಹೆಸರುಗಳನ್ನು ಹಾಗೂ ಲೇಖಕರ ಹೆಸರುಗಳನ್ನು ಪಟ್ಟಿ ಮಾಡಿರಿ.

| ಕ್ರಮಸಂಖ್ಯೆ | ಕಥೆಗಳ ಹೆಸರು | ಲೇಖಕರ ಹೆಸರು | ನಿಮ್ಮ ಅಭಿಪ್ರಾಯ |
|---|---|---|---|
| | | | |
| | | | |
| | | | |
| | | | |
| | | | |

# 4 ಸುಗ್ಗಿ ಹಾಡು



ಕೋಲು ಮಾತಾಡುತಾವೆ । ಹೂವಿನ
ಗೆಜ್ಜೆ ಮಾತಾಡುತಾವೆ
ಹೊಳೆಯಲ್ಲಿ ನೀರು ತುಂಬಿ ಹೊಲದಲ್ಲಿ ಬೆಳೆ ತುಂಬಿ
ಊರೂರಿನ ಗುಡಿ ಮನೆ ತುಂಬಿ ॥ ಹೂವಿನ॥

ಊರೂರಿನ ಗುಡಿ ಮನೆ ತುಂಬಿ ಜನ ತುಂಬಿ
ಸಂಕ್ರಾಂತಿ ಬಂತು ಸಿರಿ ತುಂಬಿ ॥ ಹೂವಿನ॥

ಸಂಕ್ರಾಂತಿ ಹಬ್ಬದಲ್ಲಿ ಸಂಭ್ರಮವೇನಮ್ಮ
ದೇವೇಂದ್ರನೈಭೋಗ ಧರೆಯಲ್ಲಿ ॥ ಹೂವಿನ॥

ದೇವೇಂದ್ರನೈಭೋಗ ಧರೆಯಲ್ಲಿ ನೋಡು ಬಾರೆ
ಬೆಳೆದು ಬೀಗ್ತಾಳೆ ಭೂಮಿತಾಯಿ ॥ ಹೂವಿನ॥

ಸುಗ್ಗಿ ಬಂದಿದೆ ಬನ್ನಿ, ಹಿಗ್ಗ ತಂದಿದೆ ಬನ್ನಿ
ಸಗ್ಗವಾಗಿದೆ ಭೂಮಿ ನೋಡ ಬನ್ನಿ ॥ ಹೂವಿನ॥

ಎಳ್ಳು ಬೆಲ್ಲವ ಕೊಟ್ಟ ಒಳ್ಳೆ ಬಾಳನು ಕೊಟ್ಟ
ಎಲ್ಲರಿಗೂ ಸಂಪತ್ತ ಶಿವ ಕೊಟ್ಟ ॥ ಹೂವಿನ॥

ಗೊನೆಯಿಳಿಸಿ ತಂದ ಭತ್ತ, ಕುಟ್ಟಿದ ಹೊಸ ಅಕ್ಕಿ
ಉಕ್ಕೇಸಿ ಹೆಚ್ಚಾದ ಬೆಲ್ಲದನ್ನ ॥ ಹೂವಿನ॥

ಉಕ್ಕೇಸಿ ಹೆಚ್ಚಾದ ಬೆಲ್ಲದನ್ನ ಬಸವಯ್ಗೆ
ಬೆಳೆದೋರ್ಗೆ ಸಂಕ್ರಾಂತಿ ಸುಖವಾಯಿತು ॥ ಹೂವಿನ॥

**ಈ ಹಾಡಿನ ಬಗ್ಗೆ ನಿಮ್ಮ ಅನಿಸಿಕೆಯನ್ನು ಬರೆಯಿರಿ.**



4th_Kannada_Reader_Term1.indd 24 12-07-2019 15:16:37



## ಬನ್ನಿ, ಮಾತಾಡೋಣ!

- ಈ ಪದ್ಯವನ್ನು ರಾಗಬದ್ಧವಾಗಿ, ಜನಪದ ಶೈಲಿಯಲ್ಲಿ ಹಾಡಿರಿ.
- ಜನಪದ ಗೀತೆಗಳನ್ನು ಸಂಗ್ರಹಿಸಿ, ಅವುಗಳನ್ನು ತರಗತಿಯಲ್ಲಿ ಚರ್ಚಿಸಿ.
- ಈ ಪದ್ಯದಂತೆಯೇ ಇನ್ನಿತರ ಸುಗ್ಗಿ ಹಾಡುಗಳನ್ನು ಸಂಗ್ರಹಿಸಿ, ತರಗತಿಯಲ್ಲಿ ಹಾಡಿರಿ.



## ಚಿಂತಿಸೋಣವೇ ?

ಅಜ್ಜನು ತನ್ನ ಮಗನಿಗೆ ಜಮೀನಿಗೆ ದನದ ಗೊಬ್ಬರ ಅಥವಾ ಆಡಿನ ಗೊಬ್ಬರವನ್ನು ಬಳಸಲು ಸೂಚಿಸಿದನು. ಅದಕ್ಕೆ ಮಗನು ರಾಸಾಯನಿಕ ಗೊಬ್ಬರವನ್ನು ಬಳಸಿದರೆ ಹೆಚ್ಚಿನ ಇಳುವರಿ ಬರುತ್ತದೆ ಎಂದು ಹೇಳಿದನು. ಇದರಲ್ಲಿ ಯಾರು ಹೇಳುವುದು ಸೂಕ್ತ ?

## ಓದೋಣ! ಚಿಂತಿಸೋಣ! ಬರೆಯೋಣ!

### ಆರಿಸಿ ಬರೆಯಿರಿ

01 ಹೊಳೆಯಲ್ಲಿ ಇರುವುದು = ..............................

02 ದೇವೇಂದ್ರನೈಭೋಗ = ..............................

03 ಬೆಳೆದು ಬೀಗ್ತಾಳೆ = ..............................

04 ಸಂಕ್ರಾಂತಿ ಬಂತು = ..............................

05 ಗೊನೆ ಇಳಿಸಿ ತಂದ = ..............................






4th_Kannada_Reader_Term1.indd 25 12-07-2019 15:16:38

## ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯೋಣವೇ ?

01 'ಹೊಳೆಯಲ್ಲಿ' – ಎಂಬ ಪದವನ್ನು ಬಿಡಿಸಿ ಬರೆದಾಗ ..........................................

ಅ. ಹೊಳೆಯ + ಅಲ್ಲಿ
ಆ. ಹೊಳೆಯಲಿ + ಅಲ್ಲಿ
ಇ. ಹೊಳೆ + ಅಲ್ಲಿ
ಈ. ಹೊಳೆಯ + ಯಲ್ಲಿ

02 'ಊರೂರು' – ಎಂಬ ಪದವನ್ನು ಬಿಡಿಸಿ ಬರೆದಾಗ ..........................................

ಅ. ಊರು + ಊರು
ಆ. ಊರಿಂದ + ಊರು
ಇ. ಊರಿನ + ಊರು
ಈ. ಊರು + ರೂರು

03 ದೇವ + ಇಂದ್ರ ಎಂಬ ಪದವನ್ನು ಸೇರಿಸಿ ಬರೆದಾಗ ..........................................

ಅ. ದೇವೀಂದ್ರ
ಆ. ದೇವೇಂದ್ರ
ಇ. ದೇವರಇಂದ್ರ
ಈ. ಇಂದ್ರದೇವ

04 ಸಗ್ಗ+ಆಗಿದೆ ಎಂಬುದನ್ನು ಸೇರಿಸಿ ಬರೆದಾಗ ಸಿಗುವ ಪದ ....................................

ಅ. ಸಗ್ಗಆಗಿದೆ
ಆ. ಸಗ್ಗವವಾಗಿದೆ
ಇ. ಸಗ್ಗವಾಗಿದೆ
ಈ. ಸಗ್ಗಾಗಿದೆ

05 ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ

ಅ. ಧರೆಯಲಿ = .................................... + ....................................

ಆ. ಹಬ್ಬದಲ್ಲಿ = .................................... + ....................................

## ಈ ಪದ್ಯದ ಸಾಲುಗಳಲ್ಲಿರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯರಿ

ಉದಾಹರಣೆ: ಜನ ತುಂಬಿ – ಬೆಳೆ ತುಂಬಿ

_____________ _____________

_____________ _____________

## ಈ ಪದ್ಯದಲ್ಲಿ ಬಂದಿರುವ ಮೊದಲ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯಗಳನ್ನು ಬರೆಯಿರಿ

**ಉದಾಹರಣೆ** : ಭೂಮಿಯಲ್ಲಿ – 'ರೈತರು ಭೂಮಿಯಲ್ಲಿ ಕಷ್ಟಪಟ್ಟು ದುಡಿಯುತ್ತಾರೆ'.

___________________________

___________________________



4th_Kannada_Reader_Term1.indd 26 12-07-2019 15:16:38

_____________ _____________

_____________ _____________

## ಮೋಡದಲ್ಲಿರುವ ಆಡು ಭಾಷೆಯ ಪದಗಳನ್ನು ಕೊಡೆಯಲ್ಲಿರುವ ಗ್ರಾಂಥಿಕ ಪದಗಳಿಗೆ ಹೊಂದಿಸಿ.




1. .......................... ..........................
2. .......................... ..........................
3. .......................... ..........................
4. .......................... ..........................
5. .......................... ..........................
6. .......................... ..........................

## ಕಲೆಯೂ ಕೈಬಣ್ಣವೂ

ಚಿತ್ರಕ್ಕೆ ಬಣ್ಣ ಹಚ್ಚಿರಿ.





4th_Kannada_Reader_Term1.indd 27 12-07-2019 15:16:39

## ಅರಿತುಕೊಳ್ಳೋಣ!

ನವಧಾನ್ಯಗಳು ಯಾವುವೆಂದು ತಿಳಿದುಕೊಳ್ಳೋಣ

| | |
|---|---|
| ಭತ್ತ | ಎಳ್ಳು |
| ಗೋಧಿ | ಹುರುಳಿಕಾಳು |
| ಹೆಸರುಕಾಳು | ಉದ್ದಿನಕಾಳು |
| ತೊಗರಿಕಾಳು | ಹಸಿಕಡಲೆಕಾಳು |
| ಅವರೆಕಾಳು | |

## ಕಾರ್ಯ ಯೋಜನೆ

- ವಿದ್ಯಾರ್ಥಿಗಳನ್ನು ಐದು ಜನರಂತೆ ಗುಂಪುಗಳಾಗಿ ವಿಭಾಗಿಸಿಕೊಂಡು ಒಂದೊಂದು ಗುಂಪಿಗೆ ಅವರಿಗೆ ದೊರೆತ ಸಿರಿಧಾನ್ಯಗಳನ್ನು ಮೊಳಕೆ ಬರಿಸಿ, ತೆಗೆದುಕೊಂಡು ಬರುವಂತೆ ಸೂಚಿಸುವುದು.



- ಆಡು ಭಾಷೆಯ ಪದಗಳನ್ನು ಸಂಗ್ರಹಿಸಿ ಗ್ರಾಂಥಿಕ ಭಾಷೆಗೆ ಬದಲಾಯಿಸಿ ಬರೆಯಿರಿ.

| ಆಡು ಭಾಷೆ | ಗ್ರಾಂಥಿಕ ಭಾಷೆ |
|---|---|
| 1. ಓದ್ತಾನೆ | ಓದುತ್ತಾನೆ |
| 2. | |
| 3. | |
| 4. | |
| 5. | |
| 6. | |
| 7. | |
| 8. | |
| 9. | |
| 10. | |



4th_Kannada_Reader_Term1.indd 28 12-07-2019 15:16:40

# 5 ಗಾದೆಗಳು

ರಮೇಶ ತನ್ನ ತಾತನೊಂದಿಗೆ ಸಂತೆಗೆ ಹೋದನು. ಹೋಗುವ ದಾರಿಯಲ್ಲಿ ನಾಯಿಗಳು ಬೊಗಳುತ್ತಾ ಜಗಳವಾಡುತ್ತಿದ್ದವು. ರಮೇಶ ನಾಯಿಗಳನ್ನು ಬೆದರಿಸಿ, ದೂರ ಓಡಿಸಲು ಕಲ್ಲುಗಳನ್ನು ಹುಡುಕಿದನು.



ತಾತ : ರಮೇಶ, ಏನನ್ನು ಹುಡುಕುತ್ತಿರುವೆ ?

ರಮೇಶ : 'ಹಲ್ಲಿದ್ರೆ ಕಡ್ಲೆ ಇಲ್ಲ. ಕಡ್ಲೆ ಇದ್ರೆ ಹಲ್ಲಿಲ್ಲ' ಎನ್ನುವ ಹಾಗೆ ನಾಯಿಗಳನ್ನು ಓಡಿಸಲು ಕಲ್ಲು ಸಿಗಲಿಲ್ಲವಲ್ಲ ತಾತ'

ತಾತ : ಈ ಗಾದೆಗೆ ಅರ್ಥ ಅದಲ್ಲ ರಮೇಶ. ಮನುಷ್ಯನಿಗೆ ಸರ್ವವೂ ತನ್ನಲ್ಲಿರುವಾಗ ಅದನ್ನು ಅನುಭವಿಸುವ ಭಾಗ್ಯ ಅವನಿಗಿರುವುದಿಲ್ಲ. ಏನೂ ಇಲ್ಲದವನಿಗೆ ಬೇಕೆಂದರೂ ಸಿಗುವುದಿಲ್ಲ ಎಂಬುದೇ ಈ ಗಾದೆಯ ಅರ್ಥ.

ರಮೇಶ : ತಾತ , 'ಬೊಗಳುವ ನಾಯಿ ಕಚ್ಚುವುದಿಲ್ಲ' ಎಂದು ನನ್ನ ಗೆಳೆಯ ಸುರೇಶ ನಿನ್ನೆ ಹೇಳಿದ. ಬೊಗಳುವ ನಾಯಿ ಕಚ್ಚುವುದಿಲ್ಲವೇ ತಾತ?

ತಾತ : ಹಾಗಲ್ಲ ರಮೇಶ! ಬೊಗಳುವ ನಾಯಿ ಎಂಬುದು ತಪ್ಪು. ಉರುಗುಟ್ಟುವ ನಾಯಿ ಕಚ್ಚುವುದಿಲ್ಲ ಎಂಬುದೇ ವಾಸ್ತವ. ಉರುಗುಟ್ಟುವುದು ಎಂದರೆ ನಾವು ಸಾಕಿದ ನಾಯಿ ನಮ್ಮನ್ನು ನೋಡಿ, ಬಾಲವನ್ನು ಅಲ್ಲಾಡಿಸುತ್ತಾ ಸಂತೋಷ ಪಡುತ್ತದೆ ಅಲ್ಲವೇ?





4th_Kannada_Reader_Term1.indd 29 12-07-2019 15:16:41

**ಇಬ್ಬರೂ ಸಂತೆಗೆ ಹೋದರು. ಪ್ರವೇಶ ದ್ವಾರದಲ್ಲಿ ಆನೆಯೊಂದು ಎಲ್ಲರನ್ನೂ ಆಶೀರ್ವದಿಸುತ್ತಿತ್ತು. ಅದನ್ನು ನೋಡಿದ ರಮೇಶನಿಗೂ ಆಸೆಯಾಯಿತು.**

ರಮೇಶ : ತಾತ...! ನಾನೂ ಆ ಆನೆಯಿಂದ ಆಶೀರ್ವಾದ ಪಡೆದುಕೊಳ್ಳಲೇ?

ತಾತ : ಪಡೆದುಕೋ! ಇದೋ ಈ ಹತ್ತು ರೂಪಾಯಿಯನ್ನು ಆನೆಗೆ ಕೊಡು.



ರಮೇಶ : ತಾತ...! ಅದೊಂದು ದಿನ ಅಮ್ಮ, ಅಪ್ಪನ ಬಳಿ ಹೇಳಿದಳು : 'ಅತ್ತೆಗೊಂದು ಕಾಲ ಬಂದರೆ, ಸೊಸೆಗೊಂದು ಕಾಲ ಬರುತ್ತೆ' ಅಂತ! ಹಾಗೆಂದರೆ ಏನು ತಾತ?

ತಾತ : ಆರಂಭದಲ್ಲಿ ಅತ್ತೆ ತನ್ನ ದರ್ಪದಿಂದ ಸೊಸೆಗೆ ಸಹಿಸಲಾರದಷ್ಟು ತೊಂದರೆಗಳನ್ನು ಕೊಟ್ಟು ಸಮಯವನ್ನು ಕಳೆಯುತ್ತಿರುತ್ತಾಳೆ. ತದ ನಂತರ ಸೊಸೆ ತನ್ನ ಅವಧಿಯಲ್ಲಿ ಅತ್ತೆ ಮಾಡಿದ ಎಲ್ಲಾ ಕಾರ್ಯಗಳನ್ನೂ ಹಿಂದಿರುಗಿಸಿ ಮಾಡುತ್ತಾಳೆ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂಬ ಗಾದೆಯ ಅರ್ಥ ಇಂದು ಬೇರೆಯೇ ಆಗಿದೆ. ನವೀನ ಯುಗದಲ್ಲಿ ಈ ಗಾದೆಯನ್ನು ಮರೆತು ಸಹಬಾಳ್ವೆಯಿಂದ ಅತ್ತೆ ಸೊಸೆಯರು ಬಾಳುತ್ತಿದ್ದಾರೆ.

ಹೀಗೆಯೇ ಇಬ್ಬರೂ ಮಾತನಾಡಿಕೊಂಡು ತರಕಾರಿಗಳನ್ನು ತೆಗೆದುಕೊಂಡರು.

ರಮೇಶ : ತಾತ...! ನನಗೆ ಆಟವಾಡಲು ಬ್ಯಾಟ್ ಮತ್ತು ಚೆಂಡನ್ನು ತೆಗೆದುಕೊಡು. ಹಾಗೆಯೇ ತಂಗಿಗೂ ಬಲೂನುಗಳನ್ನು ತೆಗೆದುಕೊಳ್ಳೋಣವೇ?

ತಾತ : ತೆಗೆದುಕೊಳ್ಳೋಣ ರಮೇಶ.

ರಮೇಶ : ನನಗೂ ಸೇರಿಸಿ ಬಲೂನುಗಳನ್ನು ಹೆಚ್ಚಾಗಿ ತೆಗೆದುಕೊಳ್ಳೋಣ ತಾತಾ...!,



4th_Kannada_Reader_Term1.indd 30 12-07-2019 15:16:41



ತಾತ : ಸಾಕು. ‘ಹೊಳೆಗೆ ಸುರಿದರೂ ಅಳೆದು ಸುರಿಯಬೇಕು’.

ರಮೇಶ : ‘ಹೊಳೆಗೆ ಸುರಿದರೂ ಅಳೆದು ಸುರಿಯಬೇಕೇ?’

ತಾತ : ಹೇಳುತ್ತೇನೆ... ಹೇಳುತ್ತೇನೆ... ಹೊಳೆಗೆ ಸುರಿದರೂ ಅಳೆದು ಸುರಿಯಬೇಕು ಎಂದು ಅದನ್ನು ಬಳಸುತ್ತೇವೆ. ‘ಹೊಳಗೆ ಸುರಿದರೂ ಅಳೆದು ಸುರಿಯಬೇಕು’ ಎಂಬುದು ಇದರ ಅರ್ಥ. ಎಂದರೆ ನಮ್ಮವರಿಗೆಂದು ಏನೇ ಮಾಡಿದರೂ ಅಳತೆಗೆ ತಕ್ಕಂತೆ ಮಾಡಬೇಕು. ಅತಿಯಾಗಿ ದುಂದುವೆಚ್ಚ ಮಾಡಬಾರದು.

(ಮಾತನಾಡಿಕೊಂಡೇ ಮನೆ ತಲುಪಿದರು.)

ರಮೇಶ : ತಾತಾ...! ನಿಮ್ಮ ಜೊತೆ ಸಂತೆಗೆ ಹೋಗಿ ಬಂದದ್ದು ನನಗೆ ತುಂಬಾ ಸಂತೋಷವಾಗಿದೆ.

ಈ ಪಾಠದಲ್ಲಿ ಬರುವ ಗಾದೆಗಳನ್ನು ತಿಳಿದುಕೊಳ್ಳಿ.

## ಬನ್ನಿ, ಮಾತನಾಡೋಣ!



- ಈ ಪಾಠದಲ್ಲಿ ಬರುವ ಗಾದೆಗಳನ್ನು ತಿಳಿದುಕೊಂಡು, ಅವುಗಳ ಅರ್ಥವನ್ನು ನಿಮ್ಮ ಸ್ವಂತ ಮಾತಿನಲ್ಲಿ ಹೇಳಿರಿ.
- ಈ ಪಾಠವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿರಿ.
- ನಿಮಗೆ ತಿಳಿದಿರುವ ಗಾದೆಗಳು ಮತ್ತು ಅವುಗಳು ತಿಳಿಸುವ ಅರ್ಥಗಳನ್ನು ತರಗತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂಭಾಷಿಸಿರಿ.



## ಚಿಂತಿಸೋಣವೇ ?

ಗಾದೆಗಳ ಅರ್ಥಗಳನ್ನು ಬದಲಿಸಿ ಹೇಳುವುದಕ್ಕೆ ಕಾರಣವೇನು? ಚಿಂತಿಸಿ, ಚರ್ಚಿಸಿ.



4th_Kannada_Reader_Term1.indd 31 12-07-2019 15:16:42

## ಓದೋಣ! ಚಿಂತಿಸೋಣ! ಬರೆಯೋಣ!

### ಸರಿಯಾದ ಉತ್ತರವನ್ನು ಆರಿಸಿ ಬರೆಯೋಣವೇ?

01 ರಮೇಶ ತನ್ನ ತಾತನೊಂದಿಗೆ ಹೋಗಿದ್ದ ಸ್ಥಳ ..............................

ಅ. ಅಂಗಡಿ ಬೀದಿ　　ಆ. ಪಕ್ಕದ ಊರು

ಇ. ಸಂತೆ　　ಈ. ಜಾತ್ರೆ

02 'ಕಡಲೆಯಿಲ್ಲ' ಈ ಪದವನ್ನು ಬಿಡಿಸಿ ಬರೆದಾಗ ..............................

ಅ. ಕಡ್ಲೆ + ಇಲ್ಲ　　ಆ. ಕಡಲೆ + ಇಲ್ಲ

ಇ. ಕಡಲೆಯ + ಇಲ್ಲ　　ಈ. ಕಡಲೆ + ಯಿಲ್ಲ

03 'ಕಚ್ಚುವುದಿಲ್ಲ' ಈ ಪದವನ್ನು ಬಿಡಿಸಿ ಬರೆದಾಗ..............................

ಅ. ಕಚ್ಚು+ಇಲ್ಲ　　ಆ. ಕಚ್ಚಿತು+ಇಲ್ಲ

ಇ. ಕಚ್ಚುವುದು+ಇಲ್ಲ　　ಈ. ಕಚ್ಚು+ವುದಿಲ್ಲ

04 ನಾಯಿ ..............................

ಅ. ಘರ್ಜಿಸುತ್ತದೆ　　ಆ. ಬೊಗಳುತ್ತದೆ

ಇ. ಚೀರುತ್ತದೆ　　ಈ. ಘೀಳಿಡುತ್ತದೆ

05 'ಆಶೀರ್ವಾದ' ಈ ಪದದ ಅರ್ಥ ..............................

ಅ. ಹೊಗಳುವುದು　　ಆ. ಸಂತೋಷ ಪಡು

ಇ. ಹೀಯಾಳಿಸು　　ಈ. ಹರಸು

06 ಕೆಳಗಿನ ಪದಗಳನ್ನು ಸೇರಿಸಿ ಬರೆಯಿರಿ

ಅ. ಆಸೆ + ಉಂಟಾಯಿತು =..............................

ಇ. ಚೆಂಡು + ಅನ್ನು = ..............................

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

01 ರಮೇಶ ಯಾರಿಂದ ಆಶೀರ್ವಾದ ಪಡೆದನು ?

02 ದರ್ಪ ಎಂಬುದು ಏನನ್ನು ಸೂಚಿಸುತ್ತದೆ ?

03 'ಹೊಳೆಗೆ ಸುರಿದರೂ ಅಳೆದು ಸುರಿ' ಈ ಗಾದೆಯನ್ನು ನಿಮ್ಮ ಸ್ವಂತ ಮಾತಿನಲ್ಲಿ ವಿವರಿಸಿ.



4th_Kannada_Reader_Term1.indd 32　　12-07-2019 15:16:42

## ಗಾದೆಗಳನ್ನು ಪೂರ್ಣಗೊಳಿಸಿ

| | | |
|---|---|---|
| 01 | ಗಾಳಿ ಬಂದಾಗ | .................................................. .................................................. |
| 02 | .................................................. .................................................. | ಬಾಯಿ ಮೊಸರು |
| 03 | ಕೋಟಿ ವಿದ್ಯೆಗಿಂತ | .................................................. .................................................. |
| 04 | ಬೇಲಿ ಎದ್ದು | .................................................. .................................................. |
| 05 | .................................................. .................................................. | ಅವಮಾನ ಭಂಗ |

## ಓದಿ–ಹಾಡಿ ಆನಂದಿಸಿ

ಅತ್ತೆ ಅತ್ತೆ ನಮ್ಮತ್ತೆ
ನನ್ನಯ ಪ್ರೀತಿಯ ಸೋದರತ್ತೆ
ಅ ಆ ಇ ಈ ಬರೆಸತ್ತೆ
ಓದುವೆ ನಾನು ನಿನ್ನಂತೆ
ಸಿಹಿ ಸಿಹಿ ತಿಂಡಿಯ ಸವಿಯುತ್ತಾ
ಜೊತೆ ಜೊತೆ ಬರುವೆನು, ನನ್ನತ್ತೆ!

## ಚಿತ್ರಕ್ಕೆ ತಕ್ಕ ಗಾದೆಯನ್ನು ಆಯ್ಕೆ ಮಾಡು



01 ಹನಿಹನಿಗೂಡಿದರೆ ಹಳ್ಳ. ☐

02 ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ☐

03 ಗಾಳಿ ಬಂದಾಗ ತೂರಿಕೋ. ☐

## ಮೊದಲ ಅಕ್ಷರವನ್ನು ಬದಲಿಸಿದರೆ ಹೊಸ ಪದ

01
ನೀರನ್ನು ಎತ್ತುವುದು ............ಏತ............
ತಾಯಿಗೆ ಮತ್ತೊಂದು ಹೆಸರು ........................
ಕೆಟ್ಟ ವಾಸನೆಯ ಹೆಸರು ........................
ತಂದೆಗೆ ಮತ್ತೊಂದು ಹೆಸರು ........................



02
ಬರೆಯಲು ಬೇಕು ............ಪೆನ್ನು............
ತಿನ್ನಲು ಬೇಕು ........................
ನೋಡಲು ಬೇಕು ........................
ಬೆಳೆ ಬೆಳೆಯಲು ಬೇಕು ........................



03
ಕೈಗೆ ಮತ್ತೊಂದು ಹೆಸರು ............ಕರ............
ಶಾಲೆಯ ಮುಂದಿರುವುದು ........................
ಕತ್ತಿಯನ್ನು ಶೀಡಲು ಬೇಕು ........................
ಮಾನವನಿಗೆ ಮತ್ತೊಂದು ಹೆಸರು ........................





4th_Kannada_Reader_Term1.indd 34 12-07-2019 15:16:43



## ತಿಳಿದುಕೊಳ್ಳೋಣ !

ನಮ್ಮ ಪೂರ್ವಜರು ತಮ್ಮ ಅನುಭವಗಳನ್ನು ಸಂಕ್ಷಿಪ್ತವಾಗಿ ಹೇಳಿರುವ ನುಡಿಗಳೇ ನಾಣ್ನುಡಿಗಳು ಅಥವಾ ಗಾದೆಗಳಾಗಿವೆ.





## ಕಾರ್ಯ ಯೋಜನೆ

ಐದು ಗಾದೆಗಳನ್ನು ಬರೆದು ಅವುಗಳ ವಿವರಣೆಯನ್ನು ಬರೆದು ತನ್ನಿ.

## ಹೊಂದಿಸಿ ಬರೆಯೋಣ

| | | | |
|---|---|---|---|
| 01 | No pain no gain | | ಆರೋಗ್ಯವೇ ಭಾಗ್ಯ |
| 02 | Health is wealth | | ಒಗ್ಗಟ್ಟಿನಲ್ಲಿ ಬಲವಿದೆ |
| 03 | Union is strength | | ಸುಳ್ಳು ಸುಳ್ಳಿಗೆ ದಾರಿ ಮಾಡಿ ಕೊಡುತ್ತದೆ |
| 04 | one lie leads to another | | ದುಡ್ಡು ಕೊಟ್ಟು ಶತ್ರುತ್ವ ಕೊಂಡಂತೆ |
| 05 | Give loan enemy own | | ಪರಿಶ್ರಮವಿಲ್ಲದೆ ಫಲವಿಲ್ಲ |



4th_Kannada_Reader_Term1.indd 35 12-07-2019 15:16:43

# 6 ರಾಜನಾದ ಮೊಲ

ಒಂದು ಮೊಲ, ಒಬ್ಬ ರೈತನ ತೋಟದಲ್ಲಿ ಬೆಳೆದಿದ್ದ ತರಕಾರಿಗಳು, ಹಣ್ಣುಗಳು ಮತ್ತು ಗೆಡ್ಡೆಗೆಣಸುಗಳನ್ನು ಹೊಟ್ಟೆ ತುಂಬಾ ತಿಂದು ಸಂತೋಷದಿಂದ ಜೀವಿಸುತ್ತಿತ್ತು. ಆದರೂ ಅದರ ಮನಸ್ಸಿನಲ್ಲಿ ಒಂದು ಚಿಂತೆ ಇತ್ತು. ಅದಕ್ಕೆ ಕಾರಣ ಅದು ವಾಸ ಮಾಡುತ್ತಿರುವ ಆ ಕಾಡಿನಲ್ಲಿ ಒಂದು ಹುಲಿ ಅನೇಕ ವರ್ಷಗಳಿಂದ ಆಳ್ವಿಕೆ ಮಾಡುತ್ತಿತ್ತು. ಹುಲಿಗೆ ಸಿಗುವ ಗೌರವ ತನಗೂ ಸಿಗಬೇಕೆಂದು ಮೊಲವು ಬಯಸಿತು. ಹುಲಿಗಿಂತ ತಾನೇ ಶ್ರೇಷ್ಠವೆಂದು – ಹುಲಿಗೂ, ಕಾಡಿನಲ್ಲಿರುವ ಇತರ ಪ್ರಾಣಿಗಳಿಗೂ ನಿರೂಪಿಸಬೇಕೆಂದು ಮೊಲಕ್ಕೆ ಆಸೆಯಾಯಿತು. ತಕ್ಷಣ ಮೊಲವು, ಯೋಚಿಸತೊಡಗಿತು. ಈಗ ಕಥೆಯನ್ನು ಓದೋಣ...






4th_Kannada_Reader_Term1.indd 36 12-07-2019 15:16:45


ಓಡಿ ಹೋದೆನೇ...? ನಾನೇ? ನಿನ್ನನ್ನು ನೋಡಿ...? ನಿನಗೆ ವಿಷಯ ಗೊತ್ತಿಲ್ಲವೇ? ನಿನಗೆ ಹೇಗೆ ಗೊತ್ತಾಗುತ್ತದೆ. ಇಲ್ಲಿ ಸಭೆ ನಡೆದಾಗ ನೀನು ಮುಗ್ಧ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದೆ.
ಎಲ್ಲಾ ಪ್ರಾಣಿಗಳೂ ಸಭೆಯಲ್ಲಿ ಭಾಗವಹಿಸಿದ್ದವೇ?
ಕೆಲವು ಪ್ರಾಣಿಗಳನ್ನು ಬಿಟ್ಟು ಎಲ್ಲಾ ಪ್ರಾಣಿಗಳೂ ಆ ಸಭೆಯಲ್ಲಿ ಭಾಗವಹಿಸಿದ್ದವು.
ಸಭೆಯಲ್ಲಿ ಯಾವ ತೀರ್ಮಾನ ಮಾಡಲಾಯಿತು ?
ನೀನು ಈ ಕಾಡಿನ ರಾಜನಾಗಿರಲು ಇನ್ನು ಮುಂದೆ ಸಾಧ್ಯವಿಲ್ಲ ಎಂದು ಎಲ್ಲಾ ಪ್ರಾಣಿಗಳೂ ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಿದವು.
ನಾನು ರಾಜನಾಗಿ ಮುಂದುವರೆಯಲು ಸಾಧ್ಯವಿಲ್ಲವೇ? ಹಾಗಾದರೆ ಬೇರೆ ಯಾರು ರಾಜನಾಗುವರು ?
ಈ ಕಾಡಿನಲ್ಲಿಯೇ ಭಯಂಕರವಾದ, ಚತುರ ಪ್ರಾಣಿಯಾದ ನನ್ನನ್ನು ಎಲ್ಲಾ ಪ್ರಾಣಿಗಳೂ ಹೊಸ ರಾಜನಾಗಿ ಆಯ್ಕೆ ಮಾಡಿದ್ದಾರೆ.
ತಮಾಷೆ ಮಾಡುತ್ತಿರುವೆಯಾ? ನೀನು ಬಲಹೀನನಾದ ಒಂದು ಪುಟ್ಟ ಮೊಲ. ಈ ಕಾಡಿನ ರಾಜನೇ...? ನಿನ್ನನ್ನು ಈಗಲೇ...
ನಿನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ಒಂದು ಸುತ್ತು ಬಾ... ಈ ಕಾಡಿನ ಪ್ರಾಣಿಗಳು ನನ್ನನ್ನು ನೋಡಿ ಹೇಗೆ ಹೆದರುತ್ತವೆ ಎಂಬುದನ್ನು ನಿನಗೆ ತೋರಿಸುತ್ತೇನೆ.






4th_Kannada_Reader_Term1.indd 38 12-07-2019 15:16:51

## ಬನ್ನಿ ಮಾತಾಡೋಣ!



- ಈ ಕಥೆಯನ್ನು ನಿಮ್ಮ ಸ್ವಂತ ಮಾತಿನಲ್ಲಿ ಹೇಳಿರಿ.
- ಕಾಡಿನ ರಾಜನಾಗಿ ನೀವು ಯಾವ ಪ್ರಾಣಿಯನ್ನು ಆಯ್ಕೆ ಮಾಡುವಿರಿ? ಏಕೆ? ವಿವರಿಸಿ.
- ಹುಲಿ ಯಾವುದನ್ನೂ ಚಿಂತಿಸದೆ ಮೊಲದ ಮಾತನ್ನು ನಿಜವೆಂದು ತಿಳಿದುಕೊಂಡದ್ದು ಸರಿಯೇ ? ಚರ್ಚಿಸಿ.




ತಪ್ಪನ್ನು ಮಾಡಿದವರಿಗೆ ಏನು ಮಾಡಬೇಕು ?
ಸರಿ ಪಡಿಸೋಣವೇ
ಇಲ್ಲಾ ಹಾಗೆಯೇ ಬಿಟ್ಟುಬಿಡೋಣವೇ?

## ಓದೋಣ! ಚಿಂತಿಸೋಣ! ಬರೆಯೋಣ!

### ಸರಿಯಾದ ಉತ್ತರವನ್ನು ಆರಿಸಿ ಬರೆಯೋಣವೇ?

01 'ನನ್ನನ್ನು' ಈ ಪದವನ್ನು ಬಿಡಿಸಿ ಬರೆದಾಗ ..........................................

ಅ. ನ + ಅನ್ನು        ಆ. ನನ್ನ + ಅನ್ನು

ಇ. ನಾನು + ಅನ್ನು        ಈ. ನನ್ನ + ನ್ನು

02 'ಜೋರಾಗಿ' ಈ ಪದವನ್ನು ಬಿಡಿಸಿ ಬರೆದಾಗ ..........................................

ಅ. ಜೋರು + ಆಗಿ        ಆ. ಜೋ + ಆಗಿ

ಇ. ಜೋರು + ರಾಗಿ        ಈ. ಜೋ + ರಾಗಿ

03 'ಎಲ್ಲಿಗೆ+ಆದರೂ' ಈ ಪದವನ್ನು ಸೇರಿಸಿ ಬರೆದರೆ ಸಿಗುವ ಪದ ..................................

ಅ. ಎಲ್ಲಿಯವರೆಗೆ        ಆ. ಎಲ್ಲಿಗೋದರೂ

ಇ. ಎಲ್ಲಿಗಾದರೂ        ಈ. ಎಲ್ಲಿಗೇಯಾದರೂ



4th_Kannada_Reader_Term1.indd 39    12-07-2019 15:16:51

04 'ಸಭೆ+ಅಲ್ಲಿ' ಈ ಪದವನ್ನು ಸೇರಿಸಿ ಬರೆದರೆ ಸಿಗುವ ಪದ ..........................................

ಅ. ಸಭಾದಲ್ಲಿ ಆ. ಸಭೆನಲ್ಲಿ

ಇ. ಸಭೆಯಲ್ಲಿ ಈ. ಸಭೇಲಿ

05 'ಹಾಗೆ+ಆದರೆ' ಈ ಪದವನ್ನು ಸೇರಿಸಿ ಬರೆದರೆ ಸಿಗುವ ಪದ ..........................................

ಅ. ಹಾಗೇನಾದರೆ ಆ. ಹಾಗಾದರೆ

ಇ. ಹಾಗೆಯಾದರೆ ಈ. ಹಾಗಿದ್ದರೆ

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

01 ಮೊಲದ ಚಿಂತೆಗೆ ಕಾರಣವೇನು ?

02 ಪ್ರಾಣಿಗಳ ಸಭೆಯಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು ಎಂದು ಮೊಲವು ಹೇಳಿತು ?

03 ಮೊಲವು ತಾನು ರಾಜನೆಂದು ನಿರೂಪಿಸಲು ಹುಲಿಗೆ ಏನೆಂದು ಹೇಳಿತು ?

04 ಹುಲಿಯನ್ನು ಕ್ಷಮಿಸಿ ಬಿಟ್ಟುಬಿಡಲು ಮೊಲದ ನಿಬಂಧನೆ ಏನು ?

05 ಪ್ರಾಣಿಗಳು ನಿಜವಾಗಿಯೂ ಏನನ್ನು ಕಂಡು ಹೆದರಿದವು ?



4th_Kannada_Reader_Term1.indd 40 12-07-2019 15:16:52

## ವಿರುದ್ಧ ಪದಗಳಿಂದ ವಾಕ್ಯಗಳನ್ನು ಭರ್ತಿ ಮಾಡಿ

ಹಳೆಯ
ದುಃಖ
ಮೆಲ್ಲಗೆ
ಆರಂಭ
ಸುಳ್ಳು
ದುರ್ಗುಣ

01. ಮುಂಗಾರು ಮಳೆ ಬರುವುದರಿಂದ ಜನರು ಸಂತೋಷ ಪಡುತ್ತಾರೆ. ಬಾರದೇ ಇದ್ದರೆ ............................................. ಪಡುತ್ತಾರೆ.

02. ಯಾವಾಗಲೂ ನಿಜವನ್ನೇ ಮಾತನಾಡಬೇಕು. ................................ ಹೇಳುವುದನ್ನು ಬಿಡಬೇಕು.

03. ಸೋಲು ಎಂಬುದು ಅಂತ್ಯವಲ್ಲ, ಗೆಲುವಿಗೆ ................................

04. ಗಣಕ ಯಂತ್ರದ ಮೂಲಕ ಕಲಿಯುವ ವಿದ್ಯೆ ಹೊಸ ಪದ್ಧತಿ. ಕಪ್ಪು ಹಲಗೆಯ ಮೂಲಕ ಕಲಿಯುವುದು ........................................ ಪದ್ಧತಿ.

05. ಇತರರಿಗೆ ಸಹಾಯ ಮಾಡುವುದು ಒಳ್ಳೆಯ ಗುಣ, ಕೆಡುಕನ್ನುಂಟು ಮಾಡುವುದು ..........................................

06. ಆಸ್ಪತ್ರೆಗಳಲ್ಲಿ ಜೋರಾಗಿ ಮಾತನಾಡದೆ ........................................ ಮಾತನಾಡಬೇಕು.

## ಸರಿ ☑, ತಪ್ಪು ☒ ಎಂಬುದನ್ನು ಗುರುತಿಸಿ

01. ಹುಲಿ ಮೊಲದ ಬಂಧುಗಳನ್ನು ಕೊಂದು ತಿಂದು ಹಾಕಿತು. ☐

02. ಮೊಲ ಹುಲಿಗೆ ಕಬ್ಬನ್ನು ಕೊಟ್ಟಿತು. ☐

03. ಮೊಲ ಹುಲಿಗೆ ಶಿಕ್ಷೆ ಕೊಟ್ಟಿತು. ☐

04. ಮೊಲ ಹುಲಿಯೊಂದಿಗೆ ಕಾಡಿನಲ್ಲಿರುವ ಎಲ್ಲಾ ಪ್ರಾಣಿಗಳೂ ನನ್ನನ್ನು ಕಂಡರೆ ಭಯಗೊಳ್ಳುತ್ತವೆ ಎಂದು ಹೇಳಿತು. ☐

05. ಮೊಲ ಹುಲಿಗೆ ಕಾಡಿನ ಆಳ್ವಿಕೆಯನ್ನು ಮಾಡಬೇಕೆಂದು ತಿಳಿಸಿತು. ☐


4th_Kannada_Reader_Term1.indd 41 12-07-2019 15:16:52

## ಚಕ್ರದೊಳಗೆ ಇರುವ ಎರಡಕ್ಷರದ ಪದಗಳು ಏನು ಎಂಬುದನ್ನು ಈ ಕೆಳಕಂಡ ವಾಕ್ಯಗಳಿಂದ ಕಂಡು ಹಿಡಿಯಿರಿ.

01 ಜಾತ್ರೆಗಳಲ್ಲಿ ಇದು ಪ್ರಮುಖವಾಗಿರುತ್ತದೆ.

.........................

02 ಜನರು ಒಂದು ಕಡೆ ಸೇರಿ ವಾಸಿಸುವ ಸ್ಥಳ.

.................................

03 ಹೂಕಟ್ಟಲು ಸಹಾಯಕವಾಗಿರುವುದು. ................................

04 ಮರಗಿಡಬಳ್ಳಿಗಳು ನಿಲ್ಲಲು ಸಹಾಯಕವಾಗಿರುವುದು.

.................................




## ಅಕಾರಾದಿ ಕ್ರಮದಲ್ಲಿ ಬರೆಯಿರಿ.



**ಚೌಕ, ಚರಕ, ಚೀಟಿ, ಚುರುಕು, ಚಾಮರ, ಚಿಟ್ಟೆ, ಚಂದ, ಸೂರು, ಚೋಳ, ಚೇಳು**



4th_Kannada_Reader_Term1.indd 42 12-07-2019 15:16:53

## ಭಾಷೆಯೊಂದಿಗೆ ಆಟವಾಡು

**ಖಾಲಿ ಬಿಟ್ಟ ಸ್ಥಳಗಳಲ್ಲಿ ಗೂಡೆಯೊಳಗಿರುವ ಪದಗಳನ್ನು ಆರಿಸಿ ಬರೆಯಿರಿ.**






## ಕಾರ್ಯ ಯೋಜನೆ

ಗ್ರಂಥಾಲಯಕ್ಕೆ ಹೋಗಿ ಮಕ್ಕಳ ಪತ್ರಿಕೆಗಳಲ್ಲಿರುವ ಚಿತ್ರಕಥೆಗಳನ್ನು ಓದಿ, ಯಾವುದಾದರೂ ಮೂರು ಕಥೆಗಳನ್ನು ನಿಮ್ಮ ಪುಸ್ತಕದಲ್ಲಿ ಬರೆದುಕೊಂಡು ಬಂದು ತರಗತಿಯಲ್ಲಿ ಹೇಳಿ.



4th_Kannada_Reader_Term1.indd 43 12-07-2019 15:16:54

# 7 ಸೋಮೇಶ್ವರ ಶತಕ

ಉಡುರಾಜಂ ಕಳೆಗುಂದಿ ಪೆರ್ಚದಿಹನೇ, ನ್ಯಗ್ರೋಧ ಬೀಜಂ ಕೆಲಂ
ಸಿಡಿದುಂ ಪೆರ್ಮರನಾಗದೇ, ಎಳೆಗರುಂ ಎತ್ತಾಗದೇ ಲೋಕದೊಳ್
ಮಿಡಿ ಪಣ್ಣಾಗದೇ, ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚನ್ನ ಸೋಮೇಶ್ವರಾ

ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ ಗಂಡ
ಹೆಂಡಿರನತ್ಯುಗ್ರದಿ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್
ತರುವೇ ಪಣ್ಗಳ ಮೆಲ್ಲೆ ಮಾತೆ ವಿಷಮಂ ಪೆತ್ತರ್ಭಕಂಗೂಡಿಸಲ್
ಹರ ಕೊಲ್ಲಲ್ ಪರ ಕಾಯ್ವನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ!

–

– ಪುಲಿಗೆರೆಯಸೋಮನಾಥ





4th_Kannada_Reader_Term1.indd 44 12-07-2019 15:16:55

## ಸಾರಾಂಶ

ನಕ್ಷತ್ರಗಳ ಒಡೆಯನೆನಿಸಿದ ಚಂದ್ರನು ಹದಿನೈದು ದಿನಗಳವರೆಗೂ ಕುಂದುತ್ತಾ ಹೋದರೂ, ಅನಂತರ ಬೆಳವಣಿಗೆಯನ್ನು ಪಡೆಯುತ್ತಾನೆ. ಆಲದ ಮರದ ಬೀಜಗಳು ಸಿಡಿದು ಎಲ್ಲೋ ಬಿದ್ದು, ಯಾರೂ ನೀರೆರೆಯದಿದ್ದರೂ ಚೆನ್ನಾಗಿ ಬೆಳೆಯುತ್ತವೆ. ಸಣ್ಣದಾದ ಕರು ಬೆಳೆದು ದೊಡ್ಡ ಎತ್ತಾಗಿ ಬಲಿಷ್ಠವಾಗುತ್ತದೆ. ಮಿಡಿಗಾಯಿಯಾಗಿದ್ದುದು ಕೆಲವು ದಿನಗಳ ನಂತರ ದೊಡ್ಡದಾಗಿ ಹಣ್ಣಾಗುತ್ತದೆ. ಹೀಗೆಯೇ ದೈವದ ಒಲುಮೆ ಉಂಟಾದಾಗ ಸಾಮಾನ್ಯ ಮನುಷ್ಯನೂ ಕೂಡ ಸಿರಿವಂತನೂ, ಕೀರ್ತಿವಂತನೂ ಆಗುವನೆಂದು ಕವಿ ಇಲ್ಲಿ ಹೇಳಿದ್ದಾನೆ..

ಭೂಮಿಗೆ ಹಾಕಿದ ಬೀಜಗಳನ್ನು ಭೂಮಿಯೇ ನುಂಗಿದರೆ, ಗಿಡಗಳ ರಕ್ಷಣೆಗೆಂದು  ಹಾಕಿದ ಬೇಲಿ ಗಿಡಗಳನ್ನೇ ತಿಂದರೆ,ಗಂಡನು ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳದೆ ಕ್ರೂರವಾಗಿ ಶಿಕ್ಷಿಸಿದರೆ, ಪ್ರಜೆಗಳನ್ನು ಮಹಾರಾಜನೇ ತೊಂದರೆಗೊಳಪಡಿಸಿದರೆ,ವೃಕ್ಷವೇ ಹಣ್ಣುಗಳನ್ನು ತಿಂದರೆ ತಾಯಿಯೇ ತಾನು ಜನ್ಮವಿತ್ತ ಮಗುವಿಗೆ ವಿಷ ಉಣ ಸಿದರೆ , ಜನರನ್ನು ರಕ್ಷಿಸಬೇಕಾದ ಭಗವಂತನೇ/ ಶಿವನೇ ಕೊಂದರೆ ಈ ಲೋಕದ ಸಾಮಾನ್ಯ ಜನರನ್ನು ರಕ್ಷಿಸಲು ಇತರರಿಂದ ಸಾಧ್ಯವೇ ಇಲ್ಲವೆಂದು ಕವಿ ಇಲ್ಲಿ ಹೇಳಿದ್ದಾನೆ.

### ಆಶಯ

ಪ್ರಾಚೀನವಾದ ಆಲದ ಮರದಲ್ಲಿನ ಚಿಕ್ಕ ಹಣ್ಣಿನ ಒಂದು ಬೀಜವು, ತಿಳಿಯಾದ ನೀರಿರುವ ಕೊಳದಲ್ಲಿ ವಾಸಿಸುವ ಒಂದು ಸಣ್ಣ ಮೀನಿನ ಮೊಟ್ಟೆಗಿಂತಲೂ ಚಿಕ್ಕದಾಗಿರುತ್ತದೆ. ಆ ಚಿಕ್ಕ ಬೀಜವು ಒಂದು ದೊಡ್ಡ ಆಲದ ಮರವಾಗಿ ಬೆಳೆದು ನಿಂತಾಗ ಆ ಮರದ ನೆರಳಿನಲ್ಲಿ ಗಜಪಡೆ, ರಥಪಡೆ, ಅಶ್ವದಳ, ಸೇನಾದಳ ಮುಂತಾದವುಗಳೊಂದಿಗೆ ರಾಜನೂ ಸೈನಿಕರೂ ತಂಗಲು ಸಾಧ್ಯ. ಹಾಗೆಯೇ, ನೀವು ಮಾಡುವ ಒಂದು ಚಿಕ್ಕ ಸಹಾಯವು ಬೇರೆಯವರಿಗೆ ದೊಡ್ಡದಾದ ರೀತಿಯಲ್ಲಿ ಅನುಕೂಲವಾಗುತ್ತದೆ.





4th_Kannada_Reader_Term1.indd 45 12-07-2019 15:16:56

## ಬನ್ನಿ ಮಾತನಾಡೋಣ



- ಪದ್ಯದ ಅರ್ಥವನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಹೇಳಿ.
- ಸಾಮಾನ್ಯ ವ್ಯಕ್ತಿ ಕೂಡ ಸಿರಿವಂತನೂ ಆಗಬಲ್ಲನು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?




ಚಿಕ್ಕ ಚಿಕ್ಕ ಸಹಾಯಗಳನ್ನು ಇತರರಿಗೆ ಮಾಡುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ತರಗತಿಯಲ್ಲಿ ಚರ್ಚಿಸಿರಿ.

## ಓದೋಣ! ಚಿಂತಿಸೋಣ! ಬರೆಯೋಣ!

### ಸರಿಯಾದ ಉತ್ತರವನ್ನು ಆರಿಸಿ ಬರೆಯೋಣವೇ ?

01 'ಉಡು' ಈ ಪದದ ಅರ್ಥ ..............................................

ಅ. ಉಡ　　ಆ. ನಕ್ಷತ್ರ

ಇ. ಸೂರ್ಯ　　ಈ. ಉಡುಪು

02 'ನ್ಯಗ್ರೋಧ' ಈ ಪದದ ಅರ್ಥ ..............................................

ಅ. ನರಿ　　ಆ. ಆಲ

ಇ. ಬೇವು　　ಈ. ವ್ಯಾಘ್ರ

03 **'ಬೀಜ' ಈ ಪದದ ಅರ್ಥ** ..............................................

ಅ. ಹೂವು　　ಆ. ಕಾಯಿ

ಇ. ಹಣ್ಣು　　ಈ. ಕಾಳು



4th_Kannada_Reader_Term1.indd 46 12-07-2019 15:16:56

04 'ಎತ್ತಾಗಿ' ಈ ಪದವನ್ನು ಬಿಡಿಸಿ ಬರೆದಾಗ ..............................

ಅ. ಎತ್ತು+ಹಾಗಿ	ಆ. ಎತ್ತು+ಆಗಿ

ಇ. ಎತ್ತಿ+ಹೋಗಿ	ಈ. ಎತ್ತಿ+ಗಾಗಿ

05 'ಮಿಡಿ+ಕಾಯಿ' ಎಂಬ ಪದವನ್ನು ಸೇರಿಸಿ ಬರೆದಾಗ ..............................

ಅ. ಮಿಡಿಗಾಯಿ	ಆ. ಮಿಡಿಕಾಯಿ

ಇ. ಮಿಡುಕು	ಈ. ಮಿಡಿದಕಾಯಿ

06 'ನೆರಳು+ಆಗಿ' ಎಂಬ ಪದವನ್ನು ಸೇರಿಸಿ ಬರೆದಾಗ ..............................

ಅ. ನೆರಳಿಗಾಗಿ	ಆ. ನೆರಳೊಳಗಾಗಿ

ಇ. ನೆರಳಾಗಿ	ಈ. ನೆರಳಿಗೆ

## ಪ್ರಶ್ನೆಗಳಿಗೆ ಉತ್ತರಿಸಿ

01 ನಕ್ಷತ್ರಗಳ ಒಡೆಯ ಯಾರು ?

02 ದೈವದ ಕೃಪೆಯುಂಟಾದರೆ ಏನಾಗುತ್ತದೆ ?

03 ಆಲದ ಮರದ ಬೀಜ ಹೇಗಿರುತ್ತದೆ ?

04 ಯಾರು ತಾಯಿ ಎನಿಸಿಕೊಳ್ಳುತ್ತಾರೆ?

05 ಜನರನ್ನು ರಕ್ಷಿಸಬೇಕಾದವರು ಯಾರು ?

## ಸರಿ ಹೊಂದುವ ವಿರಾಮ ಚಿಹ್ನೆಗಳನ್ನು ಬರೆಯಿರಿ

01 ಆಹಾ ಎಷ್ಟೊಂದು ಆನಂದ

02 ನನ್ನನ್ನು ಕಟ್ಟಿ ಹಾಕುತ್ತಿದ್ದಾರೆ

03 ಆಹಾ ಎಷ್ಟೊಂದು ಸುಂದರ

04 ನಾನು ಏನು ಕೆಲಸ ಮಾಡಬೇಕು

05 ತರಕಾರಿ ಅಂಗಡಿಯಲ್ಲಿ ಬೇಕಾಗಿರುವ ಟೊಮೇಟೋ, ಪಡುವಲ ಮುಂತಾದವುಗಳನ್ನು ತೆಗೆದುಕೊಂಡು ಬಂದೆ.



4th_Kannada_Reader_Term1.indd 47	12-07-2019 15:16:57

## ಭಾಷೆಯೊಡನೆ ಆಟವಾಡು

**ಪದ ಒಂದು, ಅರ್ಥ ಎರಡು ಕಂಡು ಹಿಡಿ**

**ಉದಾಹರಣೆ :** ಆಕಾಶದಲ್ಲಿ ಹೊಳೆಯುವುದು ಶಶಿ

ನನ್ನ ಸ್ನೇಹಿತನ ಹೆಸರು ಶಶಿ



01 ಮಾಸದ ಮತ್ತೊಂದು ಹೆಸರು ____________

ಚಂದ್ರನ ಮತ್ತೊಂದು ಹೆಸರು ____________



02 ಮಹಡಿಗೆ ಹೋಗಲು ಬೇಕು ____________

ವಿದ್ಯಾರ್ಥಿಯ ಯಶಸ್ಸಿಗೆ ಜ್ಞಾನವೇ ____________

03 ಎತ್ತಿನ ಗಾಡಿ ಸಾಗಲು ಬೇಕು ____________

ಮಕ್ಕಳಿಗೆ ಆಡಲು ಬೇಕು ____________

04 ಒಂದು ವಾರಕ್ಕೆ ದಿನಗಳು ____________

ಅಲ್ಲಿಂದ ಮೇಲಕ್ಕೆ ____________

7

05 ಅಪ್ಪನಿಗೆ ಮತ್ತೊಂದು ಹೆಸರು ____________

ಸಂತೆಗೆ ಹೋಗಿ ತರಕಾರಿ ____________

### ಕಲೆ ಮತ್ತು ಕರಕೌಶಲ್ಯ

ಪೆನ್ಸಿಲಿನ ಧೂಳು ಹೊದಿಕೆಯಿಂದ ಚಿತ್ರಗಳನ್ನು ರಚಿಸೋಣ.





4th_Kannada_Reader_Term1.indd 48 12-07-2019 15:16:57

## ಹೊಂದಿಸೋಣವೇ ?


ಗೂಡೆಯಲ್ಲಿರುವ ಸಜಾತೀಯ ಒತ್ತಕ್ಷರಗಳು, ವಿಜಾತೀಯ ಒತ್ತಕ್ಷರಗಳ ಪದಗಳನ್ನು ವಿಂಗಡಿಸಿ ಬರೆಯಿರಿ.
ಅಕ್ಷತೆ
ಗದ್ದಲ
ಬಟ್ಟೆ
ಚಕ್ಕುಲಿ


ಗದ್ದಲ
ಸ್ಥಳ

## ತಿಳಿದುಕೊಳ್ಳೋಣ!



ಮೀನುಗಳಲ್ಲಿ 22,000 ಬಗೆಯ ಮೀನುಗಳಿವೆ. ಇವುಗಳಲ್ಲಿ ತುಂಬಾ ಚಿಕ್ಕದು ಗೋಬಿ ಮೀನು. ಇದರ ಉದ್ದ 13 ಮಿ.ಮೀ.! ದೊಡ್ಡ ಮೀನು ತಿಮಿಂಗಿಲ. ಇದರ ಉದ್ದ 18ಮೀಟರ್.









## ಕಾರ್ಯ ಯೋಜನೆ

**ದಿನಪತ್ರಿಕೆಗಳಲ್ಲಿ ಬರುವ ಸುದ್ದಿಗಳಲ್ಲಿ ಇತರರಿಗೆ ಸಹಾಯವಾಗುವ ಸುದ್ದಿಗಳನ್ನು ಸಂಗ್ರಹಿಸಿ, ಸುದ್ದಿ ಪತ್ರವನ್ನು ಸಿದ್ಧಪಡಿಸಿ ಮತ್ತು ಸಂದೇಶದ ತುಣುಕನ್ನು ಕೆಳಭಾಗದಲ್ಲಿ ಪ್ರಕಟಿಸಿ.**

**ಕೆಳಭಾಗದಲ್ಲಿ ಪ್ರಕಟಿಸಿ**



4th_Kannada_Reader_Term1.indd 50 12-07-2019 15:16:58

## ಸಂಬಂಧ ಸೂಚಕಾವ್ಯಯಗಳನ್ನು ತಿಳಿಯೋಣವೇ?

ಸಾಮಾನ್ಯವಾಗಿ ಎರಡು ಪದಗಳನ್ನಾಗಲೀ, ಎರಡು ವಾಕ್ಯಗಳನ್ನಾಗಲೀ ಸೇರಿಸುವ ಅವ್ಯಯಗಳನ್ನು ಪದಸಮುಚ್ಚಯ ಅಥವಾ ಸಮುಚ್ಚಯ ಬೋಧಕಾವ್ಯಯ ಎನ್ನುವರು.

ಕೆಲವು ಸಂಬಂಧ ಸೂಚಕಾವ್ಯಯಗಳನ್ನೂ, ಅವುಗಳನ್ನು ಉಪಯೋಗಿಸುವ ಕ್ರಮವನ್ನೂ ತಿಳಿಯೋಣ.

**ಆದರೆ, ಆದ್ದರಿಂದ, ಆದರೂ, ಆದುದರಿಂದ, ಹಾಗೆ, ಹಾಗಾದರೂ, ಅದರಿಂದ, ಮುಂತಾದವು.**

01 ಮುಂಗಾರು ಮಳೆ ಸುರಿಯಿತು. ಅದರಿಂದ ಕೆರೆಕಟ್ಟೆಗಳು ತುಂಬಿದವು.

02 ಗಾಳಿಯು ವೇಗವಾಗಿ ಬೀಸಿತು. ಆದ್ದರಿಂದ ಮರಗಳು ಬೇರು ಸಹಿತ ನೆಲಕ್ಕೆ ಉರುಳಿದವು.

03 ತಂದೆ ಬೇಗನೆ ಬರುತ್ತೇನೆ ಎಂದು ಹೇಳಿದರು. ಆದರೂ ಬರಲಿಲ್ಲ.

04 ಹೂಗಳು ಸುಂದರವಾಗಿ ಅರಳಿದ್ದವು. ಆದರೆ ಕೀಳಲು ಮನಸ್ಸಿಲ್ಲ.

05 ನಾನು ತಾಯ್ನಾಡಿನಲ್ಲಿ ಕೆಲಸ ಮಾಡಲು ಇಷ್ಟಪಡುತ್ತೇನೆ. ಆದ್ದರಿಂದ ಹೊರದೇಶಕ್ಕೆ ಹೋಗುವುದಿಲ್ಲ.

06 ದಿನನಿತ್ಯ ಬೆಳಗ್ಗೆ ಎದ್ದು ಚೆನ್ನಾಗಿ ಓದಿದೆನು. ಆದುದರಿಂದ ನಾನು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದೆನು.

## ಅಭ್ಯಾಸ

ಆದರೆ, ಆದರೂ, ಆದ್ದರಿಂದ, ಅದರಿಂದ, ಆದುದರಿಂದ, ಹಾಗೆ – ಮುಂತಾದ ಸಂಬಂಧಸೂಚಕ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸಿರಿ.

______________________________________________

______________________________________________

______________________________________________

______________________________________________



4th_Kannada_Reader_Term1.indd 51 12-07-2019 15:16:59

# 8 ಮುಂಜಾನೆ ಸಮಯ

'ಮನ್ನವನೂರು' ಒಂದು ಸುಂದರವಾದ ಮಲೆನಾಡಿನ ಗ್ರಾಮ. ಮಧುರವಾದ ಬೆಳಗಿನ ಸಮಯದಲ್ಲಿ ಮಳೆ ಬಂದು ಸುರಿದಿತ್ತು. ರಸ್ತೆಯ ಇಕ್ಕೆಲಗಳಲ್ಲಿ ನೀರು ನಿಂತಿತ್ತು. ಮರಗಳು ನೆನೆದು ರೆಂಬೆಕೊಂಬೆಗಳು ಮತ್ತು ಎಲೆಗಳಲ್ಲಿ ಮಳೆನೀರಿನ ಹನಿಗಳು ಕಾಣುತ್ತಿದ್ದವು. ಬಾನಿನಲ್ಲಿ ಹತ್ತಿಯ ಮೂಟೆಗಳಂತೆ ಮೋಡಗಳ ಗುಂಪುಗಳು ಹಾದು ಹೋಗುತ್ತಾ, ದಾರಿಯನ್ನು ಮರೆ ಮಾಡುತ್ತಾ, ತೇಲುತ್ತಾ ಹೋಗುತ್ತಿದ್ದವು. ಹಚ್ಚಹಸುರಿನ ಹೊಲಗದ್ದೆಗಳಲ್ಲಿ ತಂಪಾದ ಗಾಳಿ ಬೀಸುತ್ತಿತ್ತು.

ತಾಳೆಮರದ ಓಲೆಗರಿಗಳಿಂದ ಮಾಡಿದ್ದ ಗುಡಿಸಲು ಮನೆಯಲ್ಲಿ ಕಾಮಾಕ್ಷಿಯಮ್ಮ ಹಣೆಯಲ್ಲಿ ಪೂರ್ಣಚಂದ್ರನಂತೆ ಸಿಂಧೂರ ತಿಲಕ ಇಟ್ಟಿದ್ದಳು. ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಳು. ಕಪ್ಪಾದ ಮಣ್ಣಿನ ಪಾತ್ರೆಯಲ್ಲಿ ಅರಕದ ಅಕ್ಕಿ ಬೇಯುತ್ತಿತ್ತು. ಮತ್ತೊಂದು ಗೂಡೊಲೆಯಲ್ಲಿ ಹಳದಿಬೇಳೆ ಬೆಳ್ಳುಳ್ಳಿಯೊಡನೆ ಸಾಂಬಾರಿನ ವಾಸನೆ ಘಮಘಮಿಸುತ್ತಾ ಕುದಿಯುತ್ತಿತ್ತು.

ಕರಿದ, ಹಸಿರಾದ, ನರಳೆ ಚಟ್ನಿಯನ್ನು ಅರೆಯುವ ಕಲ್ಲಿನಲ್ಲಿ ಅರೆಯುತ್ತಾ, ಹಾಗೇ ಒಲೆಯನ್ನು ಗಮನಿಸುತ್ತಿದ್ದಳು ಕಾಮಾಕ್ಷಿಯಮ್ಮ.





4th_Kannada_Reader_Term1.indd 52 12-07-2019 15:17:00

ಮರಗಿಡಗಳು ತುಂಬಿದ ಬಯಲಿನಲ್ಲಿ ಹಸುಕರುಗಳಂತೆ ಓಡಾಡಿಕೊಂಡು ಆಟವಾಡುತ್ತಿದ್ದರು ಮಕ್ಕಳಾದ ಕುಮಾರ ಮತ್ತು ಕವಿತ.

ಸ್ವಲ್ಪ ಹೊತ್ತಿನ ನಂತರ, ಅಮ್ಮ ಅಕ್ಕರೆಯಿಂದ ಮಕ್ಕಳನ್ನು ಕರೆದಳು. ಆಗ ಮಕ್ಕಳು ಶಾಲೆಗೆ ಹೋಗಲು ತಯಾರಾಗುತ್ತಿದ್ದರು.

ಮರದ ಹಲಗೆಯ ಮಣೆಯ ಮೇಲೆ ಕೂರಿಸಿ, ತುದಿಬಾಳೆಯೆಲೆಯನ್ನು ಹಾಕಿ, ನೀರನ್ನು ಚಿಮುಕಿಸಿ ಅದರಲ್ಲಿ ಬಿಸಿಬಿಸಿಯಾದ ಅರಕದಕ್ಕಿಯ ಅನ್ನವನ್ನು ಬಡಿಸಿ, ಬೇಳೆ ಸಾಂಬಾರನ್ನು ಹಾಕಿದಳು ಅಮ್ಮ. ಅದರೊಂದಿಗೆ ನೆಂಚಿಕೊಳ್ಳಲು ಚಟ್ನಿಯನ್ನೂ ಇಟ್ಟಳು. ನಾಲಿಗೆಯನ್ನು ಚಪ್ಪರಿಸುತ್ತಾ ಮಕ್ಕಳು ಇಷ್ಟಪಟ್ಟು ಊಟ ಮಾಡಿದರು. ನಂತರ ತಾಯಿಗೆ ಹೇಳಿ, ಶಾಲೆಗೆ ಕುಣಿಯುತ್ತಾ ನಲಿಯುತ್ತಾ ಹೋದರು.

ನಂತರ, ಗದ್ದೆಯಲ್ಲಿ ಕೆಲಸ ಮಾಡುತ್ತಿರುವ ಗಂಡನಿಗೆ ಊಟವನ್ನು ಕೊಡಲು ಹೋದಳು. ಹೀಗೆ ಮಧುರವಾದ ಮುಂಜಾನೆಯ ಸಮಯ ಕಳೆಯಿತು.



ವರ್ಣನೆಯ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ, ಸಂಭಾಷಿಸಿ.



4th_Kannada_Reader_Term1.indd 53 12-07-2019 15:17:02

## ಬನ್ನಿ ಮಾತನಾಡೋಣ

- ಮನ್ನವನೂರು ಗ್ರಾಮದ ವರ್ಣನೆಯನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಹೇಳಿರಿ.
- ನಿಮ್ಮ ಗ್ರಾಮದ ಮುಸ್ಸಂಜೆ ಸಮಯದ ದೃಶ್ಯಗಳ ಚಿತ್ರಣವನ್ನು ವರ್ಣಿಸಿರಿ.
- ಪಾಠವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಸ್ಪಷ್ಟವಾಗಿ ಓದಿರಿ.





4th_Kannada_Reader_Term1.indd 54 12-07-2019 15:17:03




ಚಿತ್ರದಲ್ಲಿರುವ ಯಾವ ಗ್ರಾಮದಲ್ಲಿ ನೀವು ವಾಸ ಮಾಡಲು ಇಷ್ಟ ಪಡುವಿರಿ. ಏಕೆ ?

ನಿಮ್ಮ ಗ್ರಾಮವನ್ನು ಸ್ವಚ್ಛಗೊಳಿಸಲು ಏನು ಮಾಡಬೇಕು? ಯೋಚಿಸಿ.

1



2



## ಓದೋಣ! ಚಿಂತಿಸೋಣ! ಬರೆಯೋಣ!

### ಸರಿಯಾದ ಬಲೂನುಗಳನ್ನು ಹೊಂದಿಸಿರಿ.

01 ಸಮಯ

02 ಗಂಟು

03 ತಯಾರು ಮಾಡು

04 ಚಿಗುರು

05 ಗೂಡೊಲೆ






4th_Kannada_Reader_Term1.indd 55 12-07-2019 15:17:03

## ಸರಿಯಾದ ಉತ್ತರವನ್ನು ಆರಿಸಿ ಬರೆಯೋಣವೇ ?

01 'ರಸ್ತೆಯಲ್ಲಿ' ಈ ಪದವನ್ನು ಬಿಡಿಸಿ ಬರೆದಾಗ ___________

ಅ) ರಸ್ತೆ+ಅಲ್ಲಿ ಆ) ರಸ್ತೆ+ಎಲ್ಲಿ

ಇ) ರಸ್ತೆ+ಯಲ್ಲಿ ಈ) ರಸ್ತೆ+ಇಲ್ಲಿ

02 'ಮರಗಳನ್ನು' ಈ ಪದವನ್ನು ಬಿಡಿಸಿ ಬರೆದಾಗ ___________

ಅ) ಮರ+ಗಳನ್ನು ಆ) ಮರಗಳು+ಅನ್ನು

ಇ) ಮರಗಳು+ಯನ್ನು ಈ) ಮರಗಳು+ಗಳನ್ನು

03 'ಓಡು+ಆಡಿ' ಈ ಪದವನ್ನು ಸೇರಿಸಿ ಬರೆದಾಗ ___________

ಅ) ಓಡಾಡು ಆ) ಓಡೋಡಿ

ಇ) ಓಡಿಯಾಡಿ ಈ) ಓಡಾಡಿ

04 'ಮಕ್ಕಳು+ಅನ್ನು' ಈ ಪದವನ್ನು ಸೇರಿಸಿ ಬರೆದಾಗ ___________

ಅ) ಮಕ್ಕಳನ್ನು ಆ) ಮಕ್ಕಳೆನ್ನು

ಇ) ಮಕ್ಕಳಅನ್ನು ಈ) ಮಕ್ಕಳುಗಳನ್ನು

05 'ತಯಾರು+ಆಗು' ಈ ಪದವನ್ನು ಸೇರಿಸಿ ಬರೆದಾಗ ___________

ಅ) ತಯಾರಿಯಾಗು ಆ) ತಯಾರಿಸು

ಇ) ತಯಾರಾಗು ಈ) ತಯಾರುವಾಗು

06 'ನವಣೆ + ಅಕ್ಕಿ' ಪದವನ್ನು ಸೇರಿಸಿ ಬರೆದಾಗ ___________

ಅ) ನವಣಕ್ಕಿ ಆ) ನವಣೆಯಕ್ಕಿ

ಇ) ನವಣೆಯಅಕ್ಕಿ ಈ) ನವಣಾಕ್ಕಿ

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

01 ಸುಂದರ ಮಲೆನಾಡಿನ ಗ್ರಾಮದ ಹೆಸರೇನು ?

02 ಗ್ರಾಮದಲ್ಲಿ ನಿಮಗೆ ಇಷ್ಟವಾದ ಪ್ರಕೃತಿಯ ದೃಶ್ಯಗಳನ್ನು ಬರೆಯಿರಿ ?

03 ಮಕ್ಕಳು ಬೆಳಗಿನ ಉಪಹಾರವಾಗಿ ಏನನ್ನು ತಿಂದರು ?

## ಈ ಪಾಠದಲ್ಲಿ ಬರುವ ವರ್ಣನೆಯ ಪದಗಳನ್ನು ಆಯ್ಕೆ ಮಾಡಿ ಬರೆಯಿರಿ.

ಉದಾಹರಣೆಗೆ : ಹಚ್ಚಹಸಿರು ___________ ___________ ___________



4th_Kannada_Reader_Term1.indd 56 12-07-2019 15:17:04

## ಭಾಷೆಯೊಡನೆ ಆಟವಾಡು

**ಅಂಕಣದಲ್ಲಿ ಕೊಟ್ಟಿರುವ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸಿರಿ.**






1. ಮನ
2. 
3. 
4. 
5. 
6. 
7. 
8. 

**ಬಣ್ಣ ಹಚ್ಚಿ ಆನಂದಿಸೋಣ!**





4th_Kannada_Reader_Term1.indd 57 12-07-2019 15:17:06

## ವಾಕ್ಯ ವೃಂದವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ

ಸಿರಿ ಧಾನ್ಯ ಆಹಾರಗಳೇ ನಮ್ಮ ಆರೋಗ್ಯಕ್ಕೆ ಉತ್ತಮ. ಅವು ಕೆಂಪಕ್ಕಿ, ನವಣೆ, ಕಂಬು, ರಾಗಿ, ಜೋಳ, ಊದಲು, ಹಾರಕ ಮುಂತಾದವುಗಳು. ಈ ಸಿರಿಧಾನ್ಯಗಳ ಹಲವು ಬಗೆಯ ಆಹಾರಗಳನ್ನು ಮಣ್ಣಿನ ಪಾತ್ರೆಯಲ್ಲಿ ತಯಾರಿಸಿ ಊಟ ಮಾಡುವುದು ತುಂಬಾ ಒಳ್ಳೆಯದು. ನಾವು ತಿಂದ ಆಹಾರವು ಸಂಪೂರ್ಣವಾಗಿ ಜೀರ್ಣವಾದ ನಂತರ ಊಟ ಮಾಡಬೇಕು. ಇದನ್ನು ನಮ್ಮ ಹಿರಿಯರು 'ಹಸಿದ ನಂತರ ತಿನ್ನು' ಎಂದಿದ್ದಾರೆ. ಇದನ್ನು ಬಿಟ್ಟು ತ್ವರಿತ ಆಹಾರಗಳನ್ನು ತಿನ್ನುವುದು ಅನೇಕ ರೋಗಗಳು ಉಂಟಾಗಲು ಕಾರಣವಾಗಿದೆ.

'ಸಿರಿ ಧಾನ್ಯಗಳನ್ನು ತಿನ್ನೋಣ.
ರೋಗಗಳಿಂದ ಮುಕ್ತಿ ಪಡೆಯೋಣ.
ಆರೋಗ್ಯದ ಜೀವನ ನಡೆಸೋಣ'

01 ಯಾವ ಬಗೆಯ ಆಹಾರ ನಮಗೆ ಉತ್ತಮ ?




02 ಸಿರಿಧಾನ್ಯಗಳ ಹೆಸರುಗಳನ್ನು ಬರೆಯಿರಿ ?

03 ತ್ವರಿತ ಆಹಾರ ಬಗೆಗಳನ್ನು ತಿನ್ನಬಾರದು. ಏಕೆ ?

04 ಈ ಟಿಪ್ಪಣಿಯಿಂದ ನೀವು ತಿಳಿದುಕೊಂಡಿರುವುದು ಏನು ?



4th_Kannada_Reader_Term1.indd 58 12-07-2019 15:17:07

## ಕಲೆಯೂ ಕೌಶಲ್ಯವೂ

### ಬೇಕಾಗುವ ಸಾಮಗ್ರಿಗಳು

ಬಿಳಿ ಹಾಳೆ, ಕಾಗದ, ಸ್ವಲ್ಪ ಮಟ್ಟಿಗೆ ಮರಳು, ಅಂಟು, ಪೆನ್ಸಿಲ್, ಬಣ್ಣದ ಪೆಟ್ಟಿಗೆ.

### ಮಾಡುವ ವಿಧಾನ

ಒಂದು ಬಿಳಿ ಹಾಳೆಯಲ್ಲಿ ನಿಮಗಿಷ್ಟವಾದ ಚಿತ್ರವನ್ನು ಬರೆದುಕೊಳ್ಳಿ. ಚಿತ್ರದ ಒಳಭಾಗ ಉಳಿದುಕೊಳ್ಳುವಂತೆ ಕಾಗದವನ್ನು ಸರಿಯಾಗಿ ಕತ್ತರಿಸಿಕೊಳ್ಳೀ. ನಂತರ ಅದನ್ನು ಒಂದು ರಟ್ಟಿನ ಮೇಲಿಟ್ಟು ಆ ಭಾಗದಲ್ಲಿ ಮಾತ್ರ ಅಂಟನ್ನು ತಡವಿ(ಉಜ್ಜಿ), ಅಂಟು ಆರುವುದಕ್ಕೆ ಮುನ್ನ ಮರಳನ್ನು ಚೆಲ್ಲಿ, ಚೆನ್ನಾಗಿ ಆರುವ ಮುನ್ನ ಮೇಲಿನ ಕಾಗದದ ಚಿತ್ರವನ್ನು ನಿಧಾನವಾಗಿ ತೆಗೆದುಬಿಡಿ. ಈಗ ಸುಂದರವಾದ ಮರಳು ಚಿತ್ರಕಲೆ ದೊರಕುತ್ತದೆ. ಬೇಕಾದಂತಹ ಸ್ಥಳದಲ್ಲಿ ಬಣ್ಣಬಣ್ಣದ ಪೆಟ್ಟಿಗೆಯ ಮೇಲಿಟ್ಟು ಅಲಂಕರಿಸಿ. ಇದನ್ನು ಬಾಳಿಕೆಯ ರಟ್ಟಿನಂತೆಯೂ ಉಪಯೋಗಿಸಬಹುದು.



## ತಿಳಿದುಕೊಳ್ಳೋಣ



- ಎರಡು ಅಥವಾ ಹೆಚ್ಚಿನ ಪದಗಳು ಒಂದೇ ಅರ್ಥ ಕೊಡುವುದು ಸಮಾನಾರ್ಥಕ.ಪದಗಳು

**ಉದಾಹರಣೆ :**

1.ಮನೆ : ಗೃಹ, ನಿವಾಸ.
2.ಭೂಮಿ: ಧರೆ, ಪೃಥ್ವಿ.
3.ಶಶಿ : ಚಂದ್ರ, ಸೋಮ,

- ವಿರುದ್ಧ ಅರ್ಥ ನೀಡುವ ಪದಗಳು ವಿರುದ್ಧಾರ್ಥಕಗಳು.

**ಉದಾಹರಣೆ :**

1. ಹಗಲು × ರಾತ್ರಿ
2. ಹಳ್ಳ × ದಿಣ್ಣೆ
3. ಮೇಲೆ × ಕೆಳಗೆ



## ಕಾರ್ಯ ಯೋಜನೆ



- ಸಿರಿ ಧಾನ್ಯಗಳು, ನವಧಾನ್ಯಗಳನ್ನು ಶೇಖರಿಸಿ, ನೆನೆಸಿಟ್ಟು, ಅವುಗಳಲ್ಲಿ ಪೈರು ಮೊಳಕೆಯೊಡೆಯುವಂತೆ ಬೆಳೆಸಿ.



4th_Kannada_Reader_Term1.indd 59 12-07-2019 15:17:07

# ೯ ಕರಿಕಾಲ ಚೋಳನು ನಿರ್ಮಿಸಿದ ಅಣೆಕಟ್ಟು(ಕಲ್ಲಣೈ)

ಭೂಮಿಕ ಮತ್ತು ಸವಿತ ಮೊದಲ ಅವಧಿಯ ಪರೀಕ್ಷೆಯ ರಜಾ ದಿನಗಳಲ್ಲಿ ತಿರುಚ್ಚಿಯಲ್ಲಿರುವ ತಮ್ಮ ಮಾವನ ಮನೆಗೆ ಹೋದರು. ಕಲ್ಲಿನ ಅಣೆಕಟ್ಟನ್ನು ನೋಡಬೇಕೆಂಬ ಬಯಕೆಯನ್ನು ಮಾವನ ಬಳಿ ಹೇಳಿದರು. ಮಾವನು ಅದಕ್ಕೆ ತಮ್ಮ ಕುಟುಂಬ ಸದಸ್ಯರೆಲ್ಲ ಜೊತೆಗೂಡಿ ಕಲ್ಲಿನ ಅಣೆಕಟ್ಟನ್ನು ನೋಡಲು ಹೊರಟರು.

**ಭೂಮಿಕ** : ನನಗೆ ಈ ಪ್ರಯಾಣ ತುಂಬಾ ಸಂತೋಷವಾಗಿದೆ ಮಾವ.

**ಸವಿತ** : ನನಗೂ ಹಾಗೆಯೇ! ಏಕೆಂದರೆ ನಮ್ಮ ಜೊತೆ ಅತ್ತೆಯೂ, ಸುರೇಶನೂ ಬರುವುದು ನಮಗೆ ತುಂಬಾ ಸಂತೋಷ.

**ಅತ್ತೆ** : ನಾವು ನೋಡಲು ಬಂದ ಅಣೆಕಟ್ಟು ಸಮೀಪಿಸಿತು.

**ಮಾವ** : ಅಣೆಕಟ್ಟನ್ನು ಸುತ್ತಿ ನೋಡೋಣ... ಬನ್ನಿ...

**ಸವಿತ** : ಮಾವಾ...! ಕಲ್ಲಿನ ಅಣೆಕಟ್ಟು ಯಾವ ಜಿಲ್ಲೆಯಲ್ಲಿದೆ ?

**ಮಾವ** : ತಂಜಾವೂರು ಜಿಲ್ಲೆಯಲ್ಲಿದೆ. ಇದು ತಿರುಚ್ಚಿಯಿಂದ 20 ಕಿ.ಮೀ. ದೂರದಲ್ಲಿದೆ. ಈ ಅಣೆಕಟ್ಟು ಕರಿಕಾಲ ಚೋಳ ಅರಸನಿಂದ ನಿರ್ಮಾಣವಾಗಿದೆ.





4th_Kannada_Reader_Term1.indd 60 12-07-2019 15:17:08

**ಭೂಮಿಕ** : ಕಲ್ಲಿನ ಅಣೆಕಟ್ಟನ್ನು ಕಟ್ಟಿದ ಕರಿಕಾಲ ಚೋಳನ ಬಗ್ಗೆ ತಿಳಿದುಕೊಳ್ಳಲು ನನಗೆ ಆಸೆ ಮಾವಾ...! ನಿಮಗೆ ತಿಳಿದಿರುವ ವಿಷಯಗಳನ್ನು ಹೇಳಿ.

**ಅತ್ತೆ** : ನನಗೆ ಗೊತ್ತು. ನಾನು ಹೇಳುತ್ತೇನೆ, ಕೇಳಿ. ಚೋಳ ರಾಜರುಗಳಲ್ಲಿಯೇ ತುಂಬಾ ಹೆಸರುವಾಸಿಯಾದ ರಾಜ ಕರಿಕಾಲ ಚೋಳ. ಇವನ ಮತ್ತೊಂದು ಹೆಸರು 'ವಳವನ್'.

**ಸವಿತ** : ಅವರ ಹೆಸರು ವಳವನ್ ಎನ್ನುತ್ತೀರಿ. ಹಾಗಾದರೆ ಕರಿಕಾಲ ಚೋಳ ಎಂಬ ಹೆಸರು ಬಂದಿದ್ದು ಯಾವಾಗ?

**ಮಾವ** : ಕರಿಕಾಲ ಚೋಳನಿಗೆ, ಆತನ ಬಾಲ್ಯದಲ್ಲಿ ಕಾಲುಗಳು ಬೆಂಕಿಯಲ್ಲಿ ಸುಟ್ಟು ಕರಕಾದ ಕಾರಣದಿಂದ ಆತನಿಗೆ ಕರಿಕಾಲ ಎಂಬ ಹೆಸರು ಬಂತು.

**ಭೂಮಿಕ** : ಓಹೋ! ಈ ಅಣೆಕಟ್ಟು ಎಷ್ಟು ಉದ್ದವಾಗಿದೆ. ನೋಡಲು ಎಷ್ಟು ಸುಂದರವಾಗಿದೆ. ಈ ಕಲ್ಲಿನ ಅಣೆಕಟ್ಟನ್ನು ಕಟ್ಟಲು ಕರಿಕಾಲನು ತೆಗೆದುಕೊಂಡ ಪ್ರಯತ್ನಗಳನ್ನು ತಿಳಿಸಿ ಮಾವ.

**ಮಾವ** : ಸರಿ, ಹೇಳುತ್ತೇನೆ, ಕೇಳಿ. ನಮ್ಮ ಶಿಕ್ಷಕರು ನಮಗೆ ಹೇಳಿದ ವಿಷಯಗಳನ್ನು ನಾನು ನಿಮಗೆ





4th_Kannada_Reader_Term1.indd 61 12-07-2019 15:17:09

ಹೇಳುತ್ತೇನೆ. ಪ್ರಸ್ತುತ ಉಪಯೋಗದಲ್ಲಿರುವ ತುಂಬಾ ಪುರಾತನವಾದ ಒಂದೇ ಒಂದು ಅಣೆಕಟ್ಟೆಂದರೆ ಈ ಕಲ್ಲಿನ ಅಣೆಕಟ್ಟು! ವಿಶ್ವದ ತುಂಬಾ ಹಳೆಯದಾದ 'ಪುರಾತನ ಜಲಾಶಯ' ಎಂಬ ಹೆಸರು ಗಳಿಸಿದೆ. ಮಣ್ಣಿನ ಅಡಿಪಾಯ ಹಾಕಿ ಕಟ್ಟಲಾಗಿರುವ ಅಣೆಕಟ್ಟು ಇದು. ಪ್ರಾಚೀನ ತಮಿಳು ತಂತ್ರಜ್ಞಾನಕ್ಕೆ ಉದಾಹರಣೆಯಾಗಿದೆ. ಇಂದಿನವರೆಗೂ ಅಚ್ಚರಿ ಮೂಡಿಸುವಂತಹ ರೀತಿಯಲ್ಲಿ ಇದೆ.



**ಭೂಮಿಕ** : ಓ! ಹೌದಾ ಮಾವ...!

**ಮಾವ** : ಹೌದು, ಕಾವೇರಿ ನದಿಯಿಂದ ಆಗಾಗ ಪ್ರವಾಹ ಬರುತಿತ್ತು. ಆದರೆ ಆ ನೀರು ಉಪಯೋಗವಿಲ್ಲದೆ ಸಮುದ್ರಕ್ಕೆ ಹೋಗುತಿತ್ತು. ಜನರು ಮಳೆಗಾಲದಲ್ಲಿ ಪ್ರವಾಹದಿಂದಲೂ, ಬೇಸಿಗೆಯಲ್ಲಿ ನೀರಿಲ್ಲದೆಯೂ ಕಷ್ಟಪಡುತ್ತಿದ್ದರು. ಇದನ್ನು ಕಂಡು ಆ ಕಷ್ಟ ತೀರಿಸುವ ಸಲುವಾಗಿ ದೊಡ್ಡ ಅಣೆಕಟ್ಟನ್ನು ಕಟ್ಟಲು ಕರಿಕಾಲನು ತೀರ್ಮಾನಿಸಿದನು.



4th_Kannada_Reader_Term1.indd 62 12-07-2019 15:17:09

**ಸವಿತಾ** : ಆ ಕಾಲದಲ್ಲಿಯೇ ಕಬ್ಬಿಣದ ಕಂಬಿಗಳು, ಸಿಮೆಂಟ್ ಎಲ್ಲ ದೊರಕುತ್ತಿದ್ದವೇ ಮಾವ?

**ಮಾವ** : ಇಲ್ಲ ಸವಿತಾ...! ಇದನ್ನು ಕಟ್ಟಿದ ವಿಧಾನವನ್ನು ತಿಳಿಸುತ್ತೇನೆ ಕೇಳು. ಕಾವೇರಿ ನದಿಗೆ ದೊಡ್ಡ ಬಂಡೆಗಳನ್ನು ತಂದು ಹಾಕಿದರು. ಅಲ್ಲಿ ನೀರು ಹರಿಯುವ ಕಾರಣದಿಂದ ಸ್ವಲ್ಪ ಸ್ವಲ್ಪವಾಗಿ ಆ ಬಂಡೆಗಳು ಮಣ್ಣಿನಿಂದ ಮುಚ್ಚಿದವು. ಆ ಬಂಡೆಯ ಮೇಲೆ ಮತ್ತೊಂದು ಬಂಡೆಯನ್ನು ಇಟ್ಟು ನಡುವೆ ನೀರಿನಲ್ಲಿ ಕರಗದ ಒಂದು ವಿಧವಾದ ಅಂಟುವ ಜೇಡಿ ಮಣ್ಣನ್ನು ಲೇಪಿಸಿ ಎರಡೂ ಬಂಡೆಗಳು ಒಂದಕ್ಕೊಂದು ಅಂಟಿಕೊಳ್ಳುವ ರೀತಿ ಮಾಡಿದರು. ಇದು ಕೆಲವು ಶತಮಾನ ಕಳೆದರೂ ಇಂದಿಗೂ ನೆಲೆಯಾಗಿ ನಿಂತಿದೆ. ತಮಿಳು ಭಾಷೆಯಲ್ಲಿ ಇದನ್ನು 'ಕಲ್ಲಣ್ಯೆ' ಎಂದು ಕರೆಯುತ್ತಾರೆ. ಕಲ್+ಅಣ್ಯೆ=ಕಲ್ಲಣ್ಯೆ. ಕಲ್ಲಿನ ಅಣೆಕಟ್ಟು ಎಂಬುದು ಇದರ ಅರ್ಥ. ಬಂಡೆಗಲ್ಲುಗಳಿಂದ ಈ ಅಣೆಕಟ್ಟನ್ನು ನಿರ್ಮಿಸಿರುವುದರಿಂದ ಇದನ್ನು ಈ ರೀತಿ ಕರೆಯುತ್ತಾರೆ. ಕಲ್ಲಿನ ಅಣೆಕಟ್ಟು ತಮಿಳರ ಕಟ್ಟಡ ಕಲೆಯ ಸಾಮರ್ಥ್ಯವನ್ನು ಪ್ರದರ್ಶಿಸುವಂತೆ ಇದೆ..

**ಸುರೇಶ** : ಇಗೋ ನೋಡಿ! ಇಲ್ಲಿ ಒಂದು ಶಾಸನ ಇದೆ. ಇದರಲ್ಲಿ ಏನೋ ಬರೆದಿದೆ. ಓದಿ ನೋಡೋಣ, ಬನ್ನಿ.

**ಮಾವ** : ಈ ಅಣೆಕಟ್ಟನ್ನು ಎರಡನೇ ಶತಮಾನದಲ್ಲಿ ಕಾವೇರಿ ನದಿಗೆ ಕಟ್ಟಲಾಯಿತು. ಕಾವೇರಿ, ಕೊಳ್ಳಡಂ, ವೆಣ್ಣಾರು, ಪುದುವಾರು – ಎಂದು ನಾಲ್ಕು ಭಾಗವಾಗಿ ವಿಭಾಗವಾಗುತ್ತದೆ. ಈ ರೀತಿ ವಿಭಾಗವಾಗುವ ಸ್ಥಳದಲ್ಲಿ ಕಲ್ಲಣ್ಯೆಯನ್ನು ಕಟ್ಟಲಾಗಿದೆ. ಇದರಿಂದ ತಿರುಚ್ಚಿ, ತಂಜಾವೂರು ಜಿಲ್ಲೆಗಳು ಉತ್ತಮ ಬೆಳೆಯನ್ನು ಬೆಳೆಯುತ್ತವೆ. ಇದರಿಂದ ಈ ಜಿಲ್ಲೆಗಳು ಶ್ರೀಮಂತಗೊಂಡಿವೆ. ಇದು ವ್ಯವಸಾಯಕ್ಕೆ ಬಹಳ ಮುಖ್ಯವಾದ ಕೊಡುಗೆಯಾಗಿದೆ.

**ಅತ್ತೆ** : ಮಧ್ಯಾಹ್ನದ ಊಟವನ್ನು ತೆಗೆದುಕೊಂಡು ಬಂದಿದ್ದೇನೆ, ಬನ್ನಿ. ಮರದ ನೆರಳಲ್ಲಿ ಕುಳಿತುಕೊಂಡು ಎಲ್ಲರೂ ಊಟ ಮಾಡೋಣ.

**ಭೂಮಿಕ** : ಕಲ್ಲಿನ ಅಣೆಕಟ್ಟು, ಕಣ್ಣುಗಳು ಹಾಗೂ ಮನಸ್ಸನ್ನು ಸೆಳೆಯುವ ರೀತಿಯಲ್ಲಿ ಕಟ್ಟಲಾಗಿದೆ. ಆದ್ದರಿಂದ ಕರಿಕಾಲನಿಗೆ ವಂದನೆ ಸಲ್ಲಿಸೋಣ!

**ಸವಿತ** : ಕಲ್ಲಿನ ಅಣೆಕಟ್ಟು ಇರುವವರೆಗೂ ಕರಿಕಾಲ ಚೋಳನ ಹೆಸರು ಸ್ಥಿರವಾಗಿರುತ್ತದೆ!



4th_Kannada_Reader_Term1.indd 63 12-07-2019 15:17:09

## ಬನ್ನಿ ಮಾತನಾಡೋಣ



- ಕಲ್ಲಣೈ ಅಣೆಕಟ್ಟಿನ ಬಗ್ಗೆ ನಿಮಗೆ ತಿಳಿದ ವಿಷಯಗಳನ್ನು ನಿಮ್ಮ ಸ್ವಂತವಾದ ಮಾತುಗಳಲ್ಲಿ ಹೇಳಿ.
- ನಿಮ್ಮ ಊರಲ್ಲಿ ಇರುವ ತುಂಬಾ ಪ್ರಾಚೀನ ಸ್ಥಳಗಳು ಯಾವುವು ? ಅದರ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ.

## ಚಿಂತಿಸೋಣವೇ?



ಬೇಸಿಗೆ ಕಾಲದಲ್ಲಿ ನೀರಿನ ಅಭಾವ ಏರ್ಪಡಲು ಕಾರಣವೇನು ?
ನೀರಿನ ಅಭಾವವನ್ನು ನೀಗಿಸಲು ಏನು ಮಾಡುವಿರಿ ?

ಇತರರು ಹೇಳುವುದನ್ನು ಗಮನದಿಂದ ಆಲಿಸುವುದು, ಪ್ರಶ್ನೆಗಳನ್ನು ಸೃಷ್ಟಿಸುವುದು, ಅವುಗಳಲ್ಲಿನ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು.

# ಓದೋಣ! ಚಿಂತಿಸೋಣ! ಬರೆಯೋಣ!

## ಸರಿಯಾದ ಪದವನ್ನು ಆರಿಸಿ

01 'ಅಡಿಪಾಯ' – ಈ ಪದಕ್ಕೆ ಸಂಬಂಧಿಸಿದ ಪದ

..........................................

02 'ಸುಂದರ' – ಈ ಪದಕ್ಕೆ ಸಂಬಂಧಿಸಿದ ಪದ

..........................................

03 'ವಿಶ್ವ' – ಈ ಪದಕ್ಕೆ ಸಂಬಂಧಿಸಿದ ಪದ

..........................................

04 'ದೃಢ' – ಈ ಪದಕ್ಕೆ ಸಂಬಂಧಿಸಿದ ಪದ

..........................................






4th_Kannada_Reader_Term1.indd 64 12-07-2019 15:17:10

## ಸರಿಯಾದ ಪದವನ್ನು ಆರಿಸಿ ಬರೆಯೋಣವೇ ?

01 'ಬೇಸಿಗೆಯಲ್ಲಿ' ಈ ಪದವನ್ನು ಬಿಡಿಸಿ ಬರೆದಾಗ__________

ಅ. ಬೇಸಿಗೆ + ಯಲ್ಲಿ    ಆ. ಬೇಸಿಗೆ + ನಲ್ಲಿ
ಇ. ಬೇಸಿಗೆ + ಅಲ್ಲಿ    ಈ. ಬೇಸಿಗೆಯ + ಲ್ಲಿ

02 'ಬಂಡೆಯನ್ನು' ಈ ಪದವನ್ನು ಬಿಡಿಸಿ ಬರೆದಾಗ __________

ಅ. ಬಂಡೆಯ + ಅನ್ನು    ಆ. ಬಂಡೆಯ + ನ್ನು
ಇ. ಬಂಡೆ + ಯನ್ನು    ಈ. ಬಂಡೆ + ಅನ್ನು

03 'ಮಳೆಗಾಲ' ಈ ಪದವನ್ನು ಬಿಡಿಸಿ ಬರೆದಾಗ __________

ಅ. ಮಳೆ + ಕಾಲ    ಆ. ಮಳೆ + ಗಾಲ
ಇ. ಮಳೆಯ + ಕಾಲ    ಈ. ಮಳೆಯಲ್ಲಿ + ಕಾಲ

04 'ಮಣ್ಣು+ಇಂದ' ಈ ಪದವನ್ನು ಕೂಡಿಸಿ ಬರೆದಾಗ __________

ಅ. ಮಣ್ಣಿಂದ    ಆ. ಮಣ್ಣಿನಿಂದ
ಇ. ಮಣ್ಣಿನಅಂದ    ಈ. ಮಣ್ಣಿನಂದ

05 'ನದಿ+ಇಂದ' ಈ ಪದವನ್ನು ಸೇರಿಸಿ ಬರೆದಾಗ __________

ಅ. ನದಿಯಿಂದ    ಆ. ನದಿಇಂದ
ಇ. ನದೀಂದ    ಈ. ನದಿನಿಂದ

## ಚೆಂಡನ್ನು ಅದರ ವಿರುದ್ಧ ಪದದ ಬುಟ್ಟಿಯಲ್ಲಿ ಹಾಕೋಣವೇ ?






4th_Kannada_Reader_Term1.indd 65    12-07-2019 15:17:11

## ಸರಿಯಾದ ಪದವನ್ನು ಆರಿಸಿ ಬರೆಯಿರಿ

01 ಕಲ್ಲಣ್ಣೈ ಅಣೆಕಟ್ಟು ಇರುವ ಜಿಲ್ಲೆ __________ (ತಿರುಚ್ಚಿ/ತಂಜಾವೂರು)

02 ತಮಿಳುನಾಡಿನಲ್ಲಿ ಕಾವೇರಿ ನದಿಯ ಮುಖ್ಯ ಉಪನದಿ __________ (ವೈಗೈ, ಕೊಳ್ಳಡಂ)

03 ಕಲ್ಲಣ್ಣೈ ಅಣೆಕಟ್ಟನ್ನು ಕಟ್ಟಿದ ಅರಸ __________ (ಕರಿಕಾಲ/ರಾಜರಾಜ)

04 ಕಲ್ಲಣ್ಣೈ ಅಣೆಕಟ್ಟು __________ ತಂತ್ರಜ್ಞಾನಕ್ಕೆ ಪ್ರಸಿದ್ಧವಾಗಿದೆ. (ಹಿಂದಿನ/ಇಂದಿನ)

05 'ಕಲ್ಲಣ್ಣೈ ಅಣೆಕಟ್ಟ'ನ್ನು ತಮಿಳು ಭಾಷೆಯಲ್ಲಿ __________ ಎನ್ನುವರು. (ಕಲ್ಲಣ್ಣೈ/ಕಲ್ಯಾಣಿ)

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

01 ಕರಿಕಾಲನ ಮತ್ತೊಂದು ಹೆಸರು ?

02 ಕರಿಕಾಲ ಎಂದು ಆತನಿಗೆ ಹೆಸರು ಬರಲು ಕಾರಣವೇನು ?

03 ಕರಿಕಾಲನು ಕಲ್ಲಣ್ಣೈ ಅಣೆಕಟ್ಟನ್ನು ಕಟ್ಟಲು ಕಾರಣವೇನು ?

04 ಕಲ್ಲಣ್ಣೈ ಅಣೆಕಟ್ಟಿನ ಬಗ್ಗೆ ನಿಮ್ಮ ಅನಿಸಿಕೆ/ಅಭಿಪ್ರಾಯವನ್ನು ತಿಳಿಸಿ.

# ಭಾಷಾ ಚಟುವಟಿಕೆ

## ಒಂದು ಅಕ್ಷರವನ್ನು ಗುರುತಿಸಿ, ಅದರಿಂದ ನಾಲ್ಕು ಪದವನ್ನು ರಚಿಸೋಣ



ಕ<u>ಮ</u>ಲ
ಸ<u>ಮ</u>ಯ — ಮ — ಅ<u>ಮ</u>ರ
ನ<u>ಮ</u>ನ

ನ __ ಕ
ಕ __ ಗ — — ಮ __ ದ
__ ಕ್ಷಣ

ಫಲ__
ನಡು __ — — __ ಡಲು
__ ನಸು

ಕಳ_
_ ಮರ — — _ ಮುದ್ರ
_ ಹಕರಿಸು



4th_Kannada_Reader_Term1.indd 66 12-07-2019 15:17:11

## ತಿಳಿದುಕೊಳ್ಳೋಣ!



**ತಮಿಳುನಾಡಿನ ಮುಖ್ಯ ಅಣೆಕಟ್ಟುಗಳು**

- ಕಲ್ಲಣೈ ಅಣೆಕಟ್ಟು
- ಮೇಟ್ಟೂರು ಅಣೆಕಟ್ಟು
- ವೈಗೈ ಅಣೆಕಟ್ಟು
- ಸಾತನೂರು ಅಣೆಕಟ್ಟು
- ಭವಾನಿ ಅಣೆಕಟ್ಟು





## ಕಾರ್ಯ ಯೋಜನೆ

ಗ್ರಂಥಾಲಯಕ್ಕೆ ಭೇಟಿ ನೀಡಿ ಇತಿಹಾಸ ಗ್ರಂಥಗಳನ್ನು ಓದಿ, ಯಾರಾದರೂ ಐದು ರಾಜರುಗಳ ಹೆಸರುಗಳನ್ನೂ, ಅವರು ಮಾಡಿದ ಗುಣಾತ್ಮಕ ಕಾರ್ಯಗಳನ್ನೂ ಪಟ್ಟಿ ಮಾಡಿ.

| ಕ್ರಮಸಂಖ್ಯೆ | ಹೆಸರು | ವಿಶೇಷತೆ |
|---|---|---|
| 1 | | |
| 2 | | |
| 3 | | |
| 4 | | |
| 5 | | |

# 10 ಕಾಲಗಳು



ಬಂತಪ್ಪ ಬಂತು ಮಳೆಗಾಲ
ರೈತರು ಕಾಯುವ ಮಳೆಗಾಲ
ಬೀಜವ ಬಿತ್ತುವ ಈ ಕಾಲ
ಬೆಳೆಯನು ಬೆಳೆಯುವ ಈ ಕಾಲ ||1||



ಬಂತಪ್ಪ ಬಂತು ಚಳಿಗಾಲ
ಎಲೆಗಳು ಉದುರುವ ಈ ಕಾಲ
ಗಡಗಡ ನಡುಗುವ ಈ ಕಾಲ
ಕಂಬಳಿ ಹೊದೆಯುವ ಈ ಕಾಲ ||2||

ಬಂತಪ್ಪ ಬಂತು ಬೇಸಿಗೆ ಗಾಲ
ನೀರನು ಕುಡಿಯುವ ಈ ಕಾಲ
ಮಾವು ಚಿಗುರುವ ಈ ಕಾಲ
ಕೋಗಿಲೆ ಕೂಗುವ ಈ ಕಾಲ ||3||





4th_Kannada_Reader_Term2.indd 68 12-07-2019 16:04:52

## ಅರ್ಥ ತಿಳಿಯೋಣ

ಮಳೆಗಾಲದಲ್ಲಿ ಬೀಜವನ್ನು ಬಿತ್ತಿ ಬೆಳೆಯುತ್ತಾನೆ ಅನ್ನದಾತ. ನಂತರ ಚಳಿಗಾಲ ಬಂದಾಗ ಎಲೆಗಳು ಉದುರಿ ನಮ್ಮನ್ನು ಗಡಗಡನೆ ನಡುಗಿಸಿ ಕಂಬಳಿಯನ್ನು ಹೊದ್ದುಕೊಳ್ಳುವಂತೆ ಮಾಡುತ್ತದೆ. ನಂತರ ಬರುವ ಕಾಲವೇ ಬೇಸಿಗೆ ಕಾಲ. ಈ ಕಾಲದಲ್ಲಿ ನಾವು ನೀರನ್ನು ಅಧಿಕವಾಗಿ ಕುಡಿಯುತ್ತೇವೆ. ಮಾವಿನ ಮರ ಚಿಗುರೊಡೆದು ಕೋಗಿಲೆ ಸುಮಧುರವಾಗಿ ಕೂಗುತ್ತದೆ.

### ಬನ್ನಿ, ಮಾತಾಡೋಣ!



- ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಅರ್ಥ ತಿಳಿದು ಓದಿ ಸಂತೋಷಿಸಿರಿ.
- ಈ ಪದ್ಯವನ್ನು ನಿಮ್ಮ ಸ್ವಂತ ಶೈಲಿಯಲ್ಲಿ ಹಾಡಿರಿ.



### ಚಿಂತಿಸೋಣ !

**ಸಂದರ್ಭ 1**

ತನುಶ್ರೀಯ ಅಮ್ಮ ತನುಶ್ರೀಗೆ ಮಾತ್ರವಲ್ಲದೆ ಅವಳ ಗೆಳತಿಯರಿಗೆಲ್ಲರಿಗೂ ಹುಟ್ಟು ಹಬ್ಬದ ಶುಭಾಶಯಗಳನ್ನು ಹೇಳುವರು.

**ಸಂದರ್ಭ 2**

ಅನುಶ್ರೀಯ ಅಪ್ಪ 'ನೀನು ಯಾರಿಗೂ ಯಾವ ಸಹಾಯವನ್ನು ಮಾಡಬಾರದು' ಎಂದು ಹೇಳಿದರು.

.

ಈ ಹೇಳಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಹೇಳಿರಿ

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯೋಣವೇ?

01 'ಮಳೆಗಾಲ' ಈ ಪದವನ್ನು ಬಿಡಿಸಿ ಬರೆದಾಗ__________

ಅ) ಮಳೆಯ+ಗಾಲ ಆ) ಮಳೆ+ಗಾಲ

ಇ) ಮಳೆಯಲ್ಲಿ+ಕಾಲ ಈ) ಮಳೆ+ಕಾಲ

02 'ಬಂತಪ್ಪ ಬಂತು ಮಳೆಗಾಲ' ಈ ವಾಕ್ಯದಲ್ಲಿ ಗೆರೆ ಹಾಕಿರುವ ಪದದ ವಿರುದ್ಧ ಪದ __________

ಅ) ಹೋಯಿತು ಆ) ಹೋತು

ಇ) ಹೋದರು ಈ) ಹೋಯಿತಪ್ಪ

03 ಕಂಬಳಿ ಎಂಬುದು __________

ಅ) ಜೀವ ವಸ್ತು ಆ) ನಿರ್ಜೀವ ವಸ್ತು

ಇ) ನಿಲ್ಲುವುದು ಈ) ನಿಲ್ಲದಿರುವುದು

04 'ಚಳಿ+ಕಾಲ' ಈ ಪದವನ್ನು ಸೇರಿಸಿ ಬರೆದಾಗ ಸಿಗುವ ಪದ __________

ಅ) ಚಳಿಗಾಲ ಆ) ಚಳಿಯಗಾಲ

ಇ) ಚಳಿಕಾಲ ಈ) ಚಳಿಯಲ್ಲಿಕಾಲ

05 'ಕೋಗಿಲೆ' ಎಂಬುದು __________

ಅ) ಪ್ರಾಣಿ ಆ) ಮನುಷ್ಯ

ಇ) ಪಕ್ಷಿ ಈ) ವಸ್ತು

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಮಳೆ ಹೆಚ್ಚಾಗುವುದರಿಂದ ಏನೇನು ಸಂಭವಿಸಬಹುದು ?

02 ಬೇಸಿಗೆಯಲ್ಲಿ ಸಾಮಾನ್ಯವಾಗಿ ಗಿಡಮರಗಳು ಒಣಗುತ್ತವೆ. ಏಕೆ ?

03 ಮಳೆ ಬರುವ ಮುನ್ನ ಆಕಾಶದಲ್ಲಿ ಉಂಟಾಗುವ ಘಟನೆಗಳನ್ನು ಯೋಚಿಸಿ?

04 ಮಳೆ ಬಾರದಿದ್ದರೆ ಕಾಲ ಹೇಗಿರುತ್ತದೆ. ಯೋಚಿಸಿ ?



4th_Kannada_Reader_Term2.indd 70 12-07-2019 16:04:53

## ಬ ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ..

ಉದಾಹರಣೆ      ಬಂತಪ್ಪ

________ ________ ________ ________

________ ________ ________ ________

## ಮೋಡಗಳಿಗೆ ಸರಿಯಾದ ಹನಿಗಳನ್ನು ಹೊಂದಿಸಿರಿ.




1. ಬೀಜಬಿತ್ತುವ
2. ________
3. ________
4. ________
5. ________

## ಪದ್ಯವನ್ನು ಓದೋಣ

ಕುಟಿಲವ ಬಿಡದಿಹ ಮನುಜರು ಮಂತ್ರವ

ಪಠನೆಯ ಮಾಡಿದರೇನು ಫಲ

ಸಟೆಯನ್ನಾಡುವ ಮನುಜರು ಸತತ

ನಟನೆಯ ಮಾಡಿದರೇನು ಫಲ



4th_Kannada_Reader_Term2.indd 71 12-07-2019 16:04:53

## ವಾಕ್ಯ ವೃಂದವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ನಮಗೆ ಉಪಯೋಗವಾಗುವ ಮರಗಳಲ್ಲಿ ಬಾಳೆಯೂ ಒಂದು. ಬಾಳೆಯ ಹೂ, ಕಾಯಿ, ಹಣ್ಣು, ದಿಂಡು ಇವುಗಳನ್ನು ಅಡುಗೆಗೆ ಬಳಸುತ್ತೇವೆ. ಬಾಳೆ ನಾರನ್ನು ಹೂವಿನ ಹಾರ ಕಟ್ಟಲು ಉಪಯೋಗಿಸುವರು. ಮದುವೆ ಸಮಾರಂಭಗಳಲ್ಲಿ ಹಬ್ಬ–ಹರಿದಿನಗಳಲ್ಲಿ ಮತ್ತು ಶುಭ ಸಮಾರಂಭಗಳಲ್ಲಿ ಬಾಳೆಯ ಎಲೆಯನ್ನು ಊಟಕ್ಕೆ ಬಳಸುತ್ತಾರೆ. ಬಾಳೆಯಲ್ಲಿ ಹಲವಾರು ವಿಧಗಳಿವೆ. ಅವುಗಳಲ್ಲಿ ಹೂಬಾಳೆ, ರಸಬಾಳೆ, ಏಲಕ್ಕಿ ಬಾಳೆ, ಕೆಂಬಾಳೆ, ಪಚ್ಚೆಬಾಳೆ ಮುಂತಾದ ಹಲವಾರು ಬಗೆಗಳಿವೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಬಾಳೆ ನಾರನ್ನು ಯಾವುದಕ್ಕೆ ಉಪಯೋಗಿಸುವರು?
2. ಬಾಳೆಯ ಎರಡು ವಿಧಗಳನ್ನು ತಿಳಿಸಿ?
3. 'ಬಾಳೆಯಿಂದ' ಈ ಪದವನ್ನು ಬಿಡಿಸಿ ಬರೆಯಿರಿ.
4. 'ಹಾರ' ಪದದ ಸಮಾನಾರ್ಥಕ ಪದವನ್ನು ಬರೆಯಿರಿ.



## ಕಾರ್ಯ ಯೋಜನೆ

ನೀವು ವಾಸವಾಗಿರುವ ಸ್ಥಳದ ಸಮೀಪ ಇರುವ ತೋಟವನ್ನು ವಿವರಿಸಿ.

1. ತೋಟದ ಹೆಸರು
2. ಮಾಲೀಕರ ಹೆಸರು
3. ತೋಟ ಇರುವ ಸ್ಥಳ
4. ನೀರಿನ ನೆಲೆಗಳು–ಬಾವಿ / ಕೆರೆ,ಕೊಳ / ಕೊಳವೆಬಾವಿ
5. ತೋಟದಲ್ಲಿ ಬೆಳೆಯುವ ತರಕಾರಿಗಳು / ಧಾನ್ಯಗಳು / ಹಣ್ಣುಗಳು
6. ತೋಟದ ಬಗ್ಗೆ ನಿಮ್ಮ ಅಭಿಪ್ರಾಯ–ಚೆನ್ನಾಗಿದೆ / ಸುಮಾರು / ಬೆಳವಣಿಗೆ ಬೇಕು

## ತಿಳಿದುಕೊಳ್ಳೋಣ

1. ತೋಟದಲ್ಲಿ ಕೀಟಗಳ ದಾಳಿಯನ್ನು ತಡೆಯಲು ಮೊಟ್ಟೆಯ ಬಿಳಿಯ ಮೇಲ್ಪದರ(ಕವಚ)ವನ್ನು ಪುಡಿ ಮಾಡಿ ಅದರೊಡನೆ ಉಪ್ಪನ್ನು ಮಿಶ್ರಣ ಮಾಡಿ ಗಿಡದ ಸುತ್ತಲೂ ಹಾಕಬೇಕು.
2. ವ್ಯವಸಾಯಕ್ಕೆ ಉಪಯೋಗಿಸುವ ಕೀಟನಾಶಕಗಳು, ಕಳೆ ನಾಶಕಗಳು ಗಿಡಗಳ ಬೆಳವಣಿಗೆಯನ್ನು ಕಡಿಮೆ ಮಾಡುತ್ತವೆ.
3. ಮಣ್ಣಿನ ಸವೆತವನ್ನು ತಡೆಯಲು ಮರಗಳನ್ನು ಬೆಳೆಸಬೇಕು.



4th_Kannada_Reader_Term2.indd 72 12-07-2019 16:04:54

# 11 ಎಲ್ಲರೂ ಹೀಗೆಯೇ ಇದ್ದರೆ...

ಮಾವಿನ ಮರದಲ್ಲಿ ಗಿಳಿಗಳು ಕಿಚ್... ಕಿಚ್... ಎಂದು ಶಬ್ದ ಮಾಡುತ್ತಾ ಅತ್ತಿತ್ತ ಹಾರಾಡುತ್ತಿದ್ದವು. ಪಕ್ಕದಲ್ಲಿದ್ದ ಹುಲ್ಲಿನ ಮೆದೆಯ ಮೇಲೆ ಹುಂಜವೊಂದು ನಿಧಾನವಾಗಿ ನಡೆಯುತ್ತಿತ್ತು. ತೋಟದಲ್ಲಿ ಕುಣಿಯುತ್ತಾ ಜಿಗಿದು ನೆಗೆಯುವ ಕರುವನ್ನು ನೋಡಿ ಹಸು, 'ಅಂಬಾ...' ಎಂದು ಕೂಗಿತು. ಇದನ್ನೆಲ್ಲಾ ತನ್ನ ಮನೆಯ ಮಹಡಿಯ ಮೇಲೆ ನಿಂತು ನೋಡುತ್ತಿದ್ದ ಸುರೇಶನು ತನ್ನ ಅಜ್ಜನನ್ನು ಹುಡುಕಿಕೊಂಡು ಕೆಳಗೆ ಇಳಿದು ಬಂದನು. ತನ್ನ ಅಜ್ಜ ಕಾಣದುದರಿಂದ, ಅವರು ಮುಂಜಾನೆ ಸಮಯದಲ್ಲಿಯೇ ಗದ್ದೆಯ ಕಡೆಗೆ ಹೋಗಿರಬಹುದು ಎಂದು ಅವನು ಊಹಿಸಿದನು.



ಆಗ, 'ಸುರೇಶ, ಇಲ್ಲಿ ಬಾ ಮಗನೇ...' ಎಂದು ಅಡುಗೆ ಮನೆಯಿಂದ ಅಮ್ಮನ ಧ್ವನಿ ಕೇಳಿತು. 'ಅಮ್ಮಾ, ಇದೋ ಬಂದೆ' ಎಂದು ಸುರೇಶ ಮನೆಯೊಳಗೆ ಓಡಿ ಹೋದನು. 'ತಾತನಿಗೆ ಊಟವನ್ನು ಕೊಟ್ಟು ಬಾ...' ಎಂದ ಅಮ್ಮನಿಗೆ 'ಸರಿ' ಎಂದು ಉತ್ತರಿಸಿ ಅಮ್ಮನಿಂದ ಊಟವನ್ನು ತೆಗೆದುಕೊಂಡು ಅವನು ಗದ್ದೆಯ ಕಡೆಗೆ ಹೊರಟನು.



4th_Kannada_Reader_Term2.indd 73 12-07-2019 16:04:55

ಗದ್ದೆಗೆ ಹೋಗುವ ದಾರಿಯಲ್ಲಿ ಹೂವಿನ ತೋಟವನ್ನು ಅವನು ನೋಡುತ್ತಾ ಹೋದನು. ತೋಟದಲ್ಲಿ ಅರಳಿದ್ದ ಹೂಗಳು ಅವನನ್ನು ನೋಡಿ ಮಂದಹಾಸ ಬೀರುವಂತೆ ಕಾಣಿಸಿದವು. ತನ್ನ ಕೈಗಳಿಂದ ಅವುಗಳನ್ನು ಮೆಲ್ಲನೆ ಸ್ಪರ್ಷ ಮಾಡುತ್ತಾ ಮುಂದೆ ಸಾಗಿದನು ಸುರೇಶ. ಆ ಹೂವಿನ ತೋಟವನ್ನು ದಾಟಿದ ನಂತರ ಗದ್ದೆಯಲ್ಲಿ ಬತ್ತದ ಗಿಡಗಳಲ್ಲಿ ಭತ್ತದ ಕಾಳುಗಳು ಮಣಿಗಳಂತೆ ತೂಗುತ್ತಿದ್ದವು. ಕಾಲುವೆಯನ್ನು ದಾಟದೆ ನಿಂತಿದ್ದ ನೀರನ್ನು ನೋಡಿ ಸಂತೋಷ ಪಟ್ಟನು. ಕಾಲುವೆಯಲ್ಲಿ ಹರಿಯುವ ನೀರಿನಲ್ಲಿ ಆಟವಾಡುತ್ತಿದ್ದಾಗ ಆ ಶಬ್ದವನ್ನು ಕೇಳಿದ ಏಡಿಗಳು ಹೊರಗೆ ಬಂದವು. ಅವು ತಮ್ಮ ಎರಡು ಕೊಂಡಿಗಳನ್ನು ಮೇಲೆಕೆಳಗೆ ಆಡಿಸುತ್ತಿರುವುದನ್ನು ನೋಡಿ ಅವನು ಆಶ್ಚರ್ಯಪಟ್ಟನು.



ಸ್ವಲ್ಪ ದೂರದಲ್ಲಿ ತಾತ ಗದ್ದೆಯಲ್ಲಿ ಒಬ್ಬರೇ ಕೆಲಸ ಮಾಡುತ್ತಿರುವುದನ್ನು ನೋಡಿ, 'ತಾತಾ...! ತಾತಾ...!' ಎಂದು ಕೂಗುತ್ತಾ ಅವರ ಬಳಿಗೆ ಹೋದನು. 'ತಾತ'ನನ್ನು ಕಂಡರೆ ಅವನಿಗೆ ತುಂಬಾ ಇಷ್ಟ. ಸುರೇಶನ ಧ್ವನಿಯನ್ನು ಕೇಳಿದ ತಕ್ಷಣ ತಾತ ಹಿಂದೆ ತಿರುಗಿ ನೋಡಿದರು. 'ಬಾ ಮೊಮ್ಮಗನೇ...!' ಎನ್ನುತ್ತಾ ಅವರೂ ಅವನ ಕಡೆಗೆ ನಡೆದು ಬಂದು ಅವನನ್ನೆ ಮೇಲೆತ್ತಿಕೊಂಡು ಮುದ್ದಾಡಿದರು. ಅವನು ತಾನು ತೆಗೆದುಕೊಂಡು ಬಂದ ಊಟವನ್ನು ಅವರಿಗೆ ನೀಡಿದನು.



4th_Kannada_Reader_Term2.indd 74 12-07-2019 16:04:56



ಪಕ್ಕದಲ್ಲಿದ್ದ ಬೇವಿನ ಮರದ ನೆರಳಿನಲ್ಲಿ ಮೊಮ್ಮಗನೂ ತಾತನೂ ಕುಳಿತುಕೊಂಡರು. ತಾತ ತಮ್ಮ ಕೈಯಿಂದ ಮೊಮ್ಮಗನಿಗೆ ಊಟ ಮಾಡಿಸಿ ಸಂತೋಷ ಪಟ್ಟರು. ಊಟ ಮಾಡುತ್ತಾ ಸುರೇಶನು ಅವರೊಂದಿಗೆ ಮಾತನಾಡತೊಡಗಿದನು.

'ತಾತಾ! ನೀವು ಏಕೆ ಇಷ್ಟು ವಯಸ್ಸಾಗಿಯೂ ಭೂಮಿಯಲ್ಲಿ ಕೆಲಸ ಮಾಡಿ ಕಷ್ಟ ಪಡುತ್ತಿದ್ದೀರಿ?'

'ಕಂದಾ...! ನನಗೆ ಇಷ್ಟು ವಯಸ್ಸಾಗಿದೆ. ಆದರೆ ಇಲ್ಲಿ ನೋಡು, ಈ ವಯಸ್ಸಿನಲ್ಲಿ ಕೆಲಸ ಮಾಡಿ ನನ್ನ ದೇಹ ಇನ್ನೂ ಸದೃಢವಾಗಿದೆ. ಇದುವರೆಗೂ ಯಾವ ರೋಗಗಳಿಂದಲೂ ನಾನು ಬಳಲಲಿಲ್ಲ. ಮಗೂ, ಗದ್ದೇನೇ ನಮಗೆ ಆಸ್ತಿ. ಈ ಮಣ್ಣಿನಲ್ಲಿ ಬೆಳೆಯುವ ಪೈರುಗಳೇ ನಮ್ಮನ್ನು ಕಾಪಾಡುತ್ತವೆ. ನಾವು ತಿನ್ನುವ ಆಹಾರ ಪದಾರ್ಥಗಳೆಲ್ಲ ನನ್ನಂತಹ ರೈತರ ಶ್ರಮದ ಫಲವಾಗಿಯೇ ನಮಗೆ ದೊರಕುವುದು.

ಭತ್ತ, ಸಜ್ಜೆ, ರಾಗಿ, ಜೋಳ, ಉದ್ದು, ತೊಗರಿಬೇಳೆ, ಎಣ್ಣೆಯ ಕಾಳುಗಳು, ತರಕಾರಿಗಳು, ಹಣ್ಣುಗಳು ಇನ್ನೂ ಮುಂತಾದವುಗಳು... ಹೀಗೆ ಹೇಳಿಕೊಂಡೇ ಹೋಗಬಹುದು. ಇವುಗಳನ್ನೆಲ್ಲ ಬೆಳೆಯುವುದು ನಾವೇ. ಆದ್ದರಿಂದ ಈ ಭೂಮಿಯನ್ನು ನಾವು ದೇವರಂತೆ ಪೂಜಿಸಬೇಕು. ಕಂದಾ... ಈ ಭೂಮಿಯನ್ನು ಒಂದು ದಿನ ನೋಡದೇ ಇದ್ದರೆ ನನಗೆ ನಿದ್ರೆ ಬರುವುದಿಲ್ಲ. ಅದು ಮಾತ್ರವಲ್ಲ. ಈ ಭೂಮಿಯಲ್ಲಿ ಬೆಳೆಯುವ ಬೆಳೆಗಳೆಲ್ಲ ನಾವು ಮಾತ್ರ ಉಪಯೋಗಿಸುತ್ತೇವೆ ಎಂದು ತಿಳಿದುಕೊಂಡಿರುವೆಯಾ? ಅದು ಹಾಗಿಲ್ಲ. ನಾವು ಬೆಳೆದ ಬೆಳೆಯನ್ನು ನಾವು ಇತರರಿಗೂ ಕೊಡುವಾಗ ಸಿಗುವ ಸಂತೋಷಕ್ಕೆ ಎಲ್ಲೆಯೇ ಇಲ್ಲ'.

'ಹೌದು ತಾತಾ...! ಸರಿಯಾಗಿ ಹೇಳಿದೆ. ರೈತರು ದೇಶದ ಬೆನ್ನೆಲುಬು ಎಂದು ನಮ್ಮ ಶಿಕ್ಷಕರು ಹೇಳುತ್ತಿದ್ದರು.



4th_Kannada_Reader_Term2.indd 75 12-07-2019 16:04:56

ತಾತನೊಡನೆ ಮಾತನಾಡುತ್ತಾ ಪಕ್ಕದಲ್ಲಿದ್ದ ಬೆಂಡೆಕಾಯಿಯ ಗಿಡದಿಂದ ಅವನು ಒಂದು ಬೆಂಡೆಕಾಯಿಯನ್ನು ಕಿತ್ತುಕೊಂಡನು. 'ಇನ್ನೂ ಎರಡು ಮೂರು ಬೆಂಡೆಕಾಯಿಗಳನ್ನು ಕಿತ್ತುಕೊಂಡು ತಿನ್ನು, ಮಗಾ. ಹಸಿಯಾಗಿ ಇದನ್ನು ತಿಂದರೆ ದೇಹಕ್ಕೆ ಒಳ್ಳೆಯದು' ಎಂದರು ತಾತ.

'ತಾತಾ, ಎಷ್ಟು ರುಚಿಯಾಗಿದೆ ನೋಡು' ಎಂದನು ಸುರೇಶ. 'ಹೌದು. ನೈಸರ್ಗಿಕ ಗೊಬ್ಬರವನ್ನು ಹಾಕಿ ಎಲ್ಲಾ ಆಹಾರದ ಬೆಳೆಗಳನ್ನೂ ಬೆಳೆಯುತ್ತೇವೆ. ಅದರಿಂದ ದೇಹಕ್ಕೆ ರೋಗಗಳಿಲ್ಲ. ಆಹಾರ ಪದಾರ್ಥಗಳು ರುಚಿಯಾಗಿರುತ್ತದೆ' ಎಂದು ಹೇಳಿದ ತಾತನ ಕಣ್ಣಂಚಿನಲ್ಲಿ ಅವನು ನೀರನ್ನು ಕಂಡನು. 'ತಾತಾ... ತಾತಾ... ಏನಾಯಿತು?' ಎಂದು ಸುರೇಶ ಕೇಳಿದನು. ಆಗ, 'ಏನೂ ಇಲ್ಲ' ಎಂದು ಹೇಳಿ ಅವರು ಸಮಾಧಾನ ಪಡಿಸಿದರು.

'ತಾತಾ... ನೀವು ನನ್ನ ಬಳಿ ಏನನ್ನೂ ಹೇಳಬಾರದೆಂಬುದು ತಾನೇ ನಿಮ್ಮ ಅಭಿಪ್ರಾಯ' ಎಂದನು ಸುರೇಶ.

'ಹೂಂ... ಆಗ ಸಾಕಷ್ಟು ದನ ಕರುಗಳು ಇದ್ದವು. ಅವುಗಳ ಸಗಣಿಯನ್ನು ಗೊಬ್ಬರ ಮಾಡಿ ಸಾವಯವ ಕೃಷಿ ಮಾಡುತ್ತಿದ್ದೆವು. ಹೀಗೆ ಬೆಳೆಯುವ ಆಹಾರ ವಸ್ತುಗಳನ್ನು ತಿಂದು ಒಳ್ಳೆಯ ಆರೋಗ್ಯದಿಂದ ಜನ ಇದ್ದರು. ಆದರೆ ಈಗ ಎಲ್ಲೂ ನೈಸರ್ಗಿಕ ಗೊಬ್ಬರವೇ ಕಾಣುತ್ತಿಲ್ಲ'.

'ನಮ್ಮ ಮಾವನ ಮನೆಯಲ್ಲಿ ಮೂಟೆ ಮೂಟೆಯಾಗಿ ಜೋಡಿಸಲ್ಪಟ್ಟಿದೆಯಲ್ಲಾ ಅವೆಲ್ಲಾ ನೈಸರ್ಗಿಕ ಗೊಬ್ಬರವಲ್ಲವೇ?'

'ಇಲ್ಲಪ್ಪ. ಅವುಗಳೆಲ್ಲ ಕೃತಕ ಗೊಬ್ಬರಗಳು. ಎಂದರೆ ಅವು ರಾಸಾಯನಿಕ ಗೊಬ್ಬರಗಳು. ಅವುಗಳನ್ನು ಮಣ್ಣಿನಲ್ಲಿ ಹಾಕಿ ಮಣ್ಣಿನ ಸತ್ವವನ್ನು ನಾವು ನಾಶ ಮಾಡುತ್ತಿದ್ದೇವೆ ಎಂದು ನನಗೆ ತುಂಬಾ ವಿಷಾದವಿದೆ. ಕೃತಕ ಗೊಬ್ಬರವನ್ನು ಹಾಕಿ ರೈತನಿಗೆ ಸಹಾಯಕವಾಗಿರುವ ಜೇನು, ಚಿಟ್ಟೆ, ಮಣ್ಣಿನ ಹುಳು ಎಲ್ಲವನ್ನೂ ನಾಶ ಮಾಡಿ ಮಣ್ಣಿನ ಸತ್ವವನ್ನು ನಾವು ನಾಶ ಮಾಡುತ್ತಿದ್ದೇವೆ'.

'ಕೃತಕ ಗೊಬ್ಬರದಿಂದ ಭೂಮಿಗೆ ಅಷ್ಟು ತೊಂದರೆಯೇ?'

'ಹೂಂ... ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಉತ್ಪತ್ತಿ ಮಾಡುವ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ರೋಗಗಳು ಬರುತ್ತವೆ. ಸತ್ವವಿಲ್ಲದ ಆಹಾರವಾಗುತ್ತದೆ. ಇದರಿಂದ ಸಕ್ಕರೆ ಕಾಯಿಲೆ ವಯಸ್ಸಿನ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಬರುತ್ತಿದೆ'.

'ತಾತಾ... ಹಾಗಾದರೆ ನೀರು ಮಾತ್ರವೇ ಶುದ್ಧವಾಗಿದೆಯಾ... ಹೇಳಿ?'

'ಅಯ್ಯೋ, ಹೋಗಪ್ಪಾ... ಕೃತಕ ಗೊಬ್ಬರ, ಕೀಟನಾಶಕ ಔಷಧಿಗಳು ಮುಂತಾದವುಗಳನ್ನು ಮಣ್ಣಿನಲ್ಲಿ ಸಿಂಪಡಿಸಿ ಅದರ ಮೇಲೆ ನೀರನ್ನು ಬಿಡುತ್ತೇವೆ. ಆ ನೀರು ನೆಲದ ಅಂತರ್‌ಜಲದಲ್ಲಿ ಸೇರಿ ಅದೂ ನಾಶವಾಗುತ್ತಿದೆ. ಅದಲ್ಲದೆ ಕಾರ್ಖಾನೆಗಳ ತ್ಯಾಜ್ಯ ವಸ್ತುಗಳನ್ನೂ ಹಾಗೆಯೇ ಬಿಡುವುದರಿಂದಲೂ ಅಂತರ್ಜಲ ನಾಶವಾಗುತ್ತಿದೆ'.

'ಅಯ್ಯೋ ದೇವರೇ! ಹಾಗಾದರೆ ನಾವು ಯಾವುದನ್ನು ತಿನ್ನುವುದು?'

'ಹಳೆಯ ಪದ್ಧತಿಯಂತೆ ನಾವು ನೈಸರ್ಗಿಕ ಗೊಬ್ಬರಗಳನ್ನು ಉಪಯೋಗಿಸಿ ಕೃಷಿ ಮಾಡಬೇಕು. ಆಗ ತಾನೇ ನಾವು ಮತ್ತು ಎಲ್ಲರೂ ಆರೋಗ್ಯದಿಂದ ಇರಲು ಸಾಧ್ಯವಾಗುತ್ತದೆ'.



4th_Kannada_Reader_Term2.indd 76 12-07-2019 16:04:56

'ತಾತಾ, ನೀವು ಹೇಳಿದ್ದನ್ನು ನಾನು ಚೆನ್ನಾಗಿ ತಿಳಿದುಕೊಂಡೆ. "ಉಳುಮೆ ನಮ್ಮ ಪ್ರಾಣ" ಅದರಲ್ಲಿ ಬೆಳೆಯುವ ಪೈರುಗಳು ನಮಗೆಲ್ಲರಿಗೂ ಆಹಾರವಾಗುತ್ತದೆ. ಆದ್ದರಿಂದ ನಮಗೆ ಅಗತ್ಯವಿರುವ ಆಹಾರದ ಬೆಳೆಗಳನ್ನು ಬೆಳೆಯುವ ಈ ಭೂಮಿಗೆ ನಮ್ಮಿಂದ ಯಾವ ಹಾನಿಯೂ ಆಗಬಾರದು. ಆದಷ್ಟೂ ಕೃತಕ ಗೊಬ್ಬರವನ್ನು ಬಿಟ್ಟು, ನೈಸರ್ಗಿಕ ಗೊಬ್ಬರವನ್ನು ಉಪಯೋಗಿಸಬೇಕು. ಸರಿ ತಾನೇ! ತಾತಾ... ಅಪ್ಪನ ಬಳಿ ಮತ್ತು ನನ್ನ ಸ್ನೇಹಿತರಿಗೆ ನೀನು ಹೇಳಿದ ಈ ವಿಷಯಗಳನ್ನು ಖಂಡಿತವಾಗಿ ತಿಳಿಸುತ್ತೇನೆ'.

'ಒಳ್ಳೆಯದು. ಹಾಗೆಯೇ ಮಾಡು. ಎಲ್ಲರಿಗೂ ಅನುಕೂಲವಾಗುವ ವಿಷಯವನ್ನು ಹೇಳಿದರೆ ಎಲ್ಲರೂ ಅದನ್ನು ಸ್ವೀಕರಿಸದೇ ಇರಬಹುದು. ಆದರೆ ನಿಧಾನವಾಗಿ ಅವರು ಇದನ್ನು ತಿಳಿದುಕೊಳ್ಳುವರು. ಸರಿ, ಈಗ ಮಧ್ಯಾಹ್ನ ಬಿಸಿಲಿನ ತಾಪ ಹೆಚ್ಚಾಗಿದೆ. ನೀನು ಬೇಗನೇ ಮನೆಗೆ ಹೋಗಿ ಸೇರು ಕಂದಾ...'

ತಾತನಿಗೆ ಹೋಗುವೆನೆಂದು ತಿಳಿಸಿ, ದೀರ್ಘವಾಗಿ ಚಿಂತಿಸುತ್ತಾ ಮನೆಯ ಕಡೆಗೆ ಹೊರಟನು ಸುರೇಶ.

ಮನೆಗೆ ಬಂದ ತಕ್ಷಣ ಯಾರೊಡನೆಯೂ ಅವನು ಮಾತನಾಡದೆ ಮೌನವಾಗಿ ತನ್ನ ಕೊಠಡಿಗೆ ಹೋದನು. ಅಲ್ಲಿಗೆ ಬಂದ ಅವನ ಅಪ್ಪ, 'ಸುರೇಶ, ನಿನಗೇನಾಗಿದೆ. ಏಕೆ ಮೌನವಾಗಿರುವೆ? ಓಹೋ, ಗದ್ದೆಗೆ ಹೋಗಿ ಬಂದೆಯಲ್ಲವೇ? ಆಯಾಸವಾಗಿರಬೇಕು. ನಿನ್ನ ಅಜ್ಜ ಕೂಡ ನಾನು ಹೇಳುವುದನ್ನು ಎಲ್ಲಿ ಕೇಳುತ್ತಾರೆ. ಈ ಇಳಿವಯಸ್ಸಿನಲ್ಲಿ ಏಕೆ ಗದ್ದೆಗೆ ಹೋಗಿ ಕೆಲಸ ಮಾಡಬೇಕು? ಮನೆಯಲ್ಲಿಯೇ ಇರಬಹುದಲ್ಲಾ' ಎಂದ ಅಪ್ಪನನ್ನು ಸುರೇಶ ಕೋಪದಿಂದ ನೋಡಿದನು. 'ಅದು ಸರಿ ಅಪ್ಪಾ! ನೀನು ಹೇಳಿದಂತೆ ಯಾರೂ ಹೊಲಗದ್ದೆಗೆ ಹೋಗದಿದ್ದರೆ ಏನಾಗುತ್ತದೆ ಹೇಳು. ಎಲ್ಲರೂ ಹೀಗೆಯೇ ಇದ್ದರೆ... ! ನಾವು ಹಣವನ್ನು ತಿನ್ನೋಕಾಗುತ್ತಾ ?' ಎಂದನು ಸುರೇಶ.

ಸುರೇಶನ ಮಾತಿನಲ್ಲಿದ್ದ ಸತ್ಯಾಂಶವು ಅಪ್ಪನನ್ನು ಯೋಚಿಸುವಂತೆ ಮಾಡಿತು. ಅವನ ಅಪ್ಪ ಕೂಡ ಏನೂ ಮಾತನಾಡದೆ ಗದ್ದೆಯ ಕಡೆಗೆ ಹೊರಟರು.

**ಬನ್ನಿ, ಮಾತಾಡೋಣ!**



- 'ಹಣವನ್ನು ತಿನ್ನಬಹುದೇ?' ಎಂಬ ಸುರೇಶನ ಪ್ರಶ್ನೆಗೆ ನಿಮ್ಮ ಉತ್ತರವೇನು?



**ಚಿಂತಿಸೋಣ !**

ನಮ್ಮ ದೇಶದಲ್ಲಿ ಹಲವಾರು ವೃತ್ತಿಗಳಿವೆ. ವ್ಯವಸಾಯವನ್ನು ಮಾಡಲು ಯಾರಿಗೂ ಇಷ್ಟವಿಲ್ಲವೆಂದಾದರೆ ಪ್ರಪಂಚ ಏನಾಗಬಹುದು ? ಯೋಚಿಸಿ.



4th_Kannada_Reader_Term2.indd 77 12-07-2019 16:04:57

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

01 'ತೋಟದಲ್ಲಿ' ಈ ಪದವನ್ನು ಬಿಡಿಸಿ ಬರೆದಾಗ__________

ಅ) ತೋಟದ+ಅಲ್ಲಿ ಆ) ತೋಟ+ಅಲ್ಲಿ

ಇ) ತೋಟ+ನಲ್ಲಿ ಈ) ತೋಟದ+ಲಿ

02 'ಬಿಸಿಲು' ಈ ಪದದ ವಿರುದ್ಧ ಪದ __________

ಅ) ಕತ್ತಲು ಆ) ರಾತ್ರಿ

ಇ) ನೆರಳು ಈ) ಹಗಲು

03 'ಮನೆಯ+ಒಳಗೆ' ಈ ಪದವನ್ನು ಸೇರಿಸಿ ಬರೆದಾಗ __________

ಅ) ಮನೆಗಳಿಗೆ ಆ) ಮನೆಯಲ್ಲಿ

ಇ) ಮನೆವೊಳಗೆ ಈ) ಮನೆಯೊಳಗೆ

04 'ರೋಗ' ಈ ಪದದ ಸಮಾನಾರ್ಥಕ ಪದ __________

ಅ) ಕಷ್ಟ ಆ) ಕಾಯಿಲೆ

ಇ) ಸುಖ ಈ) ತೊಂದರೆ

05 'ಧ್ವನಿ' ಈ ಪದದ ಸಮಾನಾರ್ಥಕ ಪದ __________

ಅ) ಶಬ್ದ ಆ) ನೋಡು

ಇ) ಕೋಪ ಈ) ಕರೆ

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಕೃತಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಉಂಟಾಗುವ ತೊಂದರೆಗಳೇನು?

02 ಭೂಮಿಯನ್ನು ದೇವರಂತೆ ಪೂಜಿಸಬೇಕು ಎಂದು ತಾತ ಹೇಳಲು ಕಾರಣವೇನು ?

03 ಎಲ್ಲರೂ ಹೀಗೆಯೇ ಇದ್ದರೆ' ಎಂದು ಸುರೇಶ ಏಕೆ ಹೇಳಿದನು ?

### ನಿಮ್ಮ ಸ್ವಂತ ಶೈಲಿಯಲ್ಲಿ ಹೇಳಿ

ನಿಮಗೆ ಇಷ್ಟವಾದ ತರಕಾರಿಗಳು, ಹಣ್ಣುಗಳು ಯಾವುವು ? ಏಕೆ ?



4th_Kannada_Reader_Term2.indd 78 12-07-2019 16:04:57

## ಶಬ್ದಕೋಶವನ್ನು ನೋಡಿ ಅರ್ಥವನ್ನು ಬರೆಯಿರಿ.

ಮಾಲಿನ್ಯ ---------- ಕೃಷಿ ----------

## ಶಬ್ದಗಳನ್ನು ಜೋಡಿಸಿ ವಾಕ್ಯ ರಚನೆ ಮಾಡಿ

ಉದಾಹರಣೆ :

| ಓದಿದೆನು | ಚಿತ್ರಿಸಿದಳು |
|---|---|
| ನಾನು ನಿನ್ನೆ ಪಾಠವನ್ನು ಓದಿದೆನು | ___________ |
| ನಾನು ನಿನ್ನೆ ಕನ್ನಡ ಪಾಠವನ್ನು ಓದಿದೆನು | ________________ |

## ಲೇಖನ ಚಿಹ್ನೆಗಳನ್ನು ಗುರುತಿಸಿ

01 ಭತ್ತ ಕಂಬು ರಾಗಿ ಮುಂತಾದವು ಧಾನ್ಯಗಳು

02 ಬೆಂಡೆಕಾಯಿ ದೇಹಕ್ಕೆ ಒಳ್ಳೆಯದು

03 ಆಹಾ ಪೈರು ಸುಂದರವಾಗಿದೆ

04 ಅಯ್ಯೋ ಹಾಗಾದರೆ ನಾವು ಯಾವುದನ್ನು ತಿನ್ನುವುದು

## ಹೊಸ ಪದಗಳನ್ನು ಸೃಷ್ಟಿಸೋಣವೇ ?

| | | | |
|---|---|---|---|
| ದ | ಠ | ಳೆ | ಮರ, ಕದ, |
| ಕ | ಮ | ರ | |
| ಸ | ನೆ | ಫ | |
| ದ | ನ | ಲ | |
| ಅ | ಕ | ಣ್ಣು | |
| ಚ | ರ | ಜೆ | |
| ಆ | ಯ | ನ | |



4th_Kannada_Reader_Term2.indd 79 12-07-2019 16:04:57

## ಚಿತ್ರ ನೋಡಿ ಒಗಟುಗಳನ್ನು ರಚಿಸಿರಿ

1 

______________________
______________________
______________________

2  

______________________
______________________
______________________

3    

______________________
______________________
______________________

## ಅಕಾರಾದಿ ಕ್ರಮದಲ್ಲಿ ಬರೆಯಿರಿ

ತೆನೆ, ತೈಲ, ತೇಜ, ತೀರ, ತಾಳ್ಮೆ, ತಿಲಕ, ತಗಡು, ತೌಡು, ತೊಗರಿ, ತೋರಣ, ತೀರ, ತುತ್ತೂರಿ





4th_Kannada_Reader_Term2.indd 80 12-07-2019 16:04:59

## ಪದಗಳನ್ನು ಕೇಳಿ ಬರೆಯಿರಿ (ಉಕ್ತಲೇಖನ)

1. ಸಾವಯವ ಕೃಷಿ/ನೈಸರ್ಗಿಕ ಕೃಷಿ
2. ಜೀವ ಸತ್ವಗಳು
3. ಕೃತಕ ಗೊಬ್ಬರಗಳು
4. ಭತ್ತದ ಕಾಳುಗಳು
5. ಐಡಿಗಳು

## ಕಲೆ ಮತ್ತು ಕರಕೌಶಲ್ಯ



## ಕಾರ್ಯ ಯೋಜನೆ



ನಿಮ್ಮ ಮನೆಯಲ್ಲಿ ಸಾವಯವ/ನೈಸರ್ಗಿಕ ಗೊಬ್ಬರವನ್ನು ತಯಾರಿಸಿ. ಆ ಗೊಬ್ಬರವನ್ನು ನಿಮ್ಮ ಮನೆ ಮತ್ತು ಶಾಲೆಗಳಲ್ಲಿರುವ ಗಿಡಗಳಿಗೆ ಉಪಯೋಗಿಸಿ.



4th_Kannada_Reader_Term2.indd 81 12-07-2019 16:04:59

## ಗುಂಪಾಗಿ ಆಡೋಣವೇ?

☞ ಚಿತ್ರದಲ್ಲಿರುವಂತೆ ರಟ್ಟುಗಳನ್ನು ತಯಾರು ಮಾಡಿಕೊಳ್ಳಬೇಕು.

☞ ಮೊದಲ ರಟ್ಟನ್ನು ಸ್ಥಿರವಾಗಿರುವಂತೆ ಇಟ್ಟುಕೊಳ್ಳಬೇಕು.

☞ ಎರಡನೇ ರಟ್ಟನ್ನು ಮಾತ್ರ ತಿರುಗಿಸುವಂತೆ ಇಡಬೇಕು. ಮೇಲ್ಭಾಗದಲ್ಲಿ ಗಡಿಯಾರದ ಮುಳ್ಳನ್ನು ಅಳವಡಿಸಬೇಕು.

☞ ಒಬ್ಬ ವಿದ್ಯಾರ್ಥಿಯನ್ನು ಕರೆದು ಮೊದಲ ರಟ್ಟಿನಲ್ಲಿರುವ ಯಾವುದಾದರೂ ಒಂದು ಚಿತ್ರದ ಹೆಸರನ್ನು ಹೇಳುವಂತೆ ತಿಳಿಸಬೇಕು. ಆ ವಿದ್ಯಾರ್ಥಿಯೇ ಎರಡನೇ ರಟ್ಟನ್ನೂ ತಿರುಗಿಸುವಂತೆ ಹೇಳಬೇಕು. ಗಡಿಯಾರದ ಮುಳ್ಳು ನೇರವಾಗಿ ಮೊದಲ ರಟ್ಟಿನಲ್ಲಿ ಹೇಳಿದ ಚಿತ್ರಕ್ಕೆ ಹೆಸರು ಸರಿಹೊಂದುವ ಚಿತ್ರ ಬಂದರೆ ಅವರು ಜಯಶೀಲರಾದಂತೆ. ಇಲ್ಲವಾದರೆ ಮುಂದಿನ ಸುತ್ತಿಗೆ ಮತ್ತೊಂದು ಅವಕಾಶ ಮಾಡಿಕೊಡುವುದು. ನಂತರ ಮತ್ತೊಬ್ಬರು ಬಂದು ಹೀಗೇ ಆಟವನ್ನು ಮುನ್ನಡೆಸಬೇಕು.



## ತಿಳಿದುಕೊಳ್ಳೋಣ!

**ತಿರುಕ್ಕುರಳ್**

ಭೂಮಿಯನ್ನು ಉತ್ತು, ಪರರಿಗೆ ಉಣವಿತ್ತು ತಾವೂ ಉಣ್ಣುವ ರೈತರೇ ಸುಖಕ್ಕೆ ಪಾಲುದಾರರು; ಉಳಿದವರೆಲ್ಲ ಪರಾಶ್ರಯದಲ್ಲಿ ಬಾಳು ನಡೆಸುವವರು.

– ಕುರಳ್ 1033



4th_Kannada_Reader_Term2.indd 82 12-07-2019 16:05:00

# 12 ರಾಮಣ್ಣನ ತೀರ್ಪು

ಮರ್ಯಾದೆ ರಾಮಣ್ಣ ಒಂದು ಸಾರಿ ವಿಚಿತ್ರವಾದ ಪ್ರಕರಣವನ್ನು ಎದುರಿಸಬೇಕಾಯಿತು. ಒಬ್ಬ ರೈತನ ಮೇಲೆ ಅರಬ್ ದೇಶದ ವರ್ತಕನೊಬ್ಬನ ಮೊಕದ್ದಮೆ ಅದು.

ಅರಬ್ ವರ್ತಕ ಮರ್ಯಾದೆ ರಾಮಣ್ಣನ ಬಳಿ, 'ಸ್ವಾಮೀ, ಈ ರೈತ ತನ್ನ ಮಗನ ಮದುವೆಯ ಸಮಾರಂಭದಲ್ಲಿ ಮೆರವಣಿಗೆ ಹೋಗಲು ನನ್ನ ಆನೆಯನ್ನು ಕೇಳಿದನು. ನಾನು ಕೊಟ್ಟೆ. ಮೆರವಣಿಗೆಯಲ್ಲಿ ಆನೆ ಸತ್ತು ಹೋಯಿತು. ಆ ಆನೆಯನ್ನು ವಾಪಸ್ಸು ಕೊಡುವಂತೆ ಹೇಳಿ' ಎಂದು ಮರ್ಯಾದೆ ರಾಮಣ್ಣನಲ್ಲಿ ವರ್ತಕ ಕೇಳಿಕೊಂಡ.



ರೈತ, 'ಸ್ವಾಮೀ, ಆನೆ ಮೆರವಣಿಗೆಯಲ್ಲಿ ಆಕಸ್ಮಿಕವಾಗಿ ಸತ್ತು ಹೋಯಿತು. ಅದರ ಬೆಲೆ ಎಷ್ಟಾದರೂ ಕೊಡುತ್ತೇನೆ ಅಥವಾ ಬೇರೆ ಆನೆಯನ್ನಾದರೂ ಮರಳಿ ಕೊಡುತ್ತೇನೆ ಎಂದರೆ ಈ ವರ್ತಕ ಅದಕ್ಕೆ ಒಪ್ಪುತ್ತಿಲ್ಲ. "ಸತ್ತು ಹೋದ ಆನೆಯೇ ಬೇಕು" ಎಂದು ಹಠ ಮಾಡುತ್ತಿದ್ದಾನೆ. ಈಗ ನಾನು ಏನು ಮಾಡಲಿ' ಎಂದು ವೇದನೆಯಿಂದ ನುಡಿದ. ರೈತನು ಹೇಳಿದ ಸಂಗತಿಯನ್ನು ತಿಳಿದುಕೊಂಡ ಮರ್ಯಾದೆ ರಾಮಣ್ಣ ಇಬ್ಬರನ್ನೂ



4th_Kannada_Reader_Term2.indd 83 12-07-2019 16:05:01



ನೋಡಿ, 'ನೀವಿಬ್ಬರೂ ನಾಳೆ ಬನ್ನಿ' ಎಂದು ಹೇಳಿ ಕಳಿಸಿದರು. ನಂತರ ರೈತನನ್ನು ಮಾತ್ರ ಪ್ರತ್ಯೇಕವಾಗಿ ಕರೆದು, 'ನಾಳೆ ನೀವು ನ್ಯಾಯಾಲಯಕ್ಕೆ ಬರಬೇಕಾಗಿಲ್ಲ. ನಿಮ್ಮನ್ನು ಕರೆದುಕೊಂಡು ಬರಲು ವ್ಯಾಪಾರಿಯನ್ನು ನಿಮ್ಮ ಮನೆಗೆ ಕಳುಹಿಸುತ್ತೇನೆ. ನೀವು ಮಾಡಬೇಕಾದ ಕಾರ್ಯವೇನೆಂದರೆ, ಆತ ಬರುವಾಗ ನಿಮ್ಮ ಮನೆಯ ಬಾಗಿಲ ಹಿಂದೆ ಮಡಕೆಗಳನ್ನು ಜೋಡಿಸಿಡಿ. ಒಳಕೀಲು ಹಾಕಬೇಡಿ. ಮುಂದೆ ನಡೆಯುವ ಘಟನೆಯ ಬಗ್ಗೆ ನ್ಯಾಯಾಲಯದಲ್ಲಿ ನೋಡಿಕೊಳ್ಳೋಣ' ಎಂದು ಹೇಳಿ ಕಳಿಸಿದರು.

ರೈತನು ಮರ್ಯಾದೆ ರಾಮಣ್ಣ ಹೇಳಿದ ಹಾಗೆಯೇ ಮನೆಯ ಬಾಗಿಲ ಹಿಂದೆ ಹಳೆಯ ಮಡಕೆಗಳನ್ನು ಜೋಡಿಸಿಟ್ಟನು. ಆತನನ್ನು ಕರೆದುಕೊಂಡು ಹೋಗಲು ಬಂದ ವ್ಯಾಪಾರಿಯು ಅವಸರದಿಂದ ಅವರ ಮನೆಯ ಬಾಗಿಲನ್ನು ದೂಡಿದ. ತಕ್ಷಣ ಬಾಗಿಲು ತೆರೆದುಕೊಂಡಿತು. ಬಾಗಿಲ ಹಿಂಭಾಗದಲ್ಲಿ ಜೋಡಿಸಿಟ್ಟಿದ್ದ ಮಡಕೆಗಳು ಒಂದೊಂದಾಗಿ ಕೆಳಗೆ ಬಿದ್ದು ಒಡೆದು ಚೂರಾದವು. ಆಗ ಮನೆಯಿಂದ ಹೊರಗೆ ಬಂದ ರೈತ, 'ವರ್ತಕರೇ, ಏಕೆ ಹೀಗೆ ಮಾಡಿದಿರಿ? ನಮ್ಮ ಮನೆಯಲ್ಲಿ ತಲೆತಲಾಂತರದಿಂದ ರಕ್ಷಿಸಿ ಇಟ್ಟಿದ್ದ ಮಡಕೆಗಳು ಇವು. ಇವುಗಳನ್ನೆಲ್ಲ ಒಡೆದು ಹಾಕಿದ್ದೀರಿ. ನಿಮ್ಮನ್ನು ನಾನು ಸುಮ್ಮನೆ ಬಿಡುವುದಿಲ್ಲ. ನನಗೆ ಈ ಮಡಕೆಗಳನ್ನು ನೀವು ವಾಪಸ್ ಕೊಡಬೇಕು' ಎಂದ. ಏನು ಮಾಡುವುದೆಂದು ತಿಳಿಯದೆ ವರ್ತಕ ದಿಗ್ಭ್ರಮೆಗೊಂಡ.



ವ್ಯಾಪಾರಿ, ರೈತ ಇಬ್ಬರೂ ನ್ಯಾಯಾಲಯಕ್ಕೆ ಹೋದರು. ರೈತನ ಮನೆಯಲ್ಲಿ ನಡೆದ ಘಟನೆಯನ್ನು ಹೇಳಿದ ವ್ಯಾಪಾರಿ. ಅದನ್ನು ಕೇಳಿದ ಮರ್ಯಾದೆ ರಾಮಣ್ಣ, 'ಸ್ವಾಮೀ, ವರ್ತಕರೇ, ನೀವು ಸತ್ತು ಹೋದ ಆನೆಯನ್ನು ಸಜೀವ ಸಹಿತ ಕೊಡಬೇಕು ಎಂದು ಹೇಳುತ್ತಿದ್ದೀರಿ. ರೈತನೋ ಒಡೆದ ತಮ್ಮ ಹಳೆಯ ಮಡಕೆಗಳನ್ನು ವಾಪಸ್ಸು ಕೊಡಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ನೀವು ಒಡೆದ ಮಡಕೆಗಳನ್ನು ಕೊಟ್ಟರೆ ರೈತನು ಸತ್ತು ಹೋದ ನಿಮ್ಮ ಆನೆಯನ್ನು ಕೊಡುತ್ತಾನೆ' ಎಂದು ತಮ್ಮ ನಿರ್ಣಯವನ್ನು ಹೇಳಿದರು. ಆತ ಹೇಳಿದ ನಿರ್ಣಯವನ್ನು ಕೇಳಿದ ವ್ಯಾಪಾರಿಯು, 'ಸ್ವಾಮೀ, ನನ್ನನ್ನು ಕ್ಷಮಿಸಿ ಬಿಡಿ. ನನ್ನಿಂದ ಹಳೆಯ ಮಡಕೆಗಳನ್ನು ಕೊಡಲು ಸಾಧ್ಯವಿಲ್ಲ' ಎಂದನು. ತಕ್ಷಣ ಮರ್ಯಾದೆ ರಾಮಣ್ಣನು 'ಸ್ವಾಮೀ, ವ್ಯಾಪಾರಿಗಳೇ, ನಿಮ್ಮಿಂದ ಕೊಡಲು ಸಾಧ್ಯವಿಲ್ಲ ಎಂದರೆ ರೈತನು ಮಾತ್ರ ಹೇಗೆ ಕೊಡಲು ಸಾಧ್ಯ? ಆದ್ದರಿಂದ ಆನೆಗೂ ಮಡಕೆಗೂ ಸರಿಯಾಯಿತು ಬಿಡಿ' ಎಂದು ತಮ್ಮ ತೀರ್ಪನ್ನು ಹೇಳಿದರು.

**ನೀತಿ: ಆತುರಗಾರನಿಗೆ ಬುದ್ಧಿಮಟ್ಟ**



4th_Kannada_Reader_Term2.indd 84 12-07-2019 16:05:02



ಬನ್ನಿ, ಮಾತಾಡೋಣ!

• 'ಮರ್ಯಾದೆ ರಾಮಣ್ಣನ ತೀರ್ಪು' ಈ ಕಥೆಯನ್ನು ನಿಮ್ಮ ಶೈಲಿಯಲ್ಲಿ ಹೇಳಿ.




ನಿಮ್ಮ ಸ್ನೇಹಿತನು ನಿಮ್ಮನ್ನು ತಪ್ಪಾಗಿ ತಿಳಿದುಕೊಂಡು ನಿಮ್ಮ ಮೇಲೆ ಕೋಪ ಮಾಡಿಕೊಂಡರೆ ನೀವು ಏನು ಮಾಡುವಿರಿ.

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ರೈತನು ಆನೆಯನ್ನು ಏತಕ್ಕಾಗಿ ಕೇಳಿದನು ?

02 ಮೆರವಣಿಗೆಯಲ್ಲಿ ಹೋದ ಆನೆ ಏನಾಯಿತು ?

03 ಮರ್ಯಾದೆ ರಾಮಣ್ಣ ರೈತನನ್ನು ಪ್ರತ್ಯೇಕವಾಗಿ ಕರೆದು ಏನು ಹೇಳಿದನು ?

04 'ರಾಮಣ್ಣನ ತೀರ್ಪು' ಕಥೆಯ ನೀತಿ ಏನು ?

## ಹೂವುಗಳಲ್ಲಿರುವ ಅಕ್ಷರಗಳನ್ನು ಪದಗಳಾಗಿ ರಚಿಸಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿರಿ.

1. ವರ್ತಕರು ______________ ದೇಶಕ್ಕೆ ಸೇರಿದವರು.
2. ರೈತ–ವರ್ತಕ ಈ ಇಬ್ಬರ ಪ್ರಕರಣವನ್ನು ಎದುರಿಸಿದವರು ______________
3. ಮದುವೆಯ ಮೆರವಣಿಗೆಯಲ್ಲಿ ______________ ಸತ್ತು ಹೋಯಿತು.
4. ______________ ಗಳು ಕೆಳಗೆ ಬಿದ್ದು ಒಡೆದು ಚೂರಾದವು..




## ಹೇಳಿ ಅಭ್ಯಾಸ ಮಾಡಿ

1. ಕಪ್ಪು ಕುಂಕುಮ ಕೆಂಪು ಕುಂಕುಮ.
2. ತರಿ ಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯುತ್ತಿತ್ತು.
3. ಬಸಪ್ಪನ ಮನೆಯಲ್ಲಿ ಗಸಗಸೆ ಪಾಯಸ.



4th_Kannada_Reader_Term2.indd 85 12-07-2019 16:05:02

## ಪದಗಳನ್ನು ಸರಿಪಡಿಸಿ ಸರಿಯಾದ ವಾಕ್ಯಗಳನ್ನು ಬರೆಯಿರಿ.

ಆಕಸ್ಮಿಕವಾಗಿ ಸತ್ತು ಹೋಯಿತು ಆನೆ ಮೆರವಣಿಗೆಯಲ್ಲಿ

ಕೆಳಗೆ ಮಡಕೆಗಳು ಚೂರಾದವು ಬಿದ್ದು ಒಡೆದು

ವಿಚಿತ್ರವಾದ ಎದುರಿಸಿದರು ಪ್ರಕರಣವನ್ನು ಮರ್ಯಾದೆ ರಾಮಣ್ಣ

ಇಟ್ಟಿದ್ದನು ಮಡಕೆಗಳನ್ನು ಹಿಂಭಾಗದಲ್ಲಿ ಬಾಗಿಲಿನ ಜೋಡಿಸಿ

1. ___________________________ 2. ___________________________

3. ___________________________ 4. ___________________________

## ಸೂಚನೆಗಳನ್ನು ಉಪಯೋಗಿಸಿ ಕಥೆಯನ್ನು ಸೃಷ್ಟಿಸಿ ಅದಕ್ಕೆ ಸರಿಯಾದ ಶೀರ್ಷಿಕೆಯನ್ನು ಬರೆಯಿರಿ.

ನಾಲ್ಕು ಎತ್ತುಗಳು – ಒಗ್ಗಟ್ಟಾಗಿ ಬಾಳುತ್ತಿದ್ದವು. ಸಿಂಹ – ಅವುಗಳನ್ನು ಬೇರ್ಪಡಿಸಲು – ಆಲೋಚನೆ – ಶತ್ರುಗಳು – ಸಿಂಹದ – ವಂಚನೆ – ಎತ್ತುಗಳು – ಬೇರೆಯಾದವು. – ಸಿಂಹ ಬೇಟೆಯಾಡಿತು.

## ಪದಬಂಧವನ್ನು ಪೂರ್ಣಗೊಳಿಸಿ

| | | | |
|---|---|---|---|
| | 1 | | |
| 4 | | 3 | |
| | 2 | | |
| | | | |
| | | | |

**ಎಡದಿಂದ ಬಲಕ್ಕೆ**

1. ಆಕಾಶದಲ್ಲಿ ಪಕ್ಷಿಯಂತೆ ಹಾರುವ ವಾಹನ (3)
2. ದೊಡ್ಡ ಪಟ್ಟಣ. (3)
3. ಸೊಂಡಿಲು ಇರುವ ಪ್ರಾಣಿ. (2)

**ಮೇಲಿನಿಂದ ಕೆಳಕ್ಕೆ**

2 ಬುದ್ಧಿವಂತ ಪ್ರಾಣಿ (3)
4 ಕಾಡಿನ ವಾಸ (4)

## ಕಾರ್ಯ ಯೋಜನ



ವಾರಪತ್ರಿಕೆ, ದಿನಪತ್ರಿಕೆ, ಇನ್ನಿತರ ಮಾಧ್ಯಮಗಳಲ್ಲಿ ಆನೆಯ ಬಗ್ಗೆ ಬರುವ ವಿಷಯಗಳನ್ನು ಸಂಗ್ರಹಿಸಿ.

# 13 ವಚನಗಳು (ಪದ್ಯ)

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಒಡೆದ ಕುಂಭದಲಿ
ಸುಜಲವ ತುಂಬಿದಂತೆ ಮಾರಯ್ಯ ಪ್ರಿಯ ಅಮರೇಶ್ವರ
ಲಿಂಗವ ಮುಟ್ಟದ ಭಕ್ತಿ.



## ಪದಗಳ ಅರ್ಥ

ಗರ್ವ – ಸೊಕ್ಕು, ಅಹಂಕಾರ
ದ್ರವ್ಯ – ವಸ್ತು, ಪದಾರ್ಥ, ಸಂಪತ್ತು
ಹಾನಿ – ಕೇಡು, ನಾಶ, ನಷ್ಟ

## ಸಾರಾಂಶ

ಜೀವನದಲ್ಲಿ ದೇವರನ್ನು ಕಾಣಲು ಅಂತರಂಗ ಶುದ್ಧಿ ಬಹಳ ಮುಖ್ಯ. ಅನ್ಯ ಚಿಂತೆಗಿಂತ ದೇವರನ್ನು ಕಾಣಬೇಕು ಎಂಬ ಚಿಂತೆ ಇರಬೇಕು. ಜೀವನದಲ್ಲಿ ಸ್ತುತಿ ನಿಂದೆಗಳು ಬಂದಾಗ ಮನದಲ್ಲಿ ಕೋಪ ಮಾಡಿಕೊಳ್ಳದೆ ಸಮಾಧಾನಿಯಾಗಿರಬೇಕು. ಮಾನವರು ನಿರಹಂಕಾರಿಗಳಾಗಿ ನುಡಿಗೆ ತಕ್ಕ ನಡೆಯುಳ್ಳವರಾಗಿ ದಾನಿಗಳಾಗಿ ಇರುವುದು ಮುಖ್ಯ ಎಂಬುದು ಇಲ್ಲಿನ ಆಶಯವಾಗಿದೆ.



4th_Kannada_Reader_Term2.indd 87 12-07-2019 16:05:04



## ಬನ್ನಿ, ಮಾತಾಡೋಣ!

- ಈ ಪದ್ಯವನ್ನು ಸರಿಯಾದ ಉಚ್ಚಾರಣೆಯೊಂದಿಗೆ ಓದಿ ಸಂತೋಷಿಸಿರಿ.

ಬೇರೆಯವರು ನಿಮ್ಮೊಂದಿಗೆ ಹೇಗೆ ಮಾತನಾಡಬೇಕು? ಏಕೆ?



**ಚಿಂತಿಸೋಣ !**

ಒಳ್ಳೆಯ ನುಡಿಗಳು ಒಳ್ಳೆಯದನ್ನೇ ತರುತ್ತದೆ ಎನ್ನುವುದನ್ನು ಬೇರೆಯವರಿಗೆ ನೀವು ಹೇಗೆ ತಿಳಿಸುವಿರಿ.

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

01 'ನಡೆಯಿಲ್ಲದ' – ಎಂಬ ಪದವನ್ನು ಬಿಡಿಸಿ ಬರೆದಾಗ___________

ಅ) ನಡೆ + ಯಿಲ್ಲದ ಆ) ನಡೆ + ಇಲ್ಲದ

ಇ) ನಡೆಯಿ + ಲ್ಲದ ಈ) ನಡೆಯು + ಇಲ್ಲದ

02 'ಅರಿವು' ಈ ಪದದ ಅರ್ಥ ___________

ಅ) ಅರಿವೆ ಆ) ಹರಿಯುವುದು

ಇ) ಜ್ಞಾನ ಈ) ಅಜ್ಞಾನ

03 'ತುಂಬಿದ + ಅಂತೆ' – ಎಂಬ ಪದಗಳನ್ನು ಸೇರಿಸಿ ಬರೆದಾಗ ___________

ಅ) ತುಂಬಿದಂತೆ ಆ) ತುಂಬಿದಹಾಗೆ

ಇ) ತುಂಬಿತಂತೆ ಈ) ತುಂಬಿದೆಯಂತೆ

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ನಡೆಯಿಲ್ಲದ ನುಡಿ ಯಾವುದು?

02 ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

### ಹೊಂದಿಸಿ ಬರೆಯಿರಿ.

| | | |
|---|---|---|
| ಗರ್ವದಿಂದ ಮಾಡುವ | – | ಜ್ಞಾನ |
| ನಡೆಯಿಲ್ಲ | – | ನುಡಿ |
| ದೃಢವಿಲ್ಲದ | – | ಸೊಕ್ಕು |
| ಅರಿವು | – | ಭಕ್ತಿ |



4th_Kannada_Reader_Term2.indd 88 12-07-2019 16:05:04

## ಸೂಚನೆಗೆ ಅನುಗುಣವಾದ ಅಕ್ಷರವನ್ನು ತುಂಬಿರಿ

| | | | | | |
|---|---|---|---|---|---|
| 1 | ನಮ್ಮ ದೇಶದ ಹೆಸರು | | | | |
| 2 | ರಾಜನಿಗೆ ಮತ್ತೊಂದು ಹೆಸರು | | | | |
| 3 | ಅಂಗಿಗೆ ಮತ್ತೊಂದು ಹೆಸರು | | | | |
| 4 | ಸುವಾಸನೆಯುಳ್ಳ ಹೂವು | | | | |

## ಚಿಕ್ಕ ವೃತ್ತದಲ್ಲಿರುವ ಮೊದಲ 'ಸ' ಅಕ್ಷರದಿಂದ ಆರಂಭಿಸಿ, ಉಳಿದ ವೃತ್ತಗಳಲ್ಲಿರುವ ಅಕ್ಷರಗಳನ್ನು ಬಳಸಿಕೊಂಡು ಪದಗಳನ್ನು ರಚಿಸಿ




1. ಸರ
2.
3.
4.
5.
6.
7.
8.
9.
10

# 14 ಹಿಮಗಿರಿ ಪಯಣ
















ಎಲ್ಲರೂ ಒಂದು ದೋಣಿಯಲ್ಲಿ ಪ್ರಯಾಣ ಮಾಡಿದರು.




ದಿಢೀರನೆ ನೀರು ಹರಿಯುವ ರಭಸಕ್ಕೆ ದೋಣಿಯು ಪಕ್ಕಕ್ಕೆ ಬಾಗಿತು.




ಅವುಗಳನ್ನು ಒಂದು ಮೊಸಳೆ ನೋಡಿತು.








4th_Kannada_Reader_Term2.indd 91 12-07-2019 16:05:08




## ಬನ್ನಿ, ಮಾತಾಡೋಣ!



- ನಿಮ್ಮ ಗೆಳೆಯನ/ಗೆಳತಿಯ ಬಳಿ ನಿಮಗಿಷ್ಟವಾದ ಅಥವಾ ಇಷ್ಟವಿಲ್ಲದ ಗುಣಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

## ಚಿಂತಿಸೋಣ !



ಪಕ್ಕದ ಊರಿಗೆ ಹೋಗಲು ದೋಣಿಯಲ್ಲಿಯೂ ಪ್ರಯಾಣಿಸಬಹುದು, ಬಸ್ಸಿನಲ್ಲಿಯೂ ಪ್ರಯಾಣಿಸಬಹುದು. ಹಾಗಾದರೆ ನೀವು ಯಾವುದರಲ್ಲಿ ಪ್ರಯಾಣಿಸಲು ಇಷ್ಟ ಪಡುತ್ತೀರಿ. ಕಾರಣವೇನು ? ವಿವರಿಸಿ.



4th_Kannada_Reader_Term2.indd 92 12-07-2019 16:05:10

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

01 ಹಿಮಗಿರಿಗೆ ಸುಲಭವಾಗಿ ಹೋಗಲು ಸಾಧ್ಯವಿಲ್ಲ ________ ಗೆರೆ ಹಾಕಿರುವ ಪದದ ವಿರುದ್ಧ ಪದವನ್ನು ಗುರುತಿಸಿರಿ.

ಅ) ನಿಧಾನ ಆ) ಕಷ್ಟ

ಇ) ವೇಗ ಈ) ಕಠಿಣ

02 'ಜೀರ್ಣವಾಗದೆ' ಈ ಪದವನ್ನು ಬಿಡಿಸಿ ಬರೆದರೆ ________

ಅ) ಜೀರ್ಣ+ವಾಗದೆ ಆ) ಜೀರ್ಣವು+ವಾಗದೆ

ಇ) ಜೀರ್ಣವಾಗಿ+ಆಗದೆ ಈ) ಜೀರ್ಣ+ಆಗದೆ

03 'ಕಾಡು' ಈ ಪದದ ಸಮಾನಾರ್ಥಕ ಪದ ________

ಅ) ಹಾಡು ಆ) ಪಾಡು

ಇ) ಜಾಡು ಈ) ಕಾನನ

04 'ಏನು+ಆಯಿತು' ಈ ಪದವನ್ನು ಸೇರಿಸಿ ಬರೆದಾಗ ________

ಅ) ಏನುವಾಯಿತು ಆ) ಏನಾಗಿತ್ತು

ಇ) ಏನಾಯಿತು ಈ) ಏನಾಗಿದೆ

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ದೋಣಿಯಲ್ಲಿ ಪ್ರಯಾಣಿಸುವಾಗ ಪ್ರಾಣಿಗಳು ಏಕೆ ಗಾಬರಿಯಿಂದ ಕೂಗಿದವು ?

02 ನರಿ ಮೊಸಳೆಯೊಡನೆ ಏನು ಹೇಳಿತು ?

03 ನರಿ ಮೊಸಳೆಯೊಡನೆ ಏನು ಹೇಳಿತು ?

### ಸರಿಯಾದ ಪೆಟ್ಟಿಗೆಯೊಡನೆ ಪ್ಯಾರಾಚೂಟನ್ನು ಜೋಡಿಸಿರಿ.






4th_Kannada_Reader_Term2.indd 93 12-07-2019 16:05:10

## ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದವನ್ನು ಭರ್ತಿ ಮಾಡಿ ಜೋಡಿ ಪದಗಳನ್ನು ರಚಿಸಿ.

01 ______________ ಸೊಂಪು = ಇಂಪುಸೊಂಪು

02 ______________ ಮೇಡು = ______________________

03 ______________ ಬರಹ = ______________________

04 ______________ ಗೆಣಸು = ______________________

05 ______________ ಕರು = ______________________

06 ______________ ತಪ = ______________________

## ಭಾಷೆಯೊಂದಿಗೆ ಆಟ

**ಕೊಟ್ಟಿರುವ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸಿ ಪಟ್ಟಿ ಮಾಡಿ.**

| | | | | | |
|---|---|---|---|---|---|
| ಕ | ಎ | ಲೆ | ನಾ | ಯಿ | ನೆ |
| ರು | ನ | ಹಾ | ವು | ಮ | ಸ |
| ದೋ | ಎ | ಚ | ರ | ಣ | ರ |
| ಣಿ | ಕ | ರ | ಗ | ಪ | ದಿ |
| ಕು | ದು | ರೆ | ಉ | ದ | ಗ |

★ ______ಎಲೆ______ ☆ ________________ ☆ ________________
☆ ________________ ☆ ________________ ☆ ________________
☆ ________________ ☆ ________________ ☆ ________________
☆ ________________ ☆ ________________ ☆ ________________

## ಪದಗಳನ್ನು ಕೇಳಿ ಬರೆಯಿರಿ

1. ದಟ್ಟವಾದ ಕಾಡು
2. ಪ್ರಯಾಣ
3. ಹಿಮಗಿರಿಯ ಕಾಡು
4. ಪ್ರಾಣಿಗಳು
5. ಜಾತ್ರೆ

## ಅಕಾರಾದಿ ಕ್ರಮದಲ್ಲಿ ಬರೆಯಿರಿ

ಮೀನುಗಾರ, ಮೂಗು, ಮೇಲಾಟ, ಮೋಡ, ಮೈದಾನ, ಮೌನ, ಮುಂಗಾರು, ಮರ, ಮುಗಿಲು, ಮಾವಿನಮರ, ಮೆದುಳು, ಮೊಸಳೆ.



## ಕಲೆ ಮತ್ತು ಕರಕೌಶಲ್ಯ

### ಕಾಗದದ ಹೂವನ್ನು ಮಾಡೋಣ







## ಕಾರ್ಯ ಯೋಜನೆ

ಎರಡು ನೀತಿ ಕಥೆಗಳನ್ನು ಬರೆದುಕೊಂಡು ಬನ್ನಿ.



4th_Kannada_Reader_Term2.indd 95 12-07-2019 16:05:11

# 15 ಸತ್ಯವನ್ನು ಪರಿಶೋಧಿಸಬೇಕು



ಬಾ ಸೋಮು, ಏನು ಈ ದಿನ ಹಗಲಿನಲ್ಲಿಯೇ ಬಂದಿರುವೆ?

ಹೌದು ತಾತಾ! ನಿನ್ನೆ ನೀವು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು. ಆದ್ದರಿಂದ ಬೇರೆ ಕಥೆಯನ್ನು ಕೇಳಲು ಕುತೂಹಲದಿಂದ ಬೆಳಗ್ಗೆಯೇ ಬಂದಿದ್ದೇನೆ.

'ಸರಿ ಸೋಮು. ಈ ದಿನ ನಿನಗೆ ಒಂದು ಒಳ್ಳೆಯ ಕಥೆಯನ್ನು ಹೇಳುತ್ತೇನೆ, ಕೇಳು':

ಒಬ್ಬ ಮಹಾರಾಜ ತನ್ನ ಕುದುರೆಯನ್ನು ಹತ್ತಿ ಸವಾರಿ ಮಾಡಿಕೊಂಡು ಒಂದು ಗ್ರಾಮದ ಮಾರ್ಗವಾಗಿ ಹೋಗುತ್ತಿದ್ದ. ಗ್ರಾಮಗಳ ಪ್ರಗತಿಯ ಬಗ್ಗೆ ಮತ್ತು ಪ್ರಜೆಗಳು ಹೇಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ರಾಜನು ತನ್ನ ಕುದುರೆಯ ಮೇಲೆ ಪ್ರಯಾಣ ಮಾಡುತ್ತಿದ್ದನು. ರಾಜನಂತೆ ಅವನ ಕುದುರೆಯೂ ಕರುಣೆಯುಳ್ಳದ್ದಾಗಿತ್ತು.

ಆ ಕುದುರೆ ಸುತ್ತಮುತ್ತ ನೋಡುತ್ತಾ ಮಹಾರಾಜರನ್ನು ತನ್ನ ಮೇಲೆ ಕೂರಿಸಿಕೊಂಡು ಬರುತ್ತಿತ್ತು.

ಆಗ ಒಂದು ನಾಯಿ ಕಾಲಿಗೆ ಗಾಯವಾದುದರಿಂದ ಕುಂಟುತ್ತಾ ಕುಂಟುತ್ತಾ ನಡೆದು ಹೋಗುತ್ತಿರುವುದನ್ನು ಕುದುರೆ ನೋಡಿತು. ತಕ್ಷಣ ನಾಯಿಗೆ ತಾವು ಸಹಾಯ ಮಾಡಬೇಕೆಂದು ಅದು ಮನಸ್ಸಿನಲ್ಲೇ ಯೋಚಿಸಿತು. ನಂತರ ಕುದುರೆ ಕೆನೆಯುತ್ತಾ ರಾಜನನ್ನು ಕರೆದು ಹೇಳಿತು.



4th_Kannada_Reader_Term2.indd 96 12-07-2019 16:05:11

'ಮಹಾರಾಜಾ ಅದೋ ನೋಡಿ, ಆ ನಾಯಿಯು ನಡೆಯಲಾರದೆ ಕುಂಟುತ್ತಾ ಹೋಗುತ್ತಿದೆ. ಆ ನಾಯಿಯನ್ನು ನನ್ನ ಬೆನ್ನಿನ ಮೇಲೆ ಏರಿಸಿಕೊಂಡು ಅದು ಎಲ್ಲಿಗೆ ಹೋಗಬೇಕೋ ಆ ಸ್ಥಳಕ್ಕೆ ಬಿಟ್ಟು ಬಿಡೋಣವೇ?' ಎಂದು ಕೇಳಿತು.

'ಆಹಾ! ಕುದುರೆಯೇ, ನನ್ನಂತೆ ನೀನೂ ಕರುಣೆಯಿಂದ ನಡೆದುಕೊಳ್ಳುವೆ. ಆ ನಾಯಿಗೆ ಸಹಾಯ ಮಾಡುವುದರಲ್ಲಿ ನಿನ್ನಂತೆಯೇ ನನಗೂ ಸಂತೋಷ' ಎಂದ ರಾಜ, ತಕ್ಷಣ ತನ್ನ ಹಿಂಬದಿಯಲ್ಲಿ ಬರುತ್ತಿದ್ದ ಕಾವಲುಗಾರರಿಗೆ, 'ಆ ನಾಯಿಯನ್ನು ಹೊತ್ತು ತಂದು ತನ್ನ ಮುಂದೆ ಕೂರಿಸಿ' ಎಂದರು.

ಕಾವಲುಗಾರರು ಆ ನಾಯಿಯನ್ನು ಕುದುರೆಯ ಮೇಲೆ, ರಾಜನ ಮುಂದೆ ಕೂರಿಸಿದರು.

ಮಹಾರಾಜನ ಮುಂದೆ ಕುಳಿತುಕೊಂಡು ಸವಾರಿ ಹೋಗುತ್ತಿರುವುದಕ್ಕೆ ನಾಯಿಗೆ ತುಂಬಾ ಸಂತೋಷವಾಯಿತು.

ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಬರುವ ಮಹಾರಾಜರನ್ನು ನೋಡಿದ ಗ್ರಾಮದ ಜನರೆಲ್ಲಾ ಅವರನ್ನು ನೋಡಿ, ಗೌರವವನ್ನು ಸಲ್ಲಿಸಿದರು.





4th_Kannada_Reader_Term2.indd 97 12-07-2019 16:05:12

ಅದನ್ನು ನೋಡಿದ ನಾಯಿಯು 'ಈ ಜನರೆಲ್ಲಾ ನನ್ನನ್ನು ನೋಡಿಯೇ ನಮಸ್ಕರಿಸುತ್ತಿದ್ದಾರೆ' ಎಂದುಕೊಂಡು, 'ಪಕ್ಕದಲ್ಲಿರುವ ಮಹಾರಾಜರು ಮತ್ತು ಕುದುರೆಗಿಂತ ನಾನೇ ಉತ್ತಮವಾದವನು. ಈ ಜನರು ನನಗೆ ನಮಸ್ಕರಿಸುವುದನ್ನು ನೋಡಿದರೆ, ನನಗೆ ಅತ್ಯಾನಂದವಾಗುತ್ತದೆ' ಎಂದು ಸಂತೋಷ ಪಟ್ಟಿತು. ಮರುಕ್ಷಣದಲ್ಲಿಯೇ ಅದು ಬೌ... ಬೌ... ಎಂದು ಬೊಗಳಿತು.

ನಾಯಿಯ ನಡತೆಯನ್ನು ಗಮನಿಸಿದ ಕುದುರೆ, 'ನಾಯಿಯೇ ತಾಳ್ಮೆಯಿಂದ ಇರು. ನೀನು ಬೊಗಳುತ್ತಿದ್ದರೆ ಎಲ್ಲರಿಗೂ ನಿನ್ನ ಮೇಲೆ ದ್ವೇಷವುಂಟಾಗುತ್ತದೆ. ನೀನು ನನ್ನ ಮೇಲೆ ಸವಾರಿ ಮಾಡಲು ಆಗುವುದಿಲ್ಲ' ಎಂದಿತು.

'ಕುದುರೆಯೇ, ಈ ಗ್ರಾಮದ ಜನರು ನನಗೆ ನಮಸ್ಕರಿಸುವುದನ್ನು ನೋಡಿ, ನಿನಗೆ ನನ್ನ ಮೇಲೆ ಅಸೂಯೆಯುಂಟಾಗಿದೆ' ಎಂದಿತು.

'ನಾಯಿಯೇ, ಪ್ರಜೆಗಳು ನಿನ್ನನ್ನು ನೋಡಿ ನಮಸ್ಕರಿಸಲಿಲ್ಲ. ಅವರು ಮಹಾರಾಜರನ್ನು ನೋಡಿ, ನಮಸ್ಕರಿಸಿದರು. ಮಹಾರಾಜರ ಮುಂದೆ ಕುಳಿತಿರುವ ನೀನು ಅದೆಲ್ಲವನ್ನೂ ನೋಡಿ ಅದೆಲ್ಲವೂ ನಿನಗೆ ದೊರೆತ ಗೌರವವೆಂದು ಭಾವಿಸಿ ಸಂತೋಷಿಸುತ್ತಿರುವೆ. ಇನ್ನು ಮೇಲಾದರೂ ಸತ್ಯಾಂಶವನ್ನು ಅರಿತು ಸುಮ್ಮನಿರು' ಎಂದು ಕುದುರೆ ಹೇಳಿತು.

'ಕುದುರೆಯೇ, ನನ್ನ ಮೇಲಿರುವ ಅಸೂಯೆಯಿಂದ ನೀನು ಹೀಗೆ ಹೇಳುತ್ತಿರುವೆ ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ನನಗೆ ನೀನು ತಪ್ಪಾದ ವಿವರಣೆಯನ್ನು ಕೊಡುತ್ತಿರುವೆ. ಈ ವಿವರಣೆಯನ್ನು ಕೇಳಲು ನಾನು ಸಿದ್ಧವಿಲ್ಲ' ಎಂದುಕೊಂಡು ತುಂಬಾ ಜೋರಾಗಿ ನಾಯಿಯು ಬೊಗಳತೊಡಗಿತು.

ಮಹಾರಾಜರ ಪಕ್ಕದಲ್ಲಿ ಬರುತ್ತಿದ್ದ ಕಾವಲುಗಾರರು ಆ ನಾಯಿಯನ್ನು ಕೆಳಗೆ ಇಳಿಸಿ, ಅದನ್ನು ಹೊಡೆದು ಓಡಿಸಿದರು. ಅಲ್ಲಿಂದಲೇ ಕುಂಟುತ್ತಾ ದೂರ ಓಡಿದ ನಾಯಿ, ಸ್ವಲ್ಪ ದೂರದಲ್ಲಿ ನಿಂತು ತಿರುಗಿ ನೋಡಿತು. ಪ್ರಜೆಗಳೆಲ್ಲರೂ ಮಹಾರಾಜರಿಗೆ ನಮಸ್ಕರಿಸಲು ಮಹಾರಾಜರು ಅವರಿಗೆ ಪ್ರತಿ ವಂದನೆಯನ್ನು ಹೇಳುತ್ತಿದ್ದರು. ಈ ದೃಶ್ಯವನ್ನು ನೋಡಿದ ನಾಯಿಗೆ, ಆಗ ಸತ್ಯಾಂಶ ಏನೆಂದು ತಿಳಿಯಿತು. ತನ್ನ ತಪ್ಪನ್ನು ನೆನಪಿಸಿಕೊಂಡು ಅದು ಪಶ್ಚಾತ್ತಾಪ ಪಟ್ಟಿತು. ನಾನು ಪರಿಶೀಲಿಸದೇ ನಿರ್ಧರಿಸಿದೆ. ಆದ್ದರಿಂದ ನನಗೆ ಇಂತಹ ಸ್ಥಿತಿ ಉಂಟಾಯಿತು.... ಎಂದು ಅರಿ ತುಕೊಂಡಿತು.

'ನಿಜವನ್ನು ಅರಿಯದೆ ತೀರ್ಮಾನ ತೆಗೆದುಕೊಂಡರೆ ಏನು ನಡೆಯುತ್ತದೆ ಎಂಬುದನ್ನು ತಿಳಿದುಕೊಂಡೆಯಾ?' ಎಂದು ತಾತ ಕೇಳಿದರು!



4th_Kannada_Reader_Term2.indd 98 12-07-2019 16:05:12

## ಬನ್ನಿ, ಮಾತಾಡೋಣ!



- ಈ ಕಥೆಯನ್ನು ನಿಮ್ಮ ಸ್ವಂತ ಶೈಲಿಯಲ್ಲಿ ಹೇಳಿರಿ.
- ಪರಿಶೋಧಿಸಿ ನಡೆಯುವುದರಿಂದ ಸಿಗುವ ಅನುಕೂಲಗಳಾವುವು? ಹೇಳಿರಿ.



## ಚಿಂತಿಸೋಣ !

ನೀವು ಮಾಡದ ಕೆಲಸಕ್ಕೆ ನಿಮಗೆ ಒಬ್ಬರು ಕೃತಜ್ಞತೆ ಹೇಳಿದರೆ ಅಥವಾ ಬಹುಮಾನ ಕೊಟ್ಟರೆ ಆಗ ನೀವೇನು ಮಾಡುವಿರಿ? ವಿವರಿಸಿ

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

01 ಕುದುರೆ ಏಕೆ ನಾಯಿಗೆ ಸಹಾಯ ಮಾಡಲು ಯೋಚಿಸಿತು ?

02 ಕಾವಲುಗಾರರು, ಕುದುರೆಯ ಮೇಲಿದ್ದ ನಾಯಿಯನ್ನು ಏಕೆ ಕೆಳಗಿಳಿಸಿದರು?

## ಆಲಿಸಿ ಬರೆಯಿರಿ

ಕುದುರೆ, ಕರುಣೆ, ಅಸೂಯೆ, ದುರಾಸೆ, ಪ್ರಜೆಗಳು.

## ಲೇಖನ ಚಿಹ್ನೆಯನ್ನು ಬಳಸಿ ಬರೆಯಿರಿ.

ಮಹಾರಾಜಾ ಅದೋ ಒಂದು ನಾಯಿ ನಡೆಯಲಾಗದೆ ಕುಂಟುತ್ತಾ ಕುಂಟುತ್ತಾ ಹೋಗುತ್ತಿದೆ ಆ ನಾಯಿಯನ್ನು ನನ್ನ ಬೆನ್ನಿನ ಮೇಲೆ ಏರಿಸಿಕೊಂಡು ಅದು ಎಲ್ಲಿಗೆ ಹೋಗಬೇಕೋ ಆ ಸ್ಥಳಕ್ಕೆ ಹೋಗಿ ಬಿಟ್ಟುಬಿಡೋಣ ಎಂದು ಹೇಳಿತು

**ಕೆಳಗಿನ ಜೋಡಿ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ**

**ಉದಾಹರಣೆ : ನಕ್ಷತ್ರಗಳು ಪಳಪಳ ಹೊಳೆಯುತ್ತವೆ.**

ಸರಸರ ____________

ಢಣಢಣ ____________

ತಕತಕ ____________

ಫಳಫಳ ____________

ಕಿಲಕಿಲ ____________

## ಒಗಟನ್ನು ಓದಿ ಉತ್ತರಿಸಿ

ಮಾತು ಕೇಳಿಸಿದರೂ
ಮುಖ ಕಾಣದು
ಕಿವಿಗೆ ಹತ್ತಿರವಾದರೂ
ಬಾಯಿಗೆ ದೂರ ನಾನಾರು

ರೆಕ್ಕೆಯುಂಟು ಹಕ್ಕಿಯಲ್ಲ
ಸದ್ದುಂಟು ಗುಡುಗಲ್ಲ
ಓಡುವೆನು ಮೋಡವಲ
ನಾನಾರು ?

ಊರುಂಟು ಜನರಿಲ್ಲ
ನದಿಯುಂಟು ನೀರಿಲ್ಲ
ರಸ್ತೆಯುಂಟು ವಾಹನವಲ್ಲ
ನಾನಾರು ?

## ಶಬ್ದ ಕೋಶವನ್ನು ನೋಡಿ ಅರ್ಥ ಬರೆಯಿರಿ

ನಕಲು, ಅಸೂಯೆ, ಸವಾರಿ, ದಯೆ, ಗೌರವ.

## ಈ ಪದಗಳಲ್ಲಿರುವ ತಪ್ಪುಗಳನ್ನು ಸರಿಪಡಿಸಿ

ಮಲಿರಾಜ, ಕುದರೆ, ಸಾವರಿ, ಉತ್ಸಅ, ಪ್ರಜೆಗಲು, ಕೆನೆಇತು, ಗ್ರಾಮಫಲು, ಗುನ.

## ಕಲೆ ಮತ್ತು ಕರಕೌಶಲ್ಯ

ಉಪಯೋಗಿಸಿದ ಕಾಗದದಿಂದ ಲಕೋಟೆ ತಯಾರಿಸೋಣವೇ?

ಬೇಕಾಗುವ ಸಾಮಗ್ರಿಗಳು

ಹಳೆಯ ದಿನಪತ್ರಿಕೆಗಳು, ಗೋಂದು(ಅಂಟು)





4th_Kannada_Reader_Term2.indd 100 12-07-2019 16:05:12

## ಪ್ರಾಣಿಗಳ ಕೂಗುಗಳಿಗೆ ವೃತ್ತವನ್ನು ಹಾಕಿರಿ.







| | | | | | | | |
|---|---|---|---|---|---|---|---|
| ಘ | ರ್ಜ | ಸು | ತ್ತ | ದೆ | ಗ | ನ | ಗ |
| ಕಿ | ರು | ಚು | ಕೆ | ನೆ | ತ | ದ | ಲ |
| ಬೊ | ಗ | ಳು | ತ್ತ | ದೆ | ಒ | ದ | ರು |
| ಬೊ | ಬ್ಬೆ | ಊ | ಳಿ | ಡು | ಮ | ಸ | ಪ |
| ಕೂ | ಗು | ನ | ವೆ | ಚೀ | ರು | ತ್ತ | ವೆ |
| ಭು | ಸು | ಗು | ಡು | ಘೀ | ಳಿ | ಟ್ಟಿ | ತು |





## ತಿಳಿದುಕೊಳ್ಳೋಣ.

| | |
|---|---|
| ಚಾಂದ್ರಮಾನ ಮಾಸಗಳು | 12 |
| ತಿಥಿಗಳು | 15 |
| ಪಕ್ಷಗಳು | 02 |
| ಋತುಗಳು | 06 |
| ನಕ್ಷತ್ರಗಳು | 27 |
| ದ್ವಾದಶ ರಾಶಿಗಳು | 12 |
| ಸಂವತ್ಸರಗಳು | 60 |



## ಕಾರ್ಯ ಯೋಜನೆ

ಇತರರು ಪ್ರಶಂಸೆ ಮಾಡುವ ಒಳ್ಳೆಯ ಕೆಲಸಗಳು ಯಾವುದೆಂದು ನಿಮ್ಮ ಮನೆಯಲ್ಲಿರುವವರ ಹತ್ತಿರ ಕೇಳಿ ಬರೆದುಕೊಂಡು ಬನ್ನಿ.



4th_Kannada_Reader_Term2.indd 101 12-07-2019 16:05:13

# ವ್ಯಾಕರಣ
# ಕಾಲಗಳು


ಭೂತ ಕಾಲ


ವರ್ತಮಾನ ಕಾಲ


ಭವಿಷ್ಯತ್ ಕಾಲ

**ಕೆಳಕಂಡ ವಾಕ್ಯಗಳನ್ನು ಉದಾಹರಣೆಯಂತೆ ಬರೆಯಿರಿ.**

ಉದಾಹರಣೆ

ನಾನು ಊಟ ---------------(ಮಾಡು) – ನಾನು ಊಟು ಮಾಡಿದೆನು (ಭೂತಕಾಲ)

ನಾನು ಊಟ ಮಾಡುತ್ತಿದ್ದೇನೆ (ವರ್ತಮಾನ)

ನಾನು ಊಟ ಮಾಡುವೆನು (ಭವಿಷ್ಯತ್ ಕಾಲ)

| ಕ್ರಮ ಸಂಖ್ಯೆ | ವಾಕ್ಯ | ಭೂತಕಾಲ | ವರ್ತಮಾನಕಾಲ | ಭವಿಷ್ಯತ್‌ಕಾಲ |
|---|---|---|---|---|
| 1 | ತಾಯಿ ಅಡುಗೆ ------- (ಮಾಡು) | | | |
| 2 | ಆಡು ಹುಲ್ಲು ------- (ಮೇಯು) | | | |
| 3 | ನಾವು ಚಿತ್ರ ------- (ಬರೆ) | | | |
| 4 | ರವಿ ಸ್ಪರ್ಧೆಯಲ್ಲಿ ------- (ಜಯ) | | | |
| 5 | ನವಿಲುಗಳು ನಾಟ್ಯ ------- (ಆಡಿ) | | | |



4th_Kannada_Reader_Term2.indd 102 12-07-2019 16:05:13

## ಪೆಟ್ಟಿಗೆಯಲ್ಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.

| ಕ್ರಮ ಸಂಖ್ಯೆ | ವಾಕ್ಯ | ಭೂತಕಾಲ | ವರ್ತಮಾನಕಾಲ | ಭವಿಷ್ಯತ್‌ಕಾಲ |
|---|---|---|---|---|
| 1 | ಮಾಡು | | ಮಾಡುತ್ತಿದ್ದಾನೆ | |
| 2 | | ಹಾರಿತು | | |
| 3 | | | | ಓದುವನು |
| 4 | ಕೇಳು | ಕೇಳಿದನು | | |
| 5 | | | | ಹೇಳುವರು |

## ಕೆಳಕಂಡ ಚಿತ್ರಗಳಿಗೆ ಸರಿಯಾದ ಕಾಲಗಳನ್ನು ಉಪಯೋಗಿಸಿ ವಾಕ್ಯವನ್ನು ಬರೆಯಿರಿ



ರಾಜು ಏಣಿಯಲ್ಲಿ ಏರುತ್ತಿದ್ದಾನೆ



\-\-\-\-\-\-\-\-\-\-\-\-\-\-\-\-




\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



\-\-\-\-\-\-\-\-\-\-\-\-\-\-\-\-



4th_Kannada_Reader_Term2.indd 103 12-07-2019 16:05:13

# 16 ತಿರುಕ್ಕುರಳ್ ಕಥೆಗಳು

## ತಾಳ್ಮೆಯೂ ಜವಾಬ್ದಾರಿಯೂ

ಥಾಮಸ್ ಆಲ್ವಾ ಎಡಿಸನ್ ಪ್ರಸಿದ್ಧ ವಿಜ್ಞಾನಿ. ಇವರು ಸಾವಿರಕ್ಕೂ ಹೆಚ್ಚು ಬಾರಿ ಪ್ರಯತ್ನ ಮಾಡಿ, ತಮ್ಮ ಸಂಶೋಧನೆಗಳಲ್ಲಿ ಸೋಲನ್ನು ಕಂಡು ಸತತ ಪ್ರಯತ್ನದ ನಂತರ ವಿದ್ಯುತ್ ದೀಪವನ್ನು ಕಂಡು ಹಿಡಿದರು.

ಸ್ನೇಹಿತರಿಗೂ ಮತ್ತು ಇತರ ವಿಜ್ಞಾನಿಗಳಿಗೂ ತಮ್ಮ ಸಂಶೋಧನೆಯನ್ನು ಮಾಡಿ ತೋರಿಸಲು ಎಡಿಸನ್ ಇಚ್ಛಿಸುತ್ತಿದ್ದರು. ಅದಕ್ಕಾಗಿ ಒಂದು ಕೂಟವನ್ನು ಏರ್ಪಡಿಸಿ ಅದರಲ್ಲಿ ಎಲ್ಲರೂ ಭಾಗವಹಿಸುವಂತೆ ಮಾಡಿದರು. ಅವರ ಸಂಶೋಧನಾಲಯದ ಮೇಲ್ಮಹಡಿಯಲ್ಲಿ ಈ ಕೂಟ ನಡೆಯಿತು.

ಎಡಿಸನ್ ತಮ್ಮ ಸಹಾಯಕರನ್ನು ಕರೆದು ವಿದ್ಯುತ್ ಬಲ್ಬನ್ನು ತಮ್ಮ ಮಹಡಿ ಮನೆಗೆ ತೆಗೆದುಕೊಂಡು ಬರುವಂತೆ ಹೇಳಿದರು. ಸಹಾಯಕನು ಅದನ್ನು ತೆಗೆದುಕೊಂಡು ಬರುವಾಗ ದಿಢೀರೆಂದು ಕೈ ಜಾರಿ ಅದು ಕೆಳಗೆ ಬಿದ್ದು ಒಡೆದು ಹೋಯಿತು. ಆದರೂ ಸ್ವಲ್ಪವೂ ವಿಚಲಿತರಾಗದ ಎಡಿಸನ್ ಮತ್ತೆ ಬೇರೊಂದು ವಿದ್ಯುತ್ ಬಲ್ಬನ್ನು ತಯಾರಿಸಿದರು. ನಂತರ ಪುನಃ ಅದೇ ಸಹಾಯಕನಿಗೆ ಆ ಬಲ್ಬನ್ನು ಮೇಲೆ ತೆಗೆದುಕೊಂಡು ಬರುವಂತೆ ಹೇಳಿದರು.

'ಬಲ್ಬನ್ನು ಒಡೆದು ಹಾಕಿದವರ ಹತ್ತಿರವೇ ಮತ್ತೆ ಆ ಕೆಲಸವನ್ನು ಕೊಡುತ್ತೀರಲ್ಲಾ?' ಎಂದು ಕೆಲವರು ಕೇಳಿದರು. ಆದಕ್ಕೆ ಎಡಿಸನ್, 'ಒಡೆದ ವಸ್ತುವನ್ನು ಮತ್ತೆ ಸೃಷ್ಟಿಸಲು ನನ್ನಿಂದ ಸಾಧ್ಯ. ಆದರೆ ಸಹಾಯಕನ ಮನಸ್ಸನ್ನು ನೋಯಿಸಿದರೆ ಅದನ್ನು ನನ್ನಿಂದ ಸರಿಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಮತ್ತೆ ಅದೇ ಕೆಲಸವನ್ನು ಅವರಿಗೆ ಕೊಟ್ಟಾಗ, ತನ್ನ ಜವಾಬ್ದಾರಿಯನ್ನು ತಿಳಿದು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸುವರು. ಆದ್ದರಿಂದ ನಾನು ಹೀಗೆ ಮಾಡಿದೆ' ಎಂದರು..

ಎಡಿಸನ್‌ಗೆ ಗೆಲುವನ್ನು ತಂದುಕೊಟ್ಟ ತಾಳ್ಮೆಯ ಗುಣ ಆಗ ತಾನೇ ಬೇರೆಯವರಿಗೆ ಪೂರ್ಣವಾಗಿ ತಿಳಿಯಿತು..



**ಕುರಳ್**

ನಿರೈಯುಡಮೈ ನೀಂಗಾಮೈ ವೇಣ್ಡಿನ್ ಪೊರೆಯುಡಮೈ

ಪೋಟ್ರಿ ಒಳುಗಪ್ಪಡುಮ್

ಸಹನ ಶೀಲತೆ, ಕುರಳ್ 154.

**ಅರ್ಥ**

ಸಂಪನ್ನತೆಯು ತನ್ನಿಂದ ಅಗಲದಂತಿರಬೇಕಾದರೆ, ತಾಳ್ಮೆಯನ್ನು ಕಾಪಾಡಿಕೊಳ್ಳಬೇಕು (ಸಂಪನ್ನತೆ ಎಂಬ ಪದ ಇಲ್ಲಿ ಗುಣ ಮತ್ತು ಸಿರಿ ಎರಡಕ್ಕೂ ಅನ್ವಯಿಸುತ್ತದೆ).

## ಸತ್ಯವನ್ನು ಅರಿಯೋಣ

ಒಬ್ಬರು ಎತ್ತಿನ ಗಾಡಿಯಲ್ಲಿ ತೆಂಗಿನ ಕಾಯಿಗಳನ್ನು ತುಂಬಿಕೊಂಡು ವೇಗವಾಗಿ ಓಡಿಸಿಕೊಂಡು ಬರುತ್ತಿದ್ದರು. ಅಲ್ಲೊಂದು ಅಡ್ಡ ದಾರಿಯಿತ್ತು. ಅಲ್ಲೊಬ್ಬ ಬಾಲಕ ನಿಂತಿದ್ದನು.

'ಈ ದಾರಿಯಲ್ಲಿ ಹೋದರೆ ಸಂತೆಗೆ ಹೋಗಬಹುದೇ?' ಎಂದು ಕೇಳಿದರು ಗಾಡಿಯವರು. 'ಓ! ಸಿಗುತ್ತದೆ' ಎಂದನು ಬಾಲಕ.



4th_Kannada_Reader_Term2.indd 104 12-07-2019 16:05:14

'ಹೋಗಿ ಸೇರಲು ಎಷ್ಟು ಸಮಯವಾಗುತ್ತದೆ?'

'ನಿಧಾನವಾಗಿ ಹೋದರೆ ಹತ್ತು ನಿಮಿಷದಲ್ಲಿ ಅಲ್ಲಿಗೆ ಹೋಗಿ ಸೇರಬಹುದು'

'ವೇಗವಾಗಿ ಹೋದರೆ...?'

'ಅರ್ಧ ಗಂಟೆಯಾಗುತ್ತದೆ'

ಆ ಬಾಲಕ ಹೇಳಿದ ಉತ್ತರವನ್ನು ಕೇಳಿ ಎತ್ತಿನ ಗಾಡಿಯವರಿಗೆ ಕೋಪ ಬಂದಿತು.

'ಏನು ತಮಾಷೆ ಮಾಡುತ್ತೀಯಾ? ವೇಗವಾಗಿ ಹೋದರೆ ಹೇಗೆ ಅಧಿಕ ಸಮಯವಾಗುತ್ತದೆ?' ಎಂದು ಪ್ರಶ್ನಿಸಿದರು.

'ಹೋಗಿ ನೋಡಿ... ನಿಮಗೇ ಗೊತ್ತಾಗುತ್ತದೆ' ಎಂದು ಬಾಲಕ ಹೇಳಿದ. ಗಾಡಿಯವರು ಗಾಡಿಯನ್ನು ವೇಗವಾಗಿ ಓಡಿಸಿಕೊಂಡು ಹೋದರು.



ಸ್ವಲ್ಪ ದೂರ ಹೋದಾಗ ರಸ್ತೆಯಲ್ಲಿ ಅಲ್ಲಲ್ಲಿ ಕಲ್ಲುಗಳು ಬಿದ್ದಿದ್ದವು. ಇದರಿಂದ ಗಾಡಿ ಆಯ ತಪ್ಪಿ ನೆಲಕ್ಕೆ ಉರುಳಿತು. ತೆಂಗಿನ ಕಾಯಿಗಳು ಚೆಲ್ಲಾಪಿಲ್ಲಿಯಾಗಿ ಚೆದುರಿದವು. ಗಾಡಿಯನ್ನು ಮೇಲೆತ್ತಿ ನಿಲ್ಲಿಸಿ ಕೆಳಗೆ ಬಿದ್ದ ತೆಂಗಿನ ಕಾಯಿಗಳನ್ನು ಒಂದೊಂದಾಗಿ ಎತ್ತಿ ಮತ್ತೆ ಗಾಡಿಗೆ ತುಂಬಲು ಅರ್ಧ ಗಂಟೆಗಿಂತಲೂ ಹೆಚ್ಚು ಸಮಯವಾಯಿತು. ಆಗ ಗಾಡಿಯವರಿಗೆ ಬಾಲಕ ಹೇಳಿದ ಮಾತು ಅರ್ಥವಾಯಿತು.

**ಕುರಳ್**

ಎಪ್ಪೊರುಳ್ ಯಾರ್ ಯಾರ್ ವಾಯ್‌ಕ್ಕೇಟ್ಟಿನುಮ್ ಅಪ್ಪೊರುಳ್
ಮೆಯ್‌ಪ್ಪೊರುಳ್ ಕಾಣ್ಬದರಿವು

ಅರಿವು, ಕುರಳ್ 423.

**ಅರ್ಥ**

ಯಾವ ವಿಷಯವನ್ನೇ ಆಗಲಿ, ಯಾರಿಂದ ಕೇಳಿ ತಿಳಿದುಕೊಂಡರೂ ಆ ವಿಷಯದ ಸತ್ಯವನ್ನು ಕಂಡುಕೊಳ್ಳುವುದೇ ಶುದ್ಧವಾದ ಅರಿವು.

## ಟೀಕೆ ಮತ್ತು ಅಪರಾಧ

ಕಾರ್ತಿಕ್‌ನ ಬಳಿ ಒಂದು ದುರ್ಗುಣವಿತ್ತು. ಅದೇನೆಂದರೆ ಯಾವಾಗಲೂ ಯಾರ ಬಗ್ಗೆಯಾದರೂ ಟೀಕಿಸುವುದೇ ಅವನ ಗುಣವಾಗಿತ್ತು. ಆದ್ದರಿಂದ ಅವನನ್ನು ನೋಡಿದರೆ ಎಲ್ಲರೂ ಮಾತನಾಡದೇ ದೂರ ಹೋಗಿ ಬಿಡುತ್ತಿದ್ದರು.

ದರ್ಶನ್ ಮಾತ್ರ ಅವನ ಬಳಿ ಮಾತನಾಡುತ್ತಿದ್ದನು. ಬೇರೆ ಯಾರೂ ಮಾತನಾಡುತ್ತಿರಲಿಲ್ಲ. ಒಂದು ದಿನ ದರ್ಶನ್ ತನ್ನ ನಾಲ್ಕು ಜನ ಇತರ ಸ್ನೇಹಿತರೊಡನೆ ನಿಂತು ಮಾತನಾಡುವುದನ್ನು ಕಾರ್ತಿಕ್ ದೂರದಿಂದ ನೋಡಿ, ಅವರ ಬಳಿಗೆ ಬಂದನು.

ಕಾರ್ತಿಕ್‌ನನ್ನು ಅಲ್ಲಿ ನೋಡಿದ ಕೂಡಲೇ ಆ ನಾಲ್ಕೂ ಜನ ಹುಡುಗರೂ ಅಲ್ಲಿಂದ ಹೋಗಿ ಬಿಟ್ಟರು. ದರ್ಶನ್ ಮಾತ್ರ ಅಲ್ಲೇ ನಿಂತಿದ್ದ. ಇದನ್ನು ನೋಡಿದ ದರ್ಶನ್‌ನ ಮುಖ ಬಾಡಿತು.

'ಏನು ಕಾರ್ತಿಕ್? ಏಕೆ ಒಂದು ರೀತಿ ಇದ್ದೀಯಾ?' ಎಂದು ದರ್ಶನ್ ಕೇಳಿದನು.

'ಹೌದು ದರ್ಶನ್. ನನ್ನನ್ನು ನೋಡಿದ ಕೂಡಲೇ ಎಲ್ಲರೂ ದೂರ ಹೋಗಿ ಬಿಡುತ್ತಾರಲ್ಲ' ಎಂದ ಕಾರ್ತಿಕ್ ಬೇಸರದಿಂದ.



4th_Kannada_Reader_Term2.indd 105 12-07-2019 16:05:14

'ಇದೆಲ್ಲವೂ ಯಾರಿಂದ? ನಿನ್ನಿಂದ ತಾನೇ...?' ಎಂದನು ದರ್ಶನ್.

'ನಾನೇನು ತಪ್ಪು ಮಾಡಿದೆ. ಬೇರೆಯವರಲ್ಲಿ ಇರುವ ತಪ್ಪುಗಳನ್ನು ತಾನೇ ನಾನು ಹೇಳುತ್ತೇನೆ' ಎಂದ ಕಾರ್ತಿಕ್.

'ತಪ್ಪು ಎನ್ನುವುದು ಯಾರಲ್ಲಿ ತಾನೇ ಇಲ್ಲ? ನಿನ್ನ ತಪ್ಪು ಏನೆಂದು ಮಾತ್ರ ನಿನಗೆ ಗೊತ್ತಿಲ್ಲ. ನೀನು ಬೇರೆಯವರನ್ನು ಟೀಕಿಸಿ ಮಾತನಾಡುವುದು ನಿನ್ನಲ್ಲಿರುವ ನೀಚ ಗುಣ. ನಿನ್ನ ನಾಲಿಗೆಯನ್ನು ಅಡಗಿಸಿಟ್ಟುಕೋ. ಆಗ ಎಲ್ಲರೂ ನಿನ್ನ ಜೊತೆ ಮಾತನಾಡುತ್ತಾರೆ' ಎಂದನು ದರ್ಶನ್ ನೇರವಾಗಿ.



ಕಾರ್ತಿಕ್ ತನ್ನನ್ನು ಪರಿವರ್ತಿಸಿಕೊಂಡನು. ನಿಧಾನವಾಗಿ ಎಲ್ಲರೂ ಅವನೊಂದಿಗೆ ಸ್ವಲ್ಪಸ್ವಲ್ಪವಾಗಿ ಮಾತನಾಡಲು ಆರಂಭಿಸಿದರು.

**ಕುರಳ್ :**

ಯಾಗಾವಾರಾಯಿನುಮ್ ನಾಗಾಕ್ಕ ಕಾವಾಕ್ಕಾಲ್

ಶೋಗಾಪ್ಪರ್ ಶೊಲ್ಲಿಳುಕ್ಕಪಟ್ಟು

ಸಂಯಮ, ಕುರಳ್ 127.

**ಅರ್ಥ**

ಯಾವುದನ್ನು ಅಡಗಿಸಲು ಸಾಧ್ಯವಾಗದಿದ್ದರೂ ನಾಲಗೆಯನ್ನು ಮಾತ್ರ ಅಡಗಿಸಿಡಲೇ ಬೇಕು. ಅದನ್ನು ಅಡಗಿಸಲಾಗದಿದ್ದರೆ ತನ್ನ ಮಾತಿನ ದೋಷದಲ್ಲಿ ಸಿಕ್ಕಿ ದುಃಖದಲ್ಲಿ ಮುಳುಗಬೇಕಾಗುತ್ತದೆ.

## ಸೌಂದರ್ಯ

ಮುರುಗನ ರೂಪವೇ 'ಕೋಪ ಕೋಪ ಕೋಪ' ಎಂಬಂತಿತ್ತು. ಮುರುಗನ ಬಗ್ಗೆ ಇತರರ ಬಳಿ ಯಾರಾದರೂ ವಿಚಾರಿಸಿದರೆ, 'ಯಾವಾಗಲೂ ಉರ್ ಎಂದುಕೊಂಡೇ ಇರುತ್ತಾನಲ್ಲ. ಅವನನ್ನು ಕೇಳುತ್ತಿದ್ದೀರಾ?' ಎನ್ನುತ್ತಿದ್ದರು. ಇದರಿಂದಾಗಿ ಅವನ ಜೊತೆ ಗೆಳೆತನ ಬೆಳೆಸಲು ಅವನ ಸಹಪಾಠಿಗಳು ಹೆದರುತ್ತಿದ್ದರು.

ಒಂದು ಸಲ ಮುರುಗನು ತನ್ನ ಸಹಪಾಠಿ ಸುಕುಮಾರನ ಜೊತೆ ಮಾತನಾಡುತ್ತಿದ್ದನು. 'ನೋಡು ಸುಕುಮಾರ, ನೀನು ಯಾವಾಗಲೂ ನೋಡಲು ತುಂಬಾ ಸುಂದರವಾಗಿ ಕಾಣುತ್ತೀಯಾ? ನನ್ನನ್ನು ನೋಡು ಮುಖವೆಲ್ಲ ಬಾಡಿ ಹೋಗಿದೆ' ಎಂದನು. ಅದಕ್ಕೆ ಸುಕುಮಾರನು ನಗುತ್ತಾ,

'ನೀನು ನಿನ್ನ ಮುಖವನ್ನು ಕನ್ನಡಿಯಲ್ಲಿ ಸರಿಯಾಗಿ ನೋಡಿಕೊಂಡಿದ್ದೀಯಾ?' ಎಂದು ಕೇಳಿದನು.

'ಪ್ರತಿದಿನವೂ ನೋಡುತ್ತೇನೆ'

'ಇನ್ನೂ ನಿನಗೆ ಗೊತ್ತಾಗಲಿಲ್ಲವೇ? '

'ಇಲ್ಲ. ಗೊತ್ತಾಗಲಿಲ್ಲ...'

'ಮುರುಗಾ! ಬೆಂಕಿಯಲ್ಲಿ ಬಾಡಿದ ಹೂಗಳು ತಮ್ಮೆಲ್ಲ ಸೌಂದರ್ಯವನ್ನೂ ಕಳೆದುಕೊಳ್ಳುವಂತೆ ನಿನ್ನಲ್ಲಿರುವ ಕೋಪ ಗುಣವು ನಿನ್ನ ಮುಖದ ಸೌಂದರ್ಯವನ್ನು ಕಳೆದುಹೋಗುವಂತೆ ಮಾಡಿದೆ' ಎಂದು ಹೇಳಿದನು.

ಸುಕುಮಾರನು ಹೇಳಿದ್ದನ್ನೆಲ್ಲ ಕೇಳಿದ ಮುರುಗನು ನಿಧಾನವಾಗಿ ತನ್ನ ಕೋಪವನ್ನು ಕಡಿಮೆ ಮಾಡಿಕೊಳ್ಳಲು ಆರಂಭಿಸಿದನು. ಕ್ರಮೇಣ ಅವನು ತನ್ನ ಕೋಪವನ್ನೆಲ್ಲ ಬಿಟ್ಟನು. ಆಮೇಲೆ ಅವನು ತನ್ನ ಮುಖವನ್ನು ಕನ್ನಡಿಯಲ್ಲಿ



4th_Kannada_Reader_Term2.indd 106 12-07-2019 16:05:14

ನೋಡಿಕೊಂಡನು! ಏನಾಶ್ಚರ್ಯ! ಆಹಾ... ಎಷ್ಟೊಂದು ಸುಂದರವಾಗಿದೆಯಲ್ಲಾ ಎಂದು ಅವನಿಗೇ ಅನ್ನಿಸಿತು.



**ಕುರಳ್ :** ತನ್ನೈ ತಾನ್ ಕಾಕ್ಕಿನ್ ಶಿನಂಗಾಕ್ಕ ಕಾವಾಕ್ಕಾಲ್
ತನ್ನೈಯೇ ಕೊಲ್ಲುಮ್ ಶಿನಮ್

ಕೋಪ ತಾಳದಿರುವುದು, ಕುರಳ್ 305.

**ಅರ್ಥ :**

ತನ್ನನ್ನು ತಾನು ಕಾದುಕೊಳ್ಳಬೇಕೆಂಬ ಅಪೇಕ್ಷೆ ಇದ್ದರೆ, ಒಬ್ಬನು ತನಗೆ ಕೋಪವು ಬರದಂತೆ ಕಾದುಕೊಳ್ಳಬೇಕು. ಹಾಗೆ ಅದನ್ನು ಕಾಯದೆ ಬಿಟ್ಟರೆ ಅದು ತನ್ನನ್ನೇ ಕೊಲ್ಲುವುದು.



## ಬನ್ನಿ, ಮಾತನಾಡೋಣ!

- ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳದಿದ್ದರೆ ಏರ್ಪಡುವ ಪರಿಣಾಮಗಳನ್ನು ಕುರಿತು ಚರ್ಚಿಸಿ.
- ಈ ಕಥೆಯಲ್ಲಿ ಬರುವ ಯಾವುದಾದರೊಂದು ದೃಶ್ಯವನ್ನು ತೆಗೆದುಕೊಂಡು ನಾಟಕ ರೂಪದಲ್ಲಿ ಅಭಿನಯಿಸಿ ತೋರಿಸಿ.

### ಚಿಂತಿಸೋಣ !



ಅನು ಮತ್ತು ಭಾನು ರಸ್ತೆಯನ್ನು ದಾಟಲು ನಿಂತುಕೊಂಡಿದ್ದರು. ಆಗ ಹಳದಿ ಬಣ್ಣದ ದೀಪ ಉರಿಯುತ್ತಿತ್ತು. ಅನು ರಸ್ತೆಯನ್ನು ದಾಟಲು ಪ್ರಾರಂಭಿಸಿದಳು. ಭಾನು, 'ಹಸಿರು ದೀಪ ಬಂದ ಮೇಲಷ್ಟೇ ರಸ್ತೆ ದಾಟಬೇಕು, ಅವಸರ ಪಡಬೇಡ. ನಿಧಾನಿಸು...' ಎಂದಳು. ಇದರಲ್ಲಿ ಯಾರ ಅಭಿಪ್ರಾಯ ಸರಿ. ವಿವರಿಸಿ.

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಸಂಪನ್ನತೆಯನ್ನು ಹೇಗೆ ಕಾಪಾಡಿಕೊಳ್ಳಬೇಕು ?

02 ಶುದ್ಧವಾದ ಅರಿವು ಯಾವುದು ?

03 ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳದಿದ್ದರೆ ಉಂಟಾಗುವ ಪರಿಣಾಮವೇನು ?

04 ಕೋಪವು ಒಬ್ಬರನ್ನು ಹೇಗೆ ವಿನಾಶದೆಡೆಗೆ ಕೊಂಡೊಯ್ಯುತ್ತದೆ?

## ಹೊಂದಿಸಿ ಬರೆಯಿರಿ?

| | | |
|---|---|---|
| ತಾಳ್ಮೆ | – | ಅಶುದ್ಧ |
| ಸತ್ಯ | – | ನಿರಾಪೇಕ್ಷೆ |
| ದುಃಖ | – | ದುಡುಕು |
| ಅಪೇಕ್ಷೆ | – | ಅಸತ್ಯ |
| ಶುದ್ಧ | – | ಸಂತೋಷ |



4th_Kannada_Reader_Term2.indd 108 12-07-2019 16:05:15

## ಸರಿಯಾದ ಪದಗಳನ್ನು ಆಯ್ಕೆ ಮಾಡಿ ವಾಕ್ಯವನ್ನು ಪೂರ್ಣಗೊಳಿಸಿ.

01 ಸಂಶೋಧನಾಲಯ _______________ ಇತ್ತು (ಮೇಲ್ಮಹಡಿಯಲ್ಲಿ/ಮೇಲ್‌ಮಅಡಿಯಲ್ಲಿ)

02 ದಾರಿಯಲ್ಲಿ _______________ ಯೊಂದು ಇತ್ತು (ಅಡ್ಡದಾರಿ/ಹಡ್ಡದಾರಿ)

03 ನಿನಗೆ ಕಾರಣ _______________ ? (ಗೊತ್ತಾಗಲಿಲ್ಲವೇ/ಗೋತ್ತಾಗಲೀಲ್ಲವೆ)

04 ಎಡಿಸನ್ ವಿದ್ಯುತ್ _______________ ತಯಾರಿಸಿದರು (ದೀಪ/ದ್ವೀಪ)

05 ತಾಳ್ಮೆಯನ್ನು _______________ ಕೊಳ್ಳಬೇಕು (ಕಾಪಾಡಿ/ಕಾಪಡಿ)

## ಪದವನ್ನು ಕೇಳಿ ಬರೆಯಿರಿ

01 ಸಂಪನ್ನತೆ

02 ಶುದ್ಧವಾದ

03 ದೋಷದಲ್ಲಿ

04 ಅಪೇಕ್ಷೆ

## ಭಾಷೆಯೊಂದಿಗೆ ಆಟ

ಸರಿಯಾದ ಪ್ರಶ್ನಾರ್ಥಕ ಪದವನ್ನು ಆರಿಸಿ ಪ್ರಶ್ನೆಯನ್ನು ಪೂರ್ಣಗೊಳಿಸಿ.

01 ನಿನ್ನ ಊರಿನ ಹೆಸರು _______________?

02 ನಿನಗೆ ಇಷ್ಟವಾದ ಬಣ್ಣ _______________?

03 ನೀನು ಶಾಲೆಗೆ _______________ ಬರುತ್ತೀಯಾ?

04 ನಿನ್ನ ಗೆಳೆಯನು _______________?

05 ಬೇಸಿಗೆ ರಜೆಯಲ್ಲಿ _______________ ಹೋಗಿದ್ದೆ?

06 ನಿಜ ಎಂಬುದರ ಅರ್ಥ _______________?

07 ಹ್ರಸ್ವ ಸ್ವರಗಳು _______________?

08 ಸರಸ್ವತಿ _______________ ಮನೆಗೆ ಹೋದಳು?

ಯಾರು
ಎಷ್ಟು
ಯಾವುವು
ಎಲ್ಲಿಗೆ
ಏಕೆ
ಯಾವುದು
ಏನು
ಹೇಗೆ



4th_Kannada_Reader_Term2.indd 109 12-07-2019 16:05:15

## ಕಲೆ ಮತ್ತು ಕರಕೌಶಲ್ಯ

### ಸೂರ್ಯಕಾಂತಿ ಹೂವಿಗೆ ಬಣ್ಣ ಹಾಕೋಣವೇ?

ದಳಗಳಿಗೆ ಅರಿಷಿಣ ಪುಡಿಯನ್ನೂ, ಬೀಜಗಳಿಗೆ ಸೊಪ್ಪಿನ ಪುಡಿಯನ್ನೂ ಉಪಯೋಗಿಸಿ ಹೂವನ್ನು ಸುಂದರವಾಗಿ ಕಾಣುವಂತೆ ಮಾಡೋಣ.



## ತಿಳಿದುಕೊಳ್ಳೋಣ!



1. ತಿರುಕ್ಕುರಳ್ ಮೊಟ್ಟ ಮೊದಲು ಮುದ್ರಿಸಲ್ಪಟ್ಟ ವರ್ಷ 1812.
2. ತಿರುಕ್ಕುರಳ್ 'ಅ'ಕಾರದಿಂದ ಆರಂಭವಾಗಿ 'ನ'ಕಾರದಿಂದ ಮುಗಿಯುತ್ತದೆ.





## ಕಾರ್ಯ ಯೋಜನೆ

ನೀವು ಚೆನ್ನಾಗಿ ಕಲಿತಿರುವ ತಿರುಕ್ಕುರಳ್‌ಗಳಿಗೆ ನಿಮ್ಮ ಸ್ವಂತ ರೀತಿಯಲ್ಲಿ ಕಥೆ ಬರೆದುಕೊಂಡು ಬನ್ನಿ.



4th_Kannada_Reader_Term2.indd 110 12-07-2019 16:05:15

# 17 ಹಸುವಿಗೆ ದೊರಕಿದ ನ್ಯಾಯ

(ನಾಟಕ)

**ಮುನ್ನುಡಿ**

ಚೋಳ ಅರಸರಲ್ಲೊಬ್ಬ ಮನುನೀದಿ ಚೋಳ! ನೀದಿ ಎಂದರೆ ನ್ಯಾಯ ಎಂದು ಅರ್ಥ. ಸರಿಯಾದ ಆಡಳಿತವನ್ನು ನಡೆಸುವುದೇ ಅವನ ಬದುಕಿನ ಗುರಿಯಾಗಿತ್ತು. ಅವನ ಆಡಳಿತ ಕಾಲದಲ್ಲಿ ಒಂದು ಹಸುವಿಗೆ ದುಃಖಭರಿತವಾದ ವಿಪತ್ತು ನಡೆಯಿತು. ಈ ವಿಪತ್ತಿಗೆ ಕಾರಣವಾದದ್ದು ಅರಸನ ಮಗನೇ ಆಗಿದ್ದನು. ಇದನ್ನು ತಿಳಿದ ಅರಸನು ಏನು ಮಾಡುತ್ತಾನೆ? ತನ್ನ ಮಗನೆಂದು ಅವನನ್ನು ಕಾಪಾಡುತ್ತಾನೋ? ಅಥವಾ ತನ್ನ ಕರುವನ್ನು ಕಳೆದುಕೊಂಡ ಮೂಕಪ್ರಾಣಿಯಾದ ಹಸುವಿಗೆ ಸರಿಯಾದ ನ್ಯಾಯವನ್ನು ನೀಡುತ್ತಾನೋ? ಇಲ್ಲಿ ನೋಡೋಣ ಬನ್ನಿ...

**ದೃಶ್ಯ – 1**

**ಸ್ಥಳ** : **ಅರಸನ ಆಸ್ಥಾನ**

**ಸಮಯ** : **ಮಧ್ಯಾಹ್ನ**

**ಪಾತ್ರಧಾರಿಗಳು** : **ಅರಸ ಮನುನೀತಿ ಚೋಳನ್, ಮಂತ್ರಿ, ಪಂಡಿತ.**

(ಸಭೆಯಲ್ಲಿ ಅರಸರು, ಮಂತ್ರಿಗಳು ಹಾಗೂ ಪಂಡಿತರು ಉಪಸ್ಥಿತರಾಗಿದ್ದಾರೆ. ಆಗ ಅಲ್ಲಿಗೆ ಬಂದ ಬಡಗಿಯೊಬ್ಬ ಅರಸನಿಗೆ ನಮಸ್ಕರಿಸುತ್ತಾನೆ)



**ಅರಸ** : ಬನ್ನಿ, ಬನ್ನಿ ಬಡಗಿಗಳೇ! ನಿನ್ನೆ ನಿಮಗೊಂದು ಕೆಲಸವನ್ನು ಹೇಳಿದ್ದೆ. ಆ ಕೆಲಸ ಮುಗಿಯಿತೇ ?

**ಬಡಗಿ** : ಓ.... ಮುಗಿಸಿದ್ದೇನೆ ಮಹಾಪ್ರಭುಗಳೇ! ನೀವು ಬಂದು ನೇರವಾಗಿ ವೀಕ್ಷಿಸಬಹುದು.

**ಅರಸ** : ಹಾಗೇನು! ಧನ್ಯವಾದಗಳು... ಮಂತ್ರಿಗಳೇ, ನಮ್ಮ ಚೋಳ ರಾಜ್ಯವು ಹೆಚ್ಚು ಪ್ರಸಿದ್ಧಿಯಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಮಾತ್ರವಲ್ಲದೆ ನಮ್ಮ ಚೋಳ ರಾಜಕುಲಕ್ಕೆ ಮತ್ತೊಂದು ಹೆಮ್ಮೆಯ ಸಂಗತಿ ನ್ಯಾಯ ವ್ಯವಸ್ಥೆಯಲ್ಲವೇ? ಅದಕ್ಕಾಗಿಯೇ ನನ್ನ ಆಡಳಿತದಲ್ಲಿ ಯಾವ ಪ್ರಜೆಗೂ ತೊಂದರೆಯಾಗಬಾರದು ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ನಾನು ಸ್ಥಾಪಿಸಿರುವುದೇ ನ್ಯಾಯದ ಘಂಟೆ. ಬಡಗಿಯು ಇದನ್ನು ವಿಶೇಷವಾಗಿ ಮಾಡಿದ್ದಾರೆ.

**ಮಂತ್ರಿ** : ನ್ಯಾಯದ ಘಂಟೆಯಾ? ಅದು ಏತಕ್ಕಾಗಿ ಅರಸರೇ? ಅದನ್ನು ಉಪಯೋಗಿಸಿ ನೀವು ಹೇಗೆ ನ್ಯಾಯವನ್ನು ಹೇಳುವಿರಿ.

**ಅರಸ** : ಹೇಳುತ್ತೇನೆ ಮಂತ್ರಿಗಳೇ...! ನಮ್ಮ ಅರಮನೆಯ ದ್ವಾರದ ಮುಂದೆ, ದೇವಾಲಯದ ಘಂಟೆಯಂತೆ ದೊಡ್ಡ ಘಂಟೆಯನ್ನು ಕಟ್ಟಲು ವ್ಯವಸ್ಥೆ ಮಾಡಿದ್ದೇನೆ. ಪ್ರಜೆಗಳು ತಮಗೆ ಏರ್ಪಡುವ ಕುಂದುಕೊರತೆಗಳನ್ನು



4th_Kannada_Reader_Term2.indd 111 12-07-2019 16:05:16

ತಕ್ಷಣವೇ ಪರಿಹರಿಸಿಕೊಳ್ಳಲು ಈ ನ್ಯಾಯದ ಘಂಟೆಯನ್ನು ಬಳಸಿಕೊಳ್ಳಬಹುದು.

**ಮಂತ್ರಿ** : ಅರಸರೇ! ಅದರಲ್ಲೇನು ವಿಶೇಷ? ನೀವು ನಾಗರಿಕರಿಗೆ ಯಾವ ಕುಂದು ಕೊರತೆಗಳನ್ನೂ ನೀಡಿಲ್ಲವಲ್ಲ!

**ಅರಸ** : ನೀವು ಹೇಳುವುದು ಸರಿಯಾಗಿರಬಹುದು. ಆದರೆ ತಮ್ಮ ಕೊರತೆಗಳನ್ನು ಹೇಳಿಕೊಳ್ಳಲು ಹಲವರು ಹಿಂಜರಿಯಬಹುದಲ್ಲವೇ? ಪ್ರಜೆಗಳಿಗೆ ತಕ್ಷಣವೇ ನ್ಯಾಯ ದೊರಕಿಸುವುದೇ ಈ ನ್ಯಾಯದ ಘಂಟೆಯ ಉದ್ದೇಶವಾಗಿದೆ. ಅದು ಮಾತ್ರವಲ್ಲ... ನಾಗರಿಕರು ಘಂಟೆಯನ್ನು ಬಾರಿಸಿದಾಗ ಅವರಿರುವ ಸ್ಥಳಕ್ಕೆ ನಾನೇ ಹೋಗಿ ನಿಲ್ಲುತ್ತೇನೆ. ಅವರ ಮನಸ್ಸಿನಲ್ಲಿರುವ ಕಷ್ಟವನ್ನು ತಕ್ಷಣವೇ ನಿವಾರಿಸುತ್ತೇನೆ.

**ಮಂತ್ರಿ** : ಆಹಾ! ನೀವಲ್ಲವೇ ನಿಜವಾದ ಅರಸರು! ಈ ಆಕಾಶ, ಭೂಮಿಗಳು ಇರುವವರೆಗೂ ನಿಮ್ಮ ಹೆಸರು ಪ್ರಸಿದ್ಧವಾಗಿ, ಚಿರವಾಗಿರಲಿ.

(ಕೆಲವು ತಿಂಗಳುಗಳಾದರೂ ನ್ಯಾಯದ ಘಂಟೆಯ ಶಬ್ದ ಕೇಳಲಿಲ್ಲ. ಹೀಗಿರುವಾಗ ಒಂದು ದಿನ ಮಂತ್ರಿಯೂ, ಅರಸನೂ ಒಂದೆಡೆ ಮಾತನಾಡುತ್ತಾ ಕುಳಿತಿದ್ದರು. ಆಗ ನ್ಯಾಯದ ಘಂಟೆಯ ಶಬ್ದ ಕೇಳಿಸತೊಡಗಿತು).

## ದೃಶ್ಯ – 2

**ಸ್ಥಳ** : **ಅರಸನ ಆಸ್ಥಾನ**

**ಸಮಯ** : **ಸಾಯಂಕಾಲ**

**ಪಾತ್ರಧಾರಿಗಳು** : **ಅರಸ ಮನುನೀದಿ ಚೋಳನ್, ಮಂತ್ರಿ, ಅರಮನೆಯ ಕಾವಲುಗಾರ.**

**ಕಾವಲುಗಾರ** : **ಅರಸರೇ... ಅರಸರೇ...ಎಂದು ಕೂಗುತ್ತಾ ಭಯದಿಂದ ಓಡಿ ಬರುವನು**



**ಅರಸ** : ಏನಾಯಿತು? ಏಕೆ ಹೀಗೆ ಓಡಿ ಬರುತ್ತಿರುವೆ? ಭಯಪಡದೆ ಹೇಳು?

**ಕಾವಲುಗಾರ** : ಅರಸರೇ, ಇದುವರೆಗೆ ನಾನು ನೋಡಿದ್ದಿಲ್ಲ, ಕೇಳಿದ್ದಿಲ್ಲ. ಇದನ್ನು ಯಾವ ರೀತಿ ಹೇಳುವುದು.

**ಅರಸ** : ಏನಾದರೂ ಪರವಾಗಿಲ್ಲ. ಹಿಂಜರಿಯದೆ ಯಾವುದೇ ವಿಷಯವಾಗಿದ್ದರೂ ಬೇಗ ಹೇಳು.

**ಕಾವಲುಗಾರ** : ಅರಸರೇ! ಏನೆಂದರೆ..... ಅದೇನೆಂದರೆ... ನಮ್ಮ ಅರಮನೆಯ ಮುಂದೆ ಕಟ್ಟಿರುವ ನ್ಯಾಯದ ಘಂಟೆ....

**ಅರಸ** : ಏನು? ನ್ಯಾಯದ ಘಂಟೆಯನ್ನು ಯಾರಾದರೂ ಬಾರಿಸುತ್ತಿದ್ದಾರೆಯೇ? ಇಷ್ಟು ತಿಂಗಳು ಯಾರಿಗೂ ಯಾವ ಕುಂದುಕೊರತೆಯೂ ಇಲ್ಲವೆಂದು ನಂಬಿದ್ದೆ. ಪರವಾಗಿಲ್ಲ, ನಾನೇ ಬರುತ್ತೇನೆ.

(ಅರಸನು ಅರಮನೆಯ ದ್ವಾರದ ಮುಂದಕ್ಕೆ ಬರುವನು. ಜೊತೆಯಲ್ಲಿ ಮಂತ್ರಿಗಳೂ ಇದ್ದರು.)

**ಅರಸ** : ಅಯ್ಯೋ... ಏನಾಯಿತು? ಒಂದು ಹಸು ನ್ಯಾಯದ ಘಂಟೆಯನ್ನು ಬಾರಿಸುತ್ತಿದೆಯಲ್ಲ! ನನ್ನ ಆಡಳಿತದಲ್ಲಿ ಮೂಕ ಪ್ರಾಣಿ ಹಸುವಿಗೆ ಏನಾದರೂ ವಿಪತ್ತು ಸಂಭವಿಸಿರಬಹುದೇ? ಇದನ್ನು ನಾನು ಹೇಗೆ ಸಹಿಸಿಕೊಳ್ಳಲಿ? ಆ ಹಸು ಕಣ್ಣೀರು ಹಾಕುತ್ತಿದೆ ನೋಡಿ. ಅದಕ್ಕೆ ತಡೆಯಲಾರದ ಸಂಕಟವಿದ್ದಂತೆ ಕಾಣುತ್ತಿದೆ. ದುಃಖಿಸುತ್ತಿರುವ ಹಸುವಿನ ಕಣ್ಣೀರನ್ನು ಒರೆಸಿ ತಕ್ಷಣವೇ ಏನಾಗಿದೆ ಎಂದು ತಿಳಿದುಕೊಂಡು ಬನ್ನಿ..

**ಕಾವಲುಗಾರ** : ಅಪ್ಪಣೆ ಮಹಾಪ್ರಭುಗಳೇ! ಈಗಲೇ ಹೋಗಿ ಏನೆಂದು ತಿಳಿದು ಬರುವೆವು.

(ಅರಸರ ಮಗನು ಬೀದಿಯಲ್ಲಿ ರಥವನ್ನು ಓಡಿಸಿಕೊಂಡು ಹೋಗುವಾಗ ಬೀದಿಯಲ್ಲಿ ಜಿಗಿದು ಆಟವಾಡುತ್ತಿದ್ದ ಕರುವೊಂದು ಆಕಸ್ಮಿಕವಾಗಿ ರಥದ ಚಕ್ರಕ್ಕೆ ಸಿಲುಕಿಕೊಂಡಿತು. ತನ್ನ ಕರುವನ್ನು ಹುಡುಕಲು ಅಲೆದಾಡುತ್ತಿದ್ದ ಹಸುವು, ಸತ್ತು ಹೋದ ತನ್ನ ಕರುವನ್ನು ಕಂಡು ಕಣ್ಣೀರು ಹಾಕುತ್ತಿತ್ತು. ಅದು ಅರಮನೆಯ ಮುಂದೆ ಬಂದು ಅಲ್ಲಿದ್ದ ನ್ಯಾಯದ ಘಂಟೆಯ ಹಗ್ಗವನ್ನು ಹಿಡಿದು ಎಳೆಯುತ್ತಾ ತನ್ನ ದುಃಖವನ್ನೂ, ಆಕ್ರೋಶವನ್ನೂ, ಅಸಹಾಯಕತೆಯನ್ನೂ ವ್ಯಕ್ತಪಡಿಸುತ್ತಿತ್ತು. ಆ ಹಸುವಿನ ರೋಧನೆಯು ಈ ಮೂಲಕ ಎಲ್ಲರಿಗೂ ಕೇಳತೊಡಗಿತು).

## ದೃಶ್ಯ – 3

**ಸ್ಥಳ** : **ಅರಸನ ಆಸ್ಥಾನ**

**ಸಮಯ** : ಮರುದಿನ ಬೆಳಿಗ್ಗೆ

**ಪಾತ್ರಧಾರಿಗಳು** : ಅರಸ ಮನುನೀದಿ ಚೋಳನ್, ಮಂತ್ರಿ

**ಮಂತ್ರಿ** : ಅರಸರೇ! ನಿಮ್ಮ ತೀರ್ಮಾನವನ್ನು ದಯಮಾಡಿ ಬದಲಾಯಿಸಿಕೊಳ್ಳಿ.

**ಅರಸ** : ಏನು ಹೇಳುತ್ತಿದ್ದೀರಿ ಮಂತ್ರಿಗಳೇ? ಈ ನೆಲವನ್ನು ಕಾಪಾಡುವ ಅರಸನೆಂದೂ, ಉತ್ತಮ ತೀರ್ಪು ನೀಡುವ ನ್ಯಾಯಾಧಿಪತಿಯೆಂದೂ ಜನರು ನನ್ನನ್ನು ನಂಬಿದ್ದಾರೆ. ಅದಕ್ಕೆ ಧಕ್ಕೆ ಉಂಟಾದಾಗ ನಾನು ಅದನ್ನು ಸಹಿಸಿಕೊಳ್ಳುವುದಿಲ್ಲ. ನ್ಯಾಯಕ್ಕೆ ನ್ಯಾಯ, ಅನ್ಯಾಯಕ್ಕೆ ಅನ್ಯಾಯ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ.

**ಮಂತ್ರಿ** : ಅರಸರೇ! ಸ್ವಲ್ಪ ನಿಧಾನಿಸಿ. ನಿಮಗೆ ಇರುವವನು ಒಬ್ಬನೇ ಮಗ. ಅವನು ಕರುವನ್ನು ಬೇಕೆಂದೇನೂ ಕೊಲ್ಲಲಿಲ್ಲವಲ್ಲ. ಅವನಿಗೆ ತಿಳಿಯದೆ ಆದ ತಪ್ಪಲ್ಲವೇ? ಅದಕ್ಕಾಗಿ ನೀವು ಈ ತೀರ್ಮಾನವನ್ನು ತೆಗೆದುಕೊಳ್ಳಬೇಕೇ?



4th_Kannada_Reader_Term2.indd 113 12-07-2019 16:05:17

**ಅರಸ** : ಹೌದು! ಅದು ಸರಿ! ಕಣ್ಣೀರು ಹಾಕುತ್ತಾ ನಿಂತಿರುವ ಹಸು ನಿಮಗೆ ಕಾಣಿಸುತ್ತಿಲ್ಲವೇ? ಹಸುವಿನ ವೇದನೆಯ ಕಣ್ಣೀರು, 'ನೀನೊಬ್ಬ ಅರಸನೇ? ನಿನಗೆ ಮಗನು ಹೇಗೋ ಹಾಗೇ ನನಗೆ ನನ್ನ ಕರು ಅಲ್ಲವೇ. ಆ ಚಿಕ್ಕ ಕರು ಏನು ಪಾಪ ಮಾಡಿತು? ಅದರ ಜೀವವನ್ನು ಕೊಲ್ಲಲು ನಿಮಗೆ ಹೇಗೆ ಮನಸ್ಸು ಬಂದಿತು? ಕರುವನ್ನು ಕಳೆದುಕೊಂಡು ದುಃಖಿಸುತ್ತಿರುವ ನನಗೆ ಸಮಾಧಾನ ಹೇಳುವವರು ಯಾರು? ಎಂದು ಆ ಹಸು ನನ್ನನ್ನು ಕೇಳುವ ರೀತಿಯಂತಿದೆ. ಹಾಗಾಗಿ ನಾನು ತೆಗೆದುಕೊಂಡ ತೀರ್ಮಾನವನ್ನು ಬದಲಾಯಿಸಿಕೊಳ್ಳುವುದಿಲ್ಲ.

**ಮಂತ್ರಿ** : ಅರಸರೇ! ಮತ್ತೊಮ್ಮೆ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಿಮ್ಮ ಮಗನನ್ನು ಕೊಲ್ಲುವ ಮನಸ್ಸನ್ನು ಬಿಟ್ಟುಬಿಡಿ.

**ಅರಸ** : ಸಾಕು ಮಂತ್ರಿಗಳೇ! ನಿಲ್ಲಿಸಿ. ಇನ್ನು ಯಾರೇ ಹೇಳಿದರೂ ನಾನು ಕೇಳುವುದಿಲ್ಲ. ರಥದ ಚಕ್ರಕ್ಕೆ ಸಿಲುಕಿ ನರಳಿ ಸತ್ತ ಕರುವಿನ ಹಾಗೆ ನನ್ನ ಮಗನನ್ನೂ ಅದೇ ರಥದ ಚಕ್ರದಿಂದ ಕೊಲ್ಲುತ್ತೇನೆ. ಆ ಹಸುವಿನ ವೇದನೆಯನ್ನು ನಾನೂ ಅನುಭವಿಸಬೇಕು. ಇದೇ ಹಸುವಿಗೆ ನಾನು ನೀಡುವ ತೀರ್ಪು! ಚೋಳರ ಪರಂಪರೆಯನ್ನು ಯಾರೂ ಆಡಿಕೊಳ್ಳಬಾರದು. ಎಷ್ಟೋ ವರ್ಷಗಳು ಕಳೆದರೂ 'ನೀತಿ ತಪ್ಪದ ಮನು ನೀದಿ ಚೋಳ' ಎಂದು ನನ್ನನ್ನು ನೆನಪಿಸಿಕೊಳ್ಳಬೇಕು. ರಥವನ್ನು ತಂದು ಅರಮನೆಯ ಬಾಗಿಲಲ್ಲಿ ನಿಲ್ಲಿಸು. ಕರೆದುಕೊಂಡು ಬಾ ನನ್ನ ಮಗನನ್ನು... ಈಗಲೇ ಅವನನ್ನು ರಥದ ಚಕ್ರದಲ್ಲಿಟ್ಟು ನ್ಯಾಯವು ನೆಲೆ ನಿಲ್ಲುವಂತೆ ಮಾಡುತ್ತೇನೆ.

(ತಪ್ಪು ಮಾಡಿದವನು ತನ್ನ ಮಗನಾದರೂ ತಪ್ಪು ತಪ್ಪೇ ಎಂದು ಹಿಂಜರಿಯದೆ ಸರಿಯಾದ ದಂಡನೆಯನ್ನು ನೀಡಿ ಹಸುವಿನ ಕಣ್ಣೀರನ್ನು ಒರೆಸಿ ಆ ಅರಸನು ಇತಿಹಾಸದಲ್ಲಿ ಅಳಿಸಲಾಗದಂತಹ ನ್ಯಾಯವನ್ನು ನೀಡಿ ಸ್ಥಾನ ಪಡೆದನು).

(ತೆರೆ ಬೀಳುವುದು)

ಪದಗಳ ಅರ್ಥ

ನೀದಿ–ನೀತಿ, ನ್ಯಾಯ, ಧರ್ಮ; ನ್ಯಾಯದ ಘಂಟೆ–ನ್ಯಾಯ ಕೇಳಲು ಬರುವವರು ಹೊಡೆಯಲು ಅರಮನೆಯ ಮುಂದೆ ಇಟ್ಟಿರುವ ಗಂಟೆ; ಬಡಗಿ–ಮರಗೆಲಸ ಮಾಡುವವನು

**ಬನ್ನಿ, ಮಾತನಾಡೋಣ!**



- ನೀವು, 'ಅರಸ ಮನುನೀತಿ ಚೋಳ'ನಾಗಿದ್ದರೆ ಹಸುವಿನ ಸಂಕಟವನ್ನು ಹೇಗೆ ಪರಿಹರಿಸುತ್ತಿದ್ದಿರಿ?



**ಚಿಂತಿಸೋಣ !**

ಮನೆಗೆ ಹೋಗುವ ಮಾರ್ಗದಲ್ಲಿ ಚಿಕ್ಕ ಮಕ್ಕಳು ಒಂದು ನಾಯಿಮರಿಯನ್ನು ಹಿಡಿದು ಹಿಂಸಿಸುತ್ತಿರುತ್ತಾರೆ. ಚಿಕ್ಕಮಕ್ಕಳು ಮಾಡಿದ್ದು ಸರಿಯೇ? ನೀವು ಅದನ್ನು ಹೇಗೆ ತಡೆಯುತ್ತೀರಿ.



4th_Kannada_Reader_Term2.indd 114 12-07-2019 16:05:17

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

01 ವಿಪತ್ತು ಎಂಬ ಪದದ ಅರ್ಥ ________

ಅ. ಆಪತ್ತು ಆ. ಸಂಪತ್ತು

ಇ. ಷರತ್ತು ಈ. ವಿಶೇಷ

02 'ಅರಸರಲ್ಲೊಬ್ಬ' ಈ ಪದವನ್ನು ಬಿಡಿಸಿ ಬರೆದಾಗ ________

ಅ. ಅರಸ+ಅಲ್ಲೊಬ್ಬ ಆ. ಅರಸರಲ್ಲಿ+ಒಬ್ಬ

ಇ. ಅರಸ+ರಲ್ಲೊಬ್ಬ ಈ. ಅರಸರಲ್ಲೇ+ಒಬ್ಬ

03 'ಕರುವನ್ನು' ಈ ಪದವನ್ನು ಬಿಡಿಸಿ ಬರೆದಾಗ ________

ಅ. ಕರು+ವನ್ನು ಆ. ಕರುವು+ಅನ್ನು

ಇ. ಕರು+ಅವನ್ನು ಈ. ಕರು+ಅನ್ನು

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಮನುನೀದಿ ಚೋಳನು ನ್ಯಾಯದ ಘಂಟೆಯನ್ನು ಏಕೆ ಸ್ಥಾಪಿಸಿದನು ?

02 ಹಸು ನ್ಯಾಯದ ಘಂಟೆಯನ್ನು ಏಕೆ ಬಾರಿಸಿತು ?

03 ಹಸುವಿನ ದುಃಖವನ್ನು ಅರಸನು ಹೇಗೆ ಪರಿಹರಿಸಿದನು ?

### ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ

ಆಸ್ಥಾನ, ವೇದನೆ, ಪರಂಪರೆ, ಕೊಲ್ಲು, ಧಕ್ಕೆ.

### ಪದಗಳನ್ನು ಕೇಳಿ ಬರೆಯಿರಿ

1. ಸಭಾಂಗಣ
2. ನ್ಯಾಯದ ಘಂಟೆ
3. ಕುಂದುಕೊರತೆ
4. ಮನುನೀದಿಚೋಳ
5. ಅರಮನೆ



4th_Kannada_Reader_Term2.indd 115 12-07-2019 16:05:17

## ಪದಗಳನ್ನು ರಚಿಸಿ

| | | | | | | |
|---|---|---|---|---|---|---|
| ಹ | ಸು | ಕೊ | ಲ್ಲು | ಮ | ಮಂ | ತ್ರಿ |
| ಅ | ರ | ಸ | ನ | ಗು | ಚೋ | ಳ |
| ನ್ಯಾ | ಯ | ತೀ | ರ್ಪು | ರ | ಚ | ಕ್ರ |
| ಸಂ | ಶೋ | ಧ | ನೆ | ಥ | ಠ | ಮ |
| ಸಂ | ನ್ಯಾ | ಯ | ದ | ಘಂ | ಟೆ | ನೆ |

ಹಸು

## ಕಲೆ ಮತ್ತು ಕರಕೌಶಲ್ಯ

ಬಣ್ಣವನ್ನು ಹಚ್ಚಿ ಆನಂದಿಸೋಣ



## ತಿಳಿದುಕೊಳ್ಳೋಣ!

ಮಾವಿನ ಮರ, ಮಾವ, ಮಾಂಗಲ್ಯ, ಮಾತನಾಡು, ಮೂಲಂಗಿ.ಇದೇ ರೀತಿ 'ಸಾ' ಇಂದ ಪ್ರಾರಂಭವಾಗುವ ಪದಗಳನ್ನು ರಚಿಸಿ.

## ಕಾರ್ಯ ಯೋಜನೆ.



ನೀವು ವಾಸಿಸುವ ಪರಿಸರದಲ್ಲಿ ಕಾಣುವ ಪಕ್ಷಿಗಳು, ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಗುಚ್ಛವನ್ನು ಸಿದ್ಧಪಡಿಸಿ.



4th_Kannada_Reader_Term2.indd 116 12-07-2019 16:05:18

# 18. ಕೆಲಸಕ್ಕೆ ತಕ್ಕ ಕೂಲಿ

ಅಳಗಾಪುರಿಯ ಅರಸ ಉತ್ತಮವಾದ ಆಡಳಿತವನ್ನು ನಡೆಸುತ್ತಿದ್ದರು. ಆತನ ರಾಜ್ಯದಲ್ಲಿ ಪ್ರಜೆಗಳು ಸಂತೋಷದಿಂದ ಜೀವನ ಸಾಗಿಸುತ್ತಿದ್ದರು. ಆತನ ಕೀರ್ತಿ ಇತರ ರಾಜ್ಯಗಳಿಗೂ ತಿಳಿಯಿತು. ಹೊರ ರಾಜ್ಯಗಳಲ್ಲೊಂದಾದ ರತ್ನಪುರಿಯ ಅರಸ ಈ ವಿಷಯವನ್ನು ತಿಳಿದು ತನ್ನ ರಾಜ್ಯದ ಮಂತ್ರಿಗಳೊಡನೆ ಈ ವಿಷಯದ ಬಗ್ಗೆ ಆಲೋಚನೆ ನಡೆಸಿದ.

ನಾನೂ ಉತ್ತಮ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದೇನೆ. ಆದರೆ ನನ್ನನ್ನು ಯಾರೂ ಹೊಗಳುವುದಿಲ್ಲ ಎಂದು ಆತ ತನ್ನ ಮಂತ್ರಿಗಳ ಬಳಿ ಸಮಾಲೋಚನೆ ಮಾಡಿದ. ಮಂತ್ರಿಗಳೂ ಉತ್ತರ ತಿಳಿಯದೆ ಮಂಕಾದರು. ಮಂತ್ರಿಗಳಲ್ಲಿ ಒಬ್ಬ ಎದ್ದು ನಿಂತು, ಅರಸರೇ! ತಮ್ಮ ಆಡಳಿತದಲ್ಲಿ ನಮ್ಮ ರಾಜ್ಯದ ಪ್ರಜೆಗಳಿಗೆ ಯಾವುದೇ ಕುಂದು ಕೊರತೆಗಳೂ ಇಲ್ಲ. ಆದರೆ... ಎಂದು ಹೇಳಿ ತನ್ನ ಮಾತನ್ನು ಅರ್ಧಕ್ಕೇ ನಿಲ್ಲಿಸಿದ.





4th_Kannada_Reader_Term2.indd 117 12-07-2019 16:05:18

'ಏನು ಆದರೆ... ಹೇಳಿ ಮಂತ್ರಿಗಳೇ! ನಾನು ಪ್ರಜೆಗಳನ್ನು ಸಂತೋಷದಿಂದ ನೋಡಿಕೊಳ್ಳುವುದಿಲ್ಲವೇ? ನಾನು ಬೇರೇನು ಮಾಡಬೇಕೆಂದು ಎದುರು ನೋಡುತ್ತೀರಿ?' ಎಂದು ಕೇಳಿದ ಅರಸ.

'ನಾನು ಹೇಳಿದುದನ್ನು ತಪ್ಪಾಗಿ ತಿಳಿದುಕೊಳ್ಳಬೇಡಿ ಅರಸರೇ! ಅಳಗಾಪುರಿ ರಾಜ್ಯಕ್ಕೆ ತಾವು ಒಮ್ಮೆ ಭೇಟಿ ನೀಡಿ ಒಂದು ದಿನ ಪೂರ್ತಿ ಆ ರಾಜ್ಯದ ಪ್ರಜೆಗಳೊಂದಿಗೂ, ಆ ರಾಜ್ಯದ ಅರಸರೊಂದಿಗೂ ತಂಗಬೇಕು. ಅವರು ತಮ್ಮ ರಾಜ್ಯದ ಪ್ರಜೆಗಳೊಂದಿಗೆ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂದು ಪ್ರತ್ಯಕ್ಷವಾಗಿ ತಿಳಿದುಕೊಂಡರೆ ನಾವೂ ಅವುಗಳಲ್ಲಿ ಕೆಲವನ್ನಾದರೂ ಪಾಲಿಸಬಹುದು ಅರಸರೇ' ಎಂದು ಮಂತ್ರಿ ಹೇಳಿದ.

ಇತರ ಮಂತ್ರಿಗಳೂ, 'ಹೌದು ಅರಸರೇ! ಇವರು ಹೇಳುವುದು ಒಳ್ಳೆಯ ಯೋಚನೆಯಾಗಿದೆ. ಅಲ್ಲದೆ ಅಳಗಾಪುರಿ ರಾಜರೂ ನಿಮ್ಮೊಂದಿಗೆ ಉತ್ತಮ ಸ್ನೇಹ ಬಯಸುವರು. ಆದ್ದರಿಂದ ಸ್ನೇಹ ನಿಮಿತ್ತವಾಗಿ ಒಂದು ದಿನ ನೀವು ಅಲ್ಲಿಗೆ ಹೋಗಬೇಕು ಎಂಬುದು ನಮ್ಮೆಲ್ಲರ ಅಭಿಪ್ರಾಯವಾಗಿದೆ' ಎಂದು ಹೇಳಿದರು.

'ಹಾಗೇನು? ಸರಿಸರಿ! ನಾನು ನಾಳೆಯೇ ಹೊರಡುತ್ತೇನೆ. ನನಗೂ ಸಹ ಅಳಗಾಪುರಿ ಅರಸನ ಆಡಳಿತ ಕ್ರಮವನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೆ ಒಂದು ಸಂದರ್ಭ' ಎಂದು ಹೇಳಿ ರತ್ನಪುರಿ ಅರಸನು ಪ್ರಯಾಣಕ್ಕೆ ಅವಶ್ಯಕವಾದ ಏರ್ಪಾಡನ್ನು ಮಾಡುವಂತೆ ಆಜ್ಞೆಯಿಟ್ಟನು.

ಸ್ನೇಹ ನಿಮಿತ್ತವಾಗಿ ತಮ್ಮ ರಾಜ್ಯಕ್ಕೆ ಬಂದಿರುವ ರತ್ನಪುರಿ ಅರಸನನ್ನು ವಿನಯಪೂರ್ವಕವಾಗಿ ಬರಮಾಡಿಕೊಂಡ ಅಳಗಾಪುರಿಯ ಅರಸ. ಇಬ್ಬರೂ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು. ನಂತರ, 'ನೀವು ಚೆನ್ನಾಗಿ ವಿಶ್ರಾಂತಿ ತೆಗೆದುಕೊಳ್ಳಿ. ನಾನು ಮಂತ್ರಿ ಸಭೆಗೆ ಹೋಗಿ ಬರುತ್ತೇನೆ' ಎಂದು ಹೇಳಿ ಮೇಲೆದ್ದ ಅಳಗಾಪುರಿ ಅರಸ.

'ನಿಲ್ಲಿ ಅರಸರೇ! ನಾನೂ ನಿಮ್ಮೊಂದಿಗೆ ಮಂತ್ರಿ ಸಭೆಗೆ ಬರಲು ಇಚ್ಛಿಸುತ್ತೇನೆ' ಎಂದ ರತ್ನಪುರಿ ಅರಸ.

'ಹೌದೇ! ತುಂಬಾ ಸಂತೋಷ. ಬನ್ನಿ, ಇಬ್ಬರೂ ಜೊತೆಯಲ್ಲೇ ಹೋಗೋಣ' ಎಂದು ಹೇಳಿ ಅಳಗಾಪುರಿ ಅರಸ ಜೊತೆಗೆ ಕರೆದುಕೊಂಡು ಮಂತ್ರಿ ಸಭೆಗೆ ಬಂದ.

ಮಂತ್ರಿ ಸಭೆಯಲ್ಲಿ ರತ್ನಪುರಿ ಅರಸರನ್ನು ಎಲ್ಲರಿಗೂ ಪರಿಚಯಿಸಿ ತನಗೆ ಸಮನಾದ ಆಸನದಲ್ಲಿ ಕೂರಿಸಿ ಗೌರವಿಸಿದ. ಆ ಸಮಯದಲ್ಲಿ ಒಬ್ಬ ವ್ಯಕ್ತಿ ತನ್ನ ಕೈಗಳನ್ನು ಕಟ್ಟಿಕೊಂಡು ಅರಸರ ಮುಂದೆ ಬಂದು ನಿಂತ. ಅವನನ್ನು ನೋಡಿದ ಅಳಗಾಪುರಿಯ ಅರಸ, 'ಯಾರು ನೀನು? ನಿನಗೆ ಏನು ಬೇಕು? ಇಲ್ಲಿಗೆ ಏತಕ್ಕಾಗಿ ಬಂದಿರುವೆ?' ಎಂದು ಕೇಳಿದ. .

ಅದಕ್ಕೆ ಆ ವ್ಯಕ್ತಿ, 'ಅರಸರೇ! ನಾನೊಬ್ಬ ಸೌದೆ ಕಡಿಯುವವ. ನನ್ನ ಮನಸ್ಸಿನಲ್ಲಿ ಒಂದು ಚಿಕ್ಕ ಸಂದೇಹ. ಅದನ್ನು ನಿಮ್ಮೊಂದಿಗೆ ಹೇಳಿದರೆ ನೀವು ಅದನ್ನು ಹೇಗೆ ತಿಳಿದುಕೊಳ್ಳುತ್ತೀರೋ ಎಂದು ನನಗೆ ಭಯವಾಗಿದೆ. ಆದರೂ ನಿಮ್ಮನ್ನು ಕೇಳೋಣವೆಂದು ಇಲ್ಲಿಗೆ ಬಂದಿದ್ದೇನೆ' ಎಂದ.

'ಆಹಾ! ಇದನ್ನು ತಾನೇ ನಾನು ಎದುರು ನೋಡುತ್ತಿದ್ದೆ. ಈ ಅಳಗಾಪುರಿ ಅರಸರು ಈ ಸೌದೆ ಕಡಿಯುವವನ ಸಮಸ್ಯೆಯನ್ನು ಹೇಗೆ ಬಗೆ ಹರಿಸುತ್ತಾರೋ ನೋಡೋಣ' ಎಂದು ಆಸಕ್ತಿಯಿಂದ ಗಮನಿಸತೊಡಗಿದ ರತ್ನಪುರಿಯ ಅರಸ.

'ಏನಪ್ಪಾ! ಸೌದೆ ಕಡಿಯುವವನೇ! ನಿನ್ನ ಮನಸ್ಸಿನಲ್ಲಿರುವ ಸಂದೇಹವೇನು? ನನ್ನಿಂದ ಸಾಧ್ಯವಾದಷ್ಟೂ ನಿವಾರಿಸಲು ಪ್ರಯತ್ನಿಸುತ್ತೇನೆ' ಎಂದ ಅಳಗಾಪುರಿ ಅರಸ.

'ಅರಸೇ, ನಾನು ದಿನವಿಡೀ ಕಷ್ಟಪಟ್ಟು ಕೆಲಸ ಮಾಡುತ್ತೇನೆ. ತಾವು ನನ್ನಂತಹವರಿಗೆ ದಿನಕ್ಕೆ ಎರಡು ರೂಪಾಯಿ ಕೂಲಿಯನ್ನು ಮಾತ್ರ ಕೊಡುತ್ತೀರಿ. ಆದರೆ ನಿಮ್ಮಲ್ಲಿರುವ ಮಂತ್ರಿಗಳಿಗೆ ತಿಂಗಳಿಗೆ ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಇದು ಯಾವ ನ್ಯಾಯ? ಇದುವೇ ನಿಮ್ಮ ಉತ್ತಮ ಆಡಳಿತವೇ? ಎಲ್ಲರನ್ನೂ ಸಮಾನವಾಗಿ ಕಾಣದೆ ಇರುವುದು ಬಹುದೊಡ್ಡ ಸಮಸ್ಯೆ ಎಂಬುದು ನಿಮಗೆ ತಿಳಿಯುವುದಿಲ್ಲವೇ?' ಎಂದು ಪ್ರಶ್ನಿಸಿದ ಸೌದೆಯವನು.



4th_Kannada_Reader_Term2.indd 118 12-07-2019 16:05:18

ಅಳಗಾಪುರಿ ಅರಸನು, 'ನನ್ನ ಆಡಳಿತದಲ್ಲಿ ಯಾರಿಗೂ ಯಾವ ತೊಂದರೆಯೂ ಇರಬಾರದು ಎಂಬುದರಲ್ಲಿ ನಾನು ತುಂಬಾ ಎಚ್ಚರಿಕೆಯಿಂದ ಇರುತ್ತೇನೆ. ಆದರೆ ನಿಮ್ಮ ಮನಸ್ಸಿನಲ್ಲಿನ ಆತಂಕ, ನಿಮ್ಮನ್ನು ನಾನು ಮಂತ್ರಿಗಳಿಗೆ ಸಮನಾಗಿ ಕಾಣಲಿಲ್ಲವೆಂಬುದು ತಾನೇ? ಸ್ವಲ್ಪ ತಾಳಿ. ನಿಮ್ಮ ಸಂದೇಹವನ್ನು ಈಗಲೇ ನಿವಾರಿಸುತ್ತೇನೆ' ಎಂದು ಹೇಳಿ ಅರಸನು ಮಂತ್ರಿಗಳಲ್ಲೊಬ್ಬನನ್ನು ಹತ್ತಿರ ಕರೆದು, ಅವರಿಬ್ಬರನ್ನೂ 'ಅರಮನೆಯ ಹೊರಗೆ ಯಾವುದಾದರೂ ಗಾಡಿ ಹೋಗುತ್ತಿದೆಯಾ ಎಂದು ಬೇಗ ನೋಡಿ ಬನ್ನಿ' ಎಂದು ಹೇಳಿದನು.

ರತ್ನಪುರಿ ಅರಸ ಮಂತ್ರಿ ಸಭೆಯಲ್ಲಿ ನಡೆಯುತ್ತಿರುವುದೆಲ್ಲವನ್ನೂ ಮೌನವಾಗಿ ನೋಡುತ್ತಿದ್ದ. ಹೊರಗೆ ಹೋದ ಸೌದೆಯವನು ತಕ್ಷಣ ಹಿಂತಿರುಗಿ ಬಂದು, 'ಹೌದು ಅರಸರೇ, ಅರಮನೆಯ ಹೊರಗೆ ಒಂದು ಗಾಡಿ ಹೋಗುತ್ತಿದೆ' ಎಂದನು.

'ಆ ಗಾಡಿಯಲ್ಲಿ ಏನು ಇದೆ?' ಎಂದು ಕೇಳಿದ ಅರಸ.

'ಇರಿ ಅರಸರೇ, ನೋಡಿ ಬರುತ್ತೇನೆ' ಎಂದು ಹೊರಗೆ ಓಡಿದ ಅವನು, ಮತ್ತೆ ಬಂದು

'ಅರಸರೇ, ಆ ಗಾಡಿಯಲ್ಲಿ ಭತ್ತದ ಮೂಟೆಗಳು ಇವೆ' ಎಂದು ಹೇಳಿದ.

'ಹೌದೇ? ಆ ಗಾಡಿ ಯಾವ ಊರಿನಿಂದ ಬಂದಿದೆ?' ಎಂದು ಅರಸ ಕೇಳಿದ.

'ಅಯ್ಯೋ! ಅದನ್ನು ಕೇಳದೆ ಬಂದು ಬಿಟ್ಟೆನಲ್ಲ. ಸ್ವಲ್ಪ ತಾಳಿರಿ. ಇದೋ ಬರುತ್ತೇನೆ' ಎಂದು ಹೇಳಿ ಅವನು ಓಡಲು ಹೋದ. ಆ ಸಮಯಕ್ಕೆ ಸರಿಯಾಗಿ ಮಂತ್ರಿ ಒಳಗೆ ಪ್ರವೇಶಿಸಿದ. ಅರಸನು ಸೌದೆಯವನನ್ನು ಕುರಿತು, 'ಸೌದೆ ಕಡಿಯುವವನೇ, ಸ್ವಲ್ಪ ನಿಲ್ಲು. ಇದೋ ಮಂತ್ರಿಗಳು ಬಂದು ಬಿಟ್ಟರು. ನಿನ್ನಲ್ಲಿ ಕೇಳಿದ ಅದೇ ಪ್ರಶ್ನೆಯನ್ನು ಇವರಲ್ಲಿಯೂ ಕೇಳುತ್ತೇನೆ. ಇವರು ಏನು ಹೇಳುತ್ತಾರೋ ನೋಡೋಣ' ಎಂದು ಹೇಳಿ, 'ಮಂತ್ರಿಗಳೇ! ನೀವು ಹೊರಗೆ ಏನು ನೋಡಿದಿರಿ ಹೇಳಿ?' ಎಂದು ಕೇಳಿದ..





4th_Kannada_Reader_Term2.indd 119 12-07-2019 16:05:19

ಮಂತ್ರಿಯು ಅರಸನನ್ನು ನೋಡಿ, 'ಅರಸರೇ! ಅರಮನೆಯ ಹೊರಗೆ ಮುವ್ವತ್ತು ಭತ್ತದ ಮೂಟೆಗಳನ್ನು ತುಂಬಿರುವ, ಬಲವಾದ ಎರಡು ಎತ್ತುಗಳನ್ನು ಕಟ್ಟಿರುವ ಗಾಡಿಯೊಂದು ವಳವನೂರಿನಿಂದ ಪಕ್ಕದ ಊರಿಗೆ ಹೋಗುತ್ತಿದೆ. ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾದ ಉತ್ತಮವಾದ ಭತ್ತದ ಬಗೆಗಳು ಆ ಗಾಡಿಯಲ್ಲಿವೆ. ಭತ್ತವನ್ನು ಸ್ವಲ್ಪ ತೆಗೆದು ನೋಡಿದೆ. ತುಂಬಾ ಒಳ್ಳೆಯ ಭತ್ತದ ಬಗೆಗಳು ಅವು. ಒಳ್ಳೆಯ ಬೆಲೆಗೆ ಮಾರಾಟವಾಗಬಹುದು. ಮಳೆ ಬಂದರೆ ನೆನೆಯದ ಹಾಗೆ ಜಾಗರೂಕತೆಯಿಂದ ಮೂಟೆಗಳನ್ನು ರಕ್ಷಣೆ ಮಾಡಲಾಗಿದೆ. ಊರಿನಿಂದ ಹೊರ ಹೋಗಲು ಸುಂಕದ ಕಟ್ಟೆಯಲ್ಲಿ ಸುಂಕವನ್ನು ಕೂಡ ಪಾವತಿ ಮಾಡಿ ಬಂದಿದ್ದಾನೆ. ಇದರಿಂದಾಗಿ ನಮ್ಮ ರಾಜ್ಯಕ್ಕೆ ಸಲ್ಲಬೇಕಾಗಿರುವ ಆದಾಯವನ್ನು ಕೂಡ ಆತ ಸರಿಯಾಗಿ ಪಾವತಿಸಿದಂತಾಗಿದೆ. ಅವನ ಹತ್ತು ವರ್ಷದ ಮಗನೂ ಇದ್ದಾನೆ. ಪಕ್ಕದೂರಿನಲ್ಲಿ ಇಂದು ನಡೆಯಲಿರುವ ಸಂತೆಯಲ್ಲಿ ಅವರು ಆ ಮೂಟೆಗಳನ್ನು ಮಾರಾಟ ಮಾಡಿ, ಸಂಜೆ ಮಳೆ ಬರುವುದರೊಳಗೆ ಹಿಂದಿರುಗಿ ವಳವನೂರಿಗೆ ಹೋಗಿ ಸೇರಬೇಕಾಗಿರುವುದರಿಂದ ಬೇಗಬೇಗನೆ ಹೋಗುತ್ತಿದ್ದಾರೆ' ಎಂದು ಹೇಳಿದ ಮಂತ್ರಿ.

ಮಂತ್ರಿ ಹೇಳುವುದನ್ನೆಲ್ಲಾ ಕೇಳುತ್ತಾ, ಬಾಯಿ ಮುಚ್ಚಿಕೊಂಡು ನಿಂತಿದ್ದ ಸೌದೆ ಕಡಿಯುವವನು. ಅಳಗಾಪುರಿ ಅರಸ ಸೌದೆ ಕಡಿಯುವವನ್ನು ನೋಡಿ, 'ಅಯ್ಯಾ! ಸೌದೆ ಕಡಿಯುವವನೆ, ನಿನ್ನ ಮನಸ್ಸಿನಲ್ಲಿರುವ ಸಂದೇಹ ನಿವಾರಣೆಯಾಗಿರಬೇಕಲ್ಲವೇ? ನಾನು ಮಂತ್ರಿಗಳಿಗೆ ಕೊಡುವ ಕೂಲಿ ಸರಿಯಾಗಿದೆ ತಾನೆ? ಈಗ ಹೇಳು...' ಎಂದು ಕೇಳಿದ.

'ಅರಸರೆ ನನ್ನ ಮನಸ್ಸಿನಲ್ಲಿದ್ದ ಸಂದೇಹ ನಿವಾರಣೆಯಾಯಿತು. ನಿಮ್ಮ ಬಗ್ಗೆ ತಪ್ಪಾಗಿ ತಿಳಿದುಕೊಂಡಿದ್ದೆ. ಮಂತ್ರಿಗಳ ಬುದ್ಧಿ ಚಾತುರ್ಯತೆಯನ್ನೂ, ಅವರ ಸಾಮರ್ಥ್ಯವನ್ನೂ ಕಂಡು ನಾನು ಬೆರಗಾಗಿದ್ದೇನೆ. ಅವರೊಂದಿಗೆ ಹೋಲಿಸಿ ನೋಡಿದಾಗ ನನ್ನ ಅಜ್ಞಾನವನ್ನು ನಾನು ತಿಳೀದುಕೊಂಡೆನು. ನಾನು ನಾನೇ, ಮಂತ್ರಿಗಳು ಮಂತ್ರಿಗಳೇ! ಅವರವರ ಸಾಮರ್ಥ್ಯಕ್ಕೆ ತಕ್ಕ ಕೂಲಿ ಕೊಡುವುದೇ ನ್ಯಾಯ ಎಂಬುದನ್ನು ತಿಳಿದುಕೊಂಡೆ' ಎಂದನು ಸೌದೆ ಕಡಿಯುವವನು.

ಇದುವರೆಗೂ ಮಂತ್ರಿ ಸಭೆಯಲ್ಲಿ ನಡೆದ ಘಟನೆಗಳನ್ನು ನೋಡಿಕೊಂಡಿದ್ದ ರತ್ನಪುರಿ ಅರಸ ತನ್ನ ಮನಸ್ಸಿನಲ್ಲಿಯೇ, 'ಅಯ್ಯೋ! ನಾನು ಕೂಡ ಈ ಅರಸನಿಗೆ ದೊರೆತ ಹೆಗ್ಗಳಿಕೆಯನ್ನು ಕಂಡು ಅಸೂಯೆ ಪಟ್ಟೆ. ಸತ್ಯವನ್ನು ತಿಳಿದುಕೊಳ್ಳಲು ಒಂದು ಒಳ್ಳೆಯ ಸಂದರ್ಭ ಸಿಕ್ಕಿತು' ಎಂದು ಅಳಗಾಪುರಿ ಅರಸನ ಬುದ್ಧಿ ಚಾತುರ್ಯವನ್ನು, ಪ್ರಜೆಗಳಿಗೆ ನ್ಯಾಯ ತೀರ್ಮಾನ ಮಾಡುವ ಬಗೆಯನ್ನೂ ಕಂಡು ಬೆರಗಾದನು. ತಾನು ತನ್ನ ಪ್ರಜೆಗಳನ್ನು ಹೇಗೆ ಮುನ್ನಡೆಸಬೇಕೆಂದು ಈ ಮೂಲಕ ತಿಳಿದುಕೊಂಡು ತನ್ನ ರಾಜ್ಯಕ್ಕೆ ಹಿಂದಿರುಗಿದನು.



4th_Kannada_Reader_Term2.indd 120 12-07-2019 16:05:19

## ಬನ್ನಿ, ಮಾತನಾಡೋಣ!



• ಈ ಕಥೆಯನ್ನು ನಿಮ್ಮ ಸ್ವಂತ ಮಾತಿನಲ್ಲಿ ಹೇಳಿ.




ಮಂತ್ರಿಗಳು ಗಾಡಿ ಓಡಿಸುವವನಲ್ಲಿ ಎಲ್ಲಾ ವಿಷಯಗಳನ್ನೂ ತಿಳಿದುಕೊಳ್ಳಲು ಯಾವ ಯಾವ ಪ್ರಶ್ನೆಗಳನ್ನು ಕೇಳಿರಬಹುದು? ಬರೆಯಿರಿ.

_______________________________________

_______________________________________

_______________________________________

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಅಳಗಾಪುರಿಯ ಅರಸ ತನ್ನ ಪ್ರಜೆಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದನು ?

02 ಸೌದೆ ಕಡಿಯುವವನು ಅರಸನೊಂದಿಗೆ ತನ್ನ ಮನದ ಸಂದೇಹವನ್ನು ಏನೆಂದು ಹೇಳಿದನು ?

03 ಅರಸ ಮತ್ತು ಮಂತ್ರಿ ಸೌದೆ ಕಡಿಯುವವನಿಗೆ ಯಾವ ಪ್ರಶ್ನೆಯನ್ನು ಕೇಳಿದರು ?

## ಚಿತ್ರವನ್ನು ನೋಡಿ, ಪ್ರಶ್ನೆಗಳನ್ನು ರಚಿಸಿ



ಉದಾಹರಣೆ : ಚಿತ್ರದಲ್ಲಿ ಎಷ್ಟು ಪ್ರಾಣಿಗಳಿವೆ ?

01 __________________ 02 __________________

03 __________________ 04 __________________

05 __________________ 06 __________________



4th_Kannada_Reader_Term2.indd 121 12-07-2019 16:05:20

# ಭಾಷೆಯೊಂದಿಗೆ ಆಟವಾಡೋಣ

## ಪದಗಳನ್ನು ರಚಿಸೋಣ

ಕೆಳಗೆ ಒಂದೊಂದು ಆಕಾರಗಳಿಗೂ ಒಂದೊಂದು ಅಕ್ಷರಗಳನ್ನು ನೀಡಲಾಗಿದೆ. ಆಕಾರಗಳಿಗೆ ಅದಕ್ಕೆ ಸರಿಯಾದ ಅಕ್ಷರಗಳನ್ನು ಬರೆದು ಪದ ರಚಿಸಿ. ಒಂದೊಂದು ಆಕಾರವೂ ಒಂದೊಂದು ಅಕ್ಷರವನ್ನು ಗುರುತಿಸುತ್ತದೆ.



ರೆ ದು ಕು ಪ ಟ್ಟ ದ

01  ಪಟ್ಟ

02  ________

03  ________

04  ________

05  ________

06  ________

07  ________

## ಪದ ಬರೆದು ವಾಕ್ಯ ರಚಿಸಿ

ಉದಾ:

ಮ ಲೆ ಳೆ

ಮಲೆ : ಎತ್ತರವಾದ ಭೂ ಪ್ರದೇಶಕ್ಕೆ ಮಲೆ ಎನ್ನುವರು.

ಮಳೆ : ಬೆಳೆ ಬೆಳೆಯಲು ಮಳೆ ಬೇಕು.

ಕ ಲೆ ಳೆ

: ________ ________________________________

: ________ ________________________________

ಮ ನೆ ಣೆ

: ________ ________________________________

: ________ ________________________________

ಪ ಟ ಟ್ಟ

: ________ ________________________________

: ________ ________________________________

## ಬಿಟ್ಟ ಅಕ್ಷರಗಳನ್ನು ತುಂಬಿ ಗಾದೆಗಳಿಗೆ ಉತ್ತರವನ್ನು ಕಂಡು ಹಿಡಿಯಿರಿ

01 ಕೂಗಿ ಕರೆವೆ ನನ್ನ ಬಳಗವ ನಾನ್ಯಾರು ?

02 ಸಾಗರದಲ್ಲಿ ಸಿಗುವೆ ನಾನ್ಯಾರು ?

03 ಅಡುಗೆಗೆ ಸಹಕಾರಿ ನಾನ್ಯಾರು ?

04 ತೋಟದಲ್ಲಿ ಬೆಳೆಯುವೆ, ಸಿಹಿಯಾಗಿರುವೆ. ನಾನ್ಯಾರು ?

ಕಾ ________

ಶಂ ________

ಈ ________

ಕ ________



## ಕಾರ್ಯ ಯೋಜನೆ

ವಿವಿಧ ಕಸುಬುದಾರರ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ಅನ್ನು ತಯಾರಿಸಿರಿ.



4th_Kannada_Reader_Term2.indd 123 12-07-2019 16:05:20

# 19 ಅಂತರ್ಜಾಲ ವಿಸ್ಮಯ



ಕಲಿಕೆಯ ಕಣ್ಮಣಿಗಳೇ ಕಲಿಯಲು ಬನ್ನಿ
ಅಂತರ್ಜಾಲ ವಿಸ್ಮಯವ ತಿಳಿಯಲು ಬನ್ನಿ
ವಿಜ್ಞಾನದ ಯಾಂತ್ರಿಕ ಶಕ್ತಿ ಸೃಷ್ಟಿಗೆ ಮುನ್ನ
ವಿಶ್ವವನ್ನೇ ಸುತ್ತಿ ಬರುವ ಅದ್ಭುತವೇ ಚೆನ್ನ!

ನಮ್ಮ ನಿಮ್ಮೆಲ್ಲರ ಉಳಿವಿಗಾಗಿಯೇ ಆವಿಷ್ಕರಣ
ಜಗಕ್ಕೆ ಸಾರುವುದು ಹೊಸ ಹೊಸ ಸಂಸ್ಕರಣ
ಅನೇಕಾನೇಕ ವಿಚಾರಗಳು ಅಡಗಿರುವ ಜಾಲವೇ
ಬೇಕಾದಾಗ ಬಳಸುವ ವಿದ್ಯುನ್ಮಾನ ಸಾಧನವೇ

ನೀನು ತುಂಬಿಕೊಂಡಿರುವ ವಿಚಾರಗಳ ಜ್ಞಾನ
ಅದು ಆಗಬೇಕು ಪ್ರತಿಯೊಬ್ಬರ ಬೆಳಕಿನ ವಿಜ್ಞಾನ
ಹೊಸ ಪ್ರಪಂಚದ ಸೃಷ್ಟಿಯ ಮಾನವ ನೀ ಕಲಕು
ಆಹಾ! ಎಂತಹ ವಿಸ್ಮಯ ಈ ಅಂತರ್ಜಾಲ!

ತಿಳಿಯಲಿ ಎಲ್ಲರಿಗೂ ಇದರಲ್ಲಿರುವ ವಿಚಾರಗಳು
ಕಲಿಯಿರಿ ಕಣ್ಮಣಿಗಳೇ ಜ್ಞಾನದ ಸಮಾಚಾರಗಳು
ನೀವೆಲ್ಲರೂ ಬೆಳೆಸಿರಿ ವಿಜ್ಞಾನದ ಬೆಳವಣಿಗೆಯ ವಿಸ್ಮಯ!

**ವೆಂಕಟೇಶ.ಪಿ** ಬಿ.ತಟ್ನಹಳ್ಳಿ



Tamil 4th-std_Term3.indd 124 12-07-2019 16:23:13

## ಬನ್ನಿ, ಮಾತಾಡೋಣ!



* ಈ ಕವಿತೆಯನ್ನು ರಾಗಬದ್ಧವಾಗಿ ಹಾಡಿರಿ.
* ಅಂತರ್ಜಾಲಕ್ಕೆ ಸಂಬಂಧಿಸಿದ ವಿಷಯಗಳನ್ನು ತರಗತಿಯಲ್ಲಿ ಚರ್ಚಿಸಿರಿ.

ಚಿಂತಿಸೋಣ !



ಅಂತರ್ಜಾಲದ ಬಳಕೆ ಇಲ್ಲದಿದ್ದರೆ ಈ ಪ್ರಪಂಚ ಇಂದು ಹೇಗೆ ಇರುತ್ತಿತ್ತು ?

## ಓದೋಣ! ಚಿಂತಿಸೋಣ! ಬರೆಯೋಣ!

**1. ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**

1) 'ಅಂತರ್+ಜಾಲ' ಈ ಪದವನ್ನು ಸೇರಿಸಿ ಬರೆದಾಗ ________

ಅ. ಅಂತರಜಾಲ　　ಆ. ಅಂತರ್ಜಾಲ

ಇ. ಅಂತಾರಜಾಲ　　ಈ. ಅಂತರ್‌ಜಾಲ

2) 'ವಿಶ್ವವನ್ನು' ಎಂಬ ಪದವನ್ನು ಬಿಡಿಸಿ ಬರೆದಾಗ ________

ಅ. ವಿಶ್ವ+ಅನ್ನು　　ಆ. ವಿಶ್ವವ+ಅನ್ನು

ಇ. ವಿಶ್ವ+ವನ್ನು　　ಈ. ವಿಶ್ವವ+ವನ್ನು

3) 'ಆವಿಷ್ಕರಣ' ಎಂಬ ಪದದ ಅರ್ಥ ________

ಅ. ಶೋಧನೆ　　ಆ. ಸಾಧನೆ

ಇ. ಆವಾಹನೆ　　ಈ. ಆವೇಶ

4) 'ಅನೇಕಾನೇಕ' ಈ ಪದವನ್ನು ಬಿಡಿಸಿ ಬರೆದಾಗ ________

ಅ. ಅನೇಕ+ನೇಕ　　ಆ. ಅನೇಕ+ಅನೇಕ

ಇ. ಆನೇಕಾ+ನೇಕ　　ಈ. ಆನೇ+ಕನೇಕ

5) 'ಜ್ಞಾನ' ಎಂಬ ಪದದ ವಿರುದ್ಧ ಪದ ________

ಅ. ವಿಜ್ಞಾನ　　ಆ. ಸುಜ್ಞಾನ

ಇ. ಅಜ್ಞಾನ　　ಈ. ಸಾಮಾನ್ಯಜ್ಞಾನ

**2. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

1. ಅಂತರ್ಜಾಲದ ವಿಸ್ಮಯ ಯಾವುದಕ್ಕೆ ಬುನಾದಿಯಾಗಿದೆ ?
2. ಅಂತರ್ಜಾಲವು ಪ್ರತಿಯೊಬ್ಬರ ಬೆಳಕಿನ ಜ್ಞಾನ ಹೇಗೆ?



Tamil 4th-std_Term3.indd 125　　12-07-2019 16:23:14

## ಕೂಡಿ ಮಾಡೋಣ !

| ಉದಾಹರಣೆ : ವಿಸ್ಮಯ – ಅದ್ಭುತ |
|---|
| ಆವಿಷ್ಕರಣ |
| ವಿದ್ಯುನ್ಮಾನ |
| ಯಾಂತ್ರಿಕ |
| |
| |

| ಪ್ರಾಸ ಪದಗಳನ್ನು ಬರೆಯಿರಿ |
|---|
| ಕಲಿಯಲು ಬನ್ನಿ–ತಿಳಿಯಲು ಬನ್ನಿ |
| |
| |
| |
| |

## ಪದ್ಯವನ್ನು ಪೂರ್ತಿ ಮಾಡಿ



ಮೋಡ ಮೇಲಕೇರಿದಾಗ

ತಂಪು ತಗುಲಿತು

ಆವಿ ತಣಿದು ______________

ಕುಸಿಯತೊಡಗಿತು

## ಬಣ್ಣ ಹಚ್ಚಿ ಆನಂದಿಸಿ





## ಪದಗಳನ್ನು ರಚಿಸೋಣ

ಕೊಟ್ಟಿರುವ ಪದಗಳಲ್ಲಿ ಮೊದಲನೇ ಅಕ್ಷರವನ್ನು ಬದಲಿಸಿ ಬರೆದರೆ ಉಪಗ್ರಹದ ಪ್ರಯೋಜನಗಳನ್ನು ತಿಳಿಯಬಹುದು.

ಕದ್ಧಿ ಸಂಪರ್ಕಕ್ಕೆ

ನಲ ಸಂಪನ್ಮೂಲಕ್ಕೆ

ಬಾ ಸಂಪನ್ಮೂಲಕ್ಕೆ

ಜವಾಮಾನ

ಆಕೃತಿ ವಿಕೋಪ



## ತಿಳಿದುಕೊಳ್ಳೋಣ!





ಭಾರತವು ಬಾಹ್ಯಾಕಾಶಕ್ಕೆ ಕಳುಹಿಸಿರುವ ಉಪಗ್ರಹಗಳಿಗೆ ಆರ್ಯಭಟ, ಭಾಸ್ಕರ ಇತ್ಯಾದಿ ಹೆಸರುಗಳನ್ನು ಇಡಲಾಗಿದೆ. ಇವರಿಬ್ಬರೂ ಗಣಿತದಲ್ಲಿಯೂ ಮೇಧಾವಿಯಾಗಿದ್ದಾರೆ.



## ಕಾರ್ಯ ಯೋಜನೆ



ನಮ್ಮ ದೇಶದಲ್ಲಿ ಇದುವರೆಗೆ ಬಾಹ್ಯಾಕಾಶಕ್ಕೆ ಕಳುಹಿಸಿರುವ ಉಪಗ್ರಹಗಳ ಹೆಸರುಗಳನ್ನು ಬರೆಯಿರಿ.

# 20 ಮಾಲಿನ್ಯ ರಹಿತ ಜಗತ್ತನ್ನು ಸೃಷ್ಟಿಸೋಣ

ಶಿಕ್ಷಕರು ತರಗತಿಯೊಳಗೆ ಪ್ರವೇಶಿಸಿದರು. ಅವರ ಕೈಯಲ್ಲೊಂದು ಕರೆಯೋಲೆಯಿತ್ತು. ಅದು ಏನಾಗಿರಬಹುದು ಎಂಬ ಸಂದೇಹ ವಿದ್ಯಾರ್ಥಿಗಳ ಮುಖಭಾವದಲ್ಲಿತ್ತು..

ಮೆಲ್ಲನೆ ಮೇಲೆದ್ದು ಮುಗಿಲನು, 'ಅದು ಯಾವ ಕರೆಯೋಲೆ ಸರ್?' ಎಂದು ಪ್ರಶ್ನಿಸಿದನು?

'ವಿದ್ಯಾರ್ಥಿಗಳೇ, ನಮ್ಮ ಜಿಲ್ಲಾ ಶಿಕ್ಷಣ ಇಲಾಖೆಯ ವತಿಯಿಂದ ವಿಜ್ಞಾನ ಮೇಳ ನಡೆಯುತ್ತದೆ. ನೀವು ಹೊಸದಾಗಿ ಸೃಷ್ಟಿಸಿರುವ ಮಾದರಿಗಳನ್ನು ಆ ಮೇಳದಲ್ಲಿ ಪ್ರದರ್ಶಿಸಬಹುದು. ಉತ್ತಮ ಮಾದರಿಗಳಿಗೆ ಬಹುಮಾನಗಳಿರುತ್ತವೆ. ನಮ್ಮ ಶಾಲೆಯ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊರ ಹೊಮ್ಮಿಸಲು ಇದೊಂದು ಉತ್ತಮ ಅವಕಾಶವಾಗಿದೆ' ಎಂದು ಹೇಳಿ ಕೈಯಲ್ಲಿರುವ ಕರೆಯೋಲೆಯನ್ನು ಮುಗಿಲನಿಗೆ ಕೊಟ್ಟು ಓದುವಂತೆ ಹೇಳಿದರು. ವಿದ್ಯಾರ್ಥಿಗಳು ಕರೆಯೋಲೆ ಓದುವುದನ್ನು ಬಹಳ ಆಸಕ್ತಿಯಿಂದ ಕೇಳಿ, ತಾವು ಯಾವ ಬಗೆಯ ಮಾದರಿಗಳನ್ನು ಸೃಷ್ಟಿಸಬಹುದು ಎಂದು ಯೋಚಿಸತೊಡಗಿದರು.

ವಿದ್ಯಾರ್ಥಿಗಳ ಮುಖಭಾವನೆಯನ್ನು ತಿಳಿದುಕೊಂಡ ಶಿಕ್ಷಕರು 'ನೀವು ಮಾಡುವುದು ಸಾಧಾರಣ

**ಸತ್ಯಮಂಗಲಂ ಜಿಲ್ಲಾ ಶಿಕ್ಷಣ ಇಲಾಖೆ ನಡೆಸುವ ವಿಜ್ಞಾನ ಮೇಳ – 2020**

ದಿನಾಂಕ: 28.02.2020

ಮುದ್ದಿನ ಮಕ್ಕಳ ಸಾಮರ್ಥ್ಯವನ್ನು ಹೊರಹೊಮ್ಮಿಸುವ ಸುಸಂದರ್ಭ

ನಿಮ್ಮ ವಿಜ್ಞಾನದ ಆಸಕ್ತಿಯನ್ನು, ಸಂಶೋಧನಾ ಚಿಂತನೆಗಳನ್ನು ಮಾದರಿಗಳಾಗಿ ಬದಲಾಯಿಸಿರಿ! ಬಹುಮಾನಗಳನ್ನು ಗೆಲ್ಲಿರಿ!!

ಮಾಲಿನ್ಯವಿಲ್ಲದ ಜಗತ್ತು

ಆನಂದಮಯ ಜಗತ್ತು

**ಸೂಚನೆ**

ಸಂಶೋಧನೆಗಳು ವಿದ್ಯಾರ್ಥಿಗಳ ಸ್ವಂತ ಪ್ರಯತ್ನವಾಗಿಯೂ ಇದುವರೆಗೆ ಪ್ರಚಲಿತದಲ್ಲಿಲ್ಲದ ಹೊಸ ಪ್ರಯತ್ನವಾಗಿಯೂ ಇರಬೇಕು.

ಭವಿಷ್ಯದ ವಿಜ್ಞಾನಿಗಳಿಗೆ ಶುಭಾಶಯಗಳು!

ಇಂತಿ
ಶಾಲಾ ಶಿಕ್ಷಣಾ ಇಲಾಖೆ
ಸತ್ಯ ಮಂಗಲಂ ಜಿಲ್ಲಾ ಶಿಕ್ಷಣ ಇಲಾಖೆ



Tamil 4th-std_Term3.indd 128 12-07-2019 16:23:15

ಸಂಶೋಧನೆಗಳಾಗಿರದೆ ಹೊಸ ಪ್ರಯತ್ನಗಳನ್ನು ಮಾಡಿರಿ. ಬಹುಮಾನವನ್ನು ಗೆಲ್ಲುವುದಕ್ಕಿಂತ ನಿಮ್ಮ ವೈವಿಧ್ಯಮಯ ಚಿಂತನೆಗೆ ಸ್ಥಾನ ನೀಡಿರಿ' ಎಂದು ಪ್ರೋತ್ಸಾಹಿಸಿದರು..

ಕೆಲವು ದಿನಗಳು ಕಳೆದವು. ವಿಜ್ಞಾನ ಮೇಳದ ದಿನದಂದು... ಪ್ರದರ್ಶನಾಲಯದ ಮುಂಬಾಗಿಲಲ್ಲಿ ಆಳೆತ್ತರಕ್ಕೆ ನಿಂತಿರುವ ಒಂದು ಪ್ರತಿಮೆ. ಸಂಪೂರ್ಣವಾಗಿ ಉಪಯೋಗಿಸಿ ಬಿಸಾಡಿದ ವಿದ್ಯುತ್ ಉಪಕರಣಗಳ ಬಿಡಿ ಭಾಗಗಳಿಂದ ಆ ಪ್ರತಿಮೆಯನ್ನು ತಯಾರಿಸಲಾಗಿತ್ತು. ದುರಸ್ತಿಯಾದ ಗಣಕಯಂತ್ರದ ಬಿಡಿ ಭಾಗಗಳಿಂದ ಅದು ಒಬ್ಬ ರಾಕ್ಷಸನ ರೂಪದಲ್ಲಿ ಸೃಷ್ಟಿಯಾಗಿತ್ತು. ಅದರ ಎದೆ ಭಾಗದಲ್ಲಿ ಮಡಚುವ ಗಣಕಯಂತ್ರವನ್ನೂ ತೋಳಿನ ಮೇಲ್ಭಾಗಗಳಲ್ಲಿ ಧ್ವನಿವರ್ಧಕ ಪೆಟ್ಟಿಗೆಗಳನ್ನೂ ಅಳವಡಿಸಲಾಗಿತ್ತು. ಆ ಪ್ರತಿಮೆಯು ರಾಕ್ಷಸನಂತೆ ಮಾತನಾಡತೊಡಗಿತು... .




**"ಪ್ರೀತಿಗೆ ಪಾತ್ರರಾದವರೇ!**

ನಾನು ಯಾರೆಂದು ಗೊತ್ತೇ?

ನೀವು ಉಪಯೋಗಿಸಿ ಬಿಸಾಡಿದ ವಿದ್ಯುತ್ ಉಪಕರಣಗಳ ಬಿಡಿ ಭಾಗಗಳಿಂದ ಸೃಷ್ಟಿಯಾದವನೇ ನಾನು. ಈಗ ನಿಮ್ಮ ಮುಂದೆ ಮಾತನಾಡುತ್ತಿದ್ದೇನೆ.



Tamil 4th-std_Term3.indd 129 12-07-2019 16:23:15

ನೀರು, ನೆಲ, ಗಾಳಿ, ಶಬ್ದ ಮುಂತಾದವುಗಳಿಂದ ಏರ್ಪಡುವ ಹಲವು ಬಗೆಯ ಮಾಲಿನ್ಯದ ಬಗ್ಗೆ ನೀವು ಕೇಳಿದ್ದೀರಲ್ಲವೇ? ಅವುಗಳೆಲ್ಲವೂ ಮನುಷ್ಯನಿಗೆ ತೊಂದರೆಗಳನ್ನು ಉಂಟು ಮಾಡುತ್ತವೆ. ಅವುಗಳ ಹಾಗೆಯೇ ತೊಂದರೆಗಳು ನನ್ನಿಂದಲೂ ಏರ್ಪಡಬಹುದು ಎಂಬುದನ್ನು ನೀವು ತಿಳಿದುಕೊಂಡಿದ್ದೀರಿ. ಒಂದೊಂದು ದಿನವೂ ನೀವು ಬಿಸಾಡುವ ವಿದ್ಯುತ್ ಉಪಕರಣಗಳ ತ್ಯಾಜ್ಯಗಳು ನೆಲವನ್ನೂ, ಸುತ್ತಮುತ್ತಲಿನ ಪರಿಸರವನ್ನೂ ಗರಿಷ್ಠಮಟ್ಟದಲ್ಲಿ ಮಾಲಿನ್ಯಗೊಳಿಸುತ್ತವೆ. ಈ ಮಾಲಿನ್ಯತೆಯನ್ನು ಹೇಗೆ ನಿರ್ಮೂಲನೆ ಮಾಡುವುದೆಂಬುದೇ ದೊಡ್ಡ ಪ್ರಶ್ನೆಯಾಗಿದೆ. ವಿದ್ಯುತ್ ತ್ಯಾಜ್ಯಗಳನ್ನು ಕ್ರಮವಾಗಿ ಬೇರ್ಪಡಿಸಿ ಮರುಬಳಕೆಗೆ ತರುವುದೇ ಈ ಪ್ರಶ್ನೆಗೆ ಉತ್ತರವಾಗಿರುತ್ತದೆ. ಇದನ್ನು ತಿಳಿಸುವುದಕ್ಕಾಗಿಯೇ ನಾನು ರಾಕ್ಷಸನ ಮಾದರಿಯಲ್ಲಿ ಬಂದಿದ್ದೇನೆ.

ವಿದ್ಯುತ್ ಉಪಕರಣಗಳನ್ನು ಅವಶ್ಯಕತೆ ಇರುವಷ್ಟು ಬಳಸಿ ನಂತರ ಕಂಡ ಕಂಡ ಸ್ಥಳಗಳಲ್ಲಿ ಬಿಸಾಡದೆ ಅದನ್ನು ಮರುಬಳಕೆಗೆ ಉಪಯೋಗಿಸಿದಾಗ ಮಾತ್ರ ನಾವು ಯಾವುದೇ ತೊಂದರೆಗೊಳಗಾಗದೆ ಸುಖಜೀವನ ನಡೆಸಬಹುದು.

ಮಾಲಿನ್ಯ ರಹಿತ ಜಗತ್ತನ್ನು ಸೃಷ್ಟಿಸೋಣ
ಆನಂದಮಯ ಜೀವನ ಸಾಗಿಸೋಣ... !

ಎಂದು ಅಡೆತಡೆಯಿಲ್ಲದೆ ಮಾತನಾಡುತ್ತಿತ್ತು ಆ ಪ್ರತಿಮೆ. ಪ್ರದರ್ಶನಾಲಯಕ್ಕೆ ಪ್ರವೇಶಿಸಿದ ಎಲ್ಲರೂ ಆ ಬಹುದೊಡ್ಡ ಪ್ರತಿಮೆಯನ್ನು ನೋಡಿ ಬೆರಗಾಗಿ, ಅದು ಹೇಳಿದ ಅಭಿಪ್ರಾಯಗಳನ್ನು ಕೇಳಿ ಚಿಂತಿಸುತ್ತಾ ಹೋದರು. ಆ ವರ್ಷದ ಉತ್ತಮ ವಿಜ್ಞಾನ ಮಾದರಿಗಳಿಗೆ ಸಿಗಬೇಕಾದ ಬಹುಮಾನ ಅದನ್ನು ತಯಾರಿಸಿದ ಮುಗಿಲನ ಶಾಲೆಗೇ ಸಿಕ್ಕಿತು.

ವಿದ್ಯಾರ್ಥಿಗಳೂ, ಶಿಕ್ಷಕರೂ, ಮುಖ್ಯೋಪಾಧ್ಯಾಯರೂ ಮುಗಿಲನನ್ನು ಹೊಗಳಿದರು.

**ಗಣಕ ಯಂತ್ರದಲ್ಲಿ ಬರುವ ಸಂಭಾಷಣೆಗಳು, ಮಾತುಗಳು, ಪೂರ್ಣ ವಾಕ್ಯಗಳನ್ನು ಕೇಳುವುದು.**

**ಬನ್ನಿ, ಮಾತಾಡೋಣ!**



**ನೀರು ಹೇಗೆ ಮಲಿನವಾಗುತ್ತದೆ ? ನೀರಿನ ಮಲಿನತೆಯನ್ನು ಹೇಗೆ ತಡೆಯಬಹುದು ? ಗುಂಪಿನಲ್ಲಿ ಚರ್ಚಿಸಿರಿ.**




**ನಿಮ್ಮ ಶಾಲೆಯಲ್ಲಿ ನಡೆಸಲಿರುವ ವಿಜ್ಞಾನ ವಸ್ತು ಪ್ರದರ್ಶನಕ್ಕಾಗಿ ನೀವು ಹೊಸದಾಗಿ ಮಾಡಲು ಇಷ್ಟಪಡುವುದೇನು ?**



Tamil 4th-std_Term3.indd 130 12-07-2019 16:23:16

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯೋಣವೇ?

01 'ಮಾಲಿನ್ಯ' ಎಂಬ ಅರ್ಥ ಕೊಡುವ ಪದ ________

ಅ. ಮಾಲಿನಿ　　ಆ. ಮಾಲೆ

ಇ. ಶುದ್ಧ　　ಈ. ಕೊಳಕು

02 'ಮಾಲಿನ್ಯ+ಇಲ್ಲದ' ಈ ಪದವನ್ನು ಸೇರಿಸಿ ಬರೆದಾಗ ________

ಅ. ಮಾಲಿನ್ಯವಲ್ಲದ　　ಆ. ಮಾಲಿನ್ಯಯಿಲ್ಲದ

ಇ. ಮಾಲಿನ್ಯವಿಲ್ಲದ　　ಈ. ಮಾಲಿನ್ಯವಿಲ್ಲದೆ

03 'ಕೈಯಲ್ಲೊಂದು' ಈ ಪದವನ್ನು ಬಿಡಿಸಿ ಬರೆದಾಗ ________

ಅ. ಕೈಯ+ಒಂದು　　ಆ. ಕೈಯ+ಲ್ಲೊಂದು

ಇ. ಕೈಯಲ್ಲಿ+ವೊಂದು　　ಈ. ಕೈಯಲ್ಲಿ+ಒಂದು

04 'ಪ್ರಪಂಚದಲ್ಲಿಲ್ಲದ' ಎಂಬ ಪದವನ್ನು ಬಿಡಿಸಿ ಬರೆದಾಗ ________

ಅ. ಪ್ರಪಂಚದಲ್ಲಿ+ಇಲ್ಲದ　　ಆ. ಪ್ರಪಂಚದಲ್ಲಿ+ಯಿಲ್ಲದ

ಇ. ಪ್ರಪಂಚ+ದಲ್ಲಿಲ್ಲದ　　ಈ. ಪ್ರಪಂಚದ+ಲಲ್ಲಿದ

05 'ಕಡಿಮೆಯಾದ' ಎಂಬ ಪದದ ವಿರುದ್ಧ ಪದ ________

ಅ. ಸ್ವಲ್ಪ　　ಆ. ಕೊಂಚ

ಇ. ಕಠಿಣವಾದ　　ಈ. ಅಧಿಕವಾದ

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಶಿಕ್ಷಕರ ಕೈಯಲ್ಲಿದ್ದ ಕರೆಯೋಲೆಯ ವಿಷಯವೇನು ?

02 ವಿಜ್ಞಾನ ಮೇಳದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಶಿಕ್ಷಕರು ಹೇಗೆ ಪ್ರೋತ್ಸಾಹಿಸಿದರು ?

03 ವಿಜ್ಞಾನ ಮೇಳದಲ್ಲಿದ್ದ ರಾಕ್ಷಸ ಪ್ರತಿಮೆಯನ್ನು ಯಾವುದರಿಂದ ಸೃಷ್ಟಿಸಲಾಗಿತ್ತು ?

04 ಪರಿಸರ ಮಾಲಿನ್ಯಕ್ಕೆ ಯಾವುವೆಲ್ಲ ಕಾರಣಗಳಾಗಿವೆ ?

05 ನಾವು ಬಳಸಿದ ವಿದ್ಯುತ್ ಉಪಕರಣಗಳನ್ನು ಬಳಕೆಯ ನಂತರ ಏನು ಮಾಡಬೇಕು?



Tamil 4th-std_Term3.indd 131　　12-07-2019 16:23:16

## ಹಾಡೋಣ! ಉತ್ತರ ಹೇಳೋಣ!

### ಯಾವುದು ಸರಿ ? ಯಾವುದು ತಪ್ಪು ?

ಯಾವುದು ಸರಿ ?
ಯಾವುದು ತಪ್ಪು ?
ಯಾವುದು ಸರಿ ?
ಯಾವುದು ತಪ್ಪು ?
ಯಾವುದು ಸರಿ ?
ಯಾವುದು ತಪ್ಪು?

**ಹೇಳು, ಹೇಳು ! ನೀನೇ ಹೇಳು!**

| | |
|---|---|
| ಕಂಡಕಂಡ ಸ್ಥಳದಲ್ಲಿ ಕಸವನ್ನು ಚೆಲ್ಲುವುದು | ತಪ್ಪು |
| ಕಸವನ್ನು ಕಸದ ತೊಟ್ಟಿಯಲ್ಲಿ ಹಾಕುವುದು | ಸರಿ |
| ಹಗಲುಬೀದಿಯ ವಿದ್ಯುತ್‌ದೀಪಗಳನ್ನು ಉರಿಸುವುದು | |
| ನೀರನ್ನು ಮಿತವಾಗಿ ಬಳಸುವುದು | |
| ರಸ್ತೆಯ ಬದಿಗಳಲ್ಲಿ ನಡೆದು ಹೋಗುವುದು | |
| ಪ್ರಾಣಿ ಪಕ್ಷಿಗಳನ್ನು ಹಿಂಸಿಸುವುದು | |

### ವಾಕ್ಯಗಳು ಎರಡು ಉತ್ತರ ಒಂದು : ಕಂಡು ಹಿಡಿಯಿರಿ

1) ಶಾಲೆಗೆ ಏಕೆ ಹೋಗಿಲ್ಲ ? 'ಒಲೆ ಮೇಲೆ ಏನಿಡುವುದು?' – ಹಾಲಿಡೇ
2) ನನ್ನ ಮಗಳ ಹೆಸರು; ಮದುವೆಯಲ್ಲಿ ಕುತ್ತಿಗೆಗೆ ಹಾಕುವುದು – ______
3) ಸರಸ್ವತಿಯ ಮಗಳ ಹೆಸರು; ಕವಿ ಬರೆದುದು – ______



### ಭಾಷೆಯೊಂದಿಗೆ ಆಟವಾಡು

ಒಂದು ಪದಕ್ಕೆ ಎರಡು ಅರ್ಥ ಬರೆಯಿರಿ

01 ಕರೆ < ಹಾಲನ್ನು ಕರೆ / ಅಣ್ಣನನ್ನು ಕರೆ

04 ಕಣ್ಣು <

02 ಕಸುಬು <

05 ತಂದೆ <

03 ಹಣ <

06 ಭೂ <



Tamil 4th-std_Term3.indd 132 12-07-2019 16:23:16

## ಕಲೆ ಮತ್ತು ಕರಕೌಶಲ್ಯ

### ಕಾಗದದ ಲೋಟ ತಯಾರಿಸೋಣವೇ?

#### ತಯಾರಿಸುವ ವಿಧಾನ

**ಬೇಕಾದ ವಸ್ತುಗಳು :** ಉಪಯೋಗಿಸಿದ ಹಳೆಯ ಕಾಗದ.




## ಪ್ರಕೃತಿಯನ್ನು ಕಾಪಾಡೋಣ !

ಒಣಗಿ ಹೋದ ಮರಗಳು, ಬಣ್ಣರಹಿತ ಎಲೆಗಳು, ಬಾಡಿ ಹೋದ ಹೂಗಳು, ಬರಡಾದ ಭೂಮಿ, ಬತ್ತಿ ಹೋದ ನದಿ, ಬೆಳ್ಳಿಮೋಡಗಳು, ಹಸಿರಿಲ್ಲದೆ ಬಿರಿದು ಹೋಗಿರುವ ಗದ್ದೆಗಳು... ಇವುಗಳಿಗೆಲ್ಲ ಏನಾಯಿತು? ಇವುಗಳ ಸೌಂದರ್ಯವೆಲ್ಲ ಏನಾಯಿತು? ಅದೋ, ಆ ಮನೆಯ ಪಕ್ಕದಲ್ಲಿ ನೀರಿನ ಕೊಳವೆ. ಅದರಲ್ಲಿ ತೊಟ್ಟಿಕ್ಕುವ ನೀರು... ಅದನ್ನು ತುಂಬಿಸಿಕೊಳ್ಳಲು ಅದೆಷ್ಟೋ ಬಿಂದಿಗೆಗಳು ಸಾಲುಸಾಲಾಗಿವೆ. ಅಬ್ಬಬ್ಬಾ! ಈ ತೊಟ್ಟಿಕ್ಕುವ ನೀರು ನಾಳೆಯೂ ಬರುವುದೇ?

ಈ ಗದ್ಯ ಭಾಗಕ್ಕೆ ಸರಿಯಾದ ಸೂಕ್ತಿಗಳನ್ನು ಬರೆಯಿರಿ.

ನೀರಿನಿಂದ ಉಸಿರು, ನೀರಿನಿಂದ ಹಸಿರು

________________________ ________________________

## ಕಾರ್ಯಯೋಜನೆ



ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕೋತ್ಸವ, ಚರ್ಚಾಸ್ಪರ್ಧೆ ಇವುಗಳಲ್ಲಿ ಯಾವುದಾದರೊಂದಕ್ಕೆ ಕರೆಯೋಲೆಯನ್ನು ತಯಾರಿಸಿ.

## 21 ಕಾಡಿನಲ್ಲೊಂದು ಸಂಗೀತ ಸ್ಪರ್ಧೆ



ಕಾಡು ನಿಶ್ಯಬ್ದದಿಂದ ಕೂಡಿತ್ತು. ಬೀಸುವ ಗಾಳಿಗೆ ಮರದ ರೆಂಬೆಕೊಂಬೆಗಳು ಅಲುಗಾಡುತ್ತಿದ್ದವು. ಎಲೆಗಳು ಘರ್ಷಿಸುವ ಶಬ್ದ ಬಿಟ್ಟರೆ ಅಲ್ಲಿ ಬೇರ್‍ಯಾವ ಶಬ್ದವೂ ಇರಲಿಲ್ಲ. ಹುಂಜವೊಂದು ಹಿಂಜರಿಕೆಯಿಂದಲೇ ನಿಧಾನವಾಗಿ ನಡೆದು ಬಂದಿತು. 'ಯಾರಾದರೂ ತನ್ನನ್ನು ನೋಡುತ್ತಿದ್ದಾರೆಯೆ?' ಎಂದು ಸುತ್ತಾಮುತ್ತಾ ನೋಡಿತು. ಮೆಲ್ಲನೆ ನಡೆದು ಗಿಡಮರಗಳ ಪೊದರಿನೊಳಗೆ ಹೋಯಿತು. ಯಾರೂ ತನ್ನನ್ನು ನೋಡಲಿಲ್ಲವೆಂಬುದನ್ನು ದೃಢಪಡಿಸಿಕೊಂಡ ಹುಂಜವು, 'ಕೊ... ಕ್ಕೊ... ಕ್ಕೋ... ಕೊಕ್ಕರಕ್ಕೋ....' ಎಂದು ಮೆಲ್ಲಗೆ ಕೂಗಿತು. ನಂತರ ಆಕಾಶವನ್ನು ನೋಡಿ ತಲೆಯನ್ನು ಮೇಲೆತ್ತಿ, 'ಕೊಕ್ಕರಕ್ಕೋ... ಕೊಕ್ಕೋ...' ಎಂದು ರಾಗವಾಗಿ ಹಾಡಿತು. ಆಗ ದಿಢೀರೆಂದು ನಗುವ ಶಬ್ದ ಕೇಳಿಸಿತು. ತಕ್ಷಣ ಹುಂಜ ಹಾಡುವುದನ್ನು ನಿಲ್ಲಿಸಿತು. 'ಸುತ್ತಲೂ ಯಾರೂ ಇರಲಿಲ್ಲವಲ್ಲ. ನಕ್ಕವರಾರು ?' ಎಂದು ಯೋಚಿಸಿದ ಹುಂಜವು ಸ್ವಲ್ಪ ಧೈರ್ಯವನ್ನು ತಂದುಕೊಂಡು, 'ಯಾರು ನೀವು?' ಎಂದು ಕೇಳಿತು. 'ನಾನೇ? ಮೇಲಿರುವೆ ನೋಡು' ಎಂದು ಮೇಲಿನಿಂದ ಶಬ್ದ ಕೇಳಿಸಿತು.



Tamil 4th-std_Term3.indd 134 12-07-2019 16:23:17

ಹುಂಜ ತಲೆಯೆತ್ತಿ ಮೇಲೆ ನೋಡಿತು. ಮರದ ಕೊಂಬೆಯಲ್ಲಿ ಮಂಗವೊಂದು ಕುಳಿತಿತ್ತು. 'ಏನು, ಹಾಡು ಜೋರಾಗಿದೆ? ಏನು ಸಮಾಚಾರ?' ಎಂದು ಮಂಗವು ಕೇಳಿತು. ಹುಂಜಕ್ಕೆ ನಾಚಿಕೆಯಾಯಿತು.

'ಏನೂ ಇಲ್ಲ. ನಾಳೆ ಕಾಡಿನಲ್ಲಿ ಪಕ್ಷಿಗಳಿಗಾಗಿ ಹಾಡಿನ ಸ್ಪರ್ಧೆ ನಡೆಯುತ್ತಿದೆಯಲ್ಲವೇ? ಅದರಲ್ಲಿ ನಾನೂ ಭಾಗವಹಿಸಲು ಇಷ್ಟ ಪಡುತ್ತೇನೆ. ಆದ್ದರಿಂದ ಅಭ್ಯಾಸವನ್ನು ಮಾಡುತ್ತಿದ್ದೇನೆ!' ಎಂದಿತು ಹುಂಜ.

'ಓ! ಹಾಗೋ ಕತೆ! ಒಳ್ಳೆಯದು ತಾನೇ. ನಾಳಿನ ಸ್ಪರ್ಧೆಯಲ್ಲಿ ನೀನು ಚೆನ್ನಾಗಿ ಹಾಡು!' ಎಂದು ಹಾರೈಸಿ, ಅದು ಪಕ್ಕದ ಕೊಂಬೆಗೆ ನೆಗೆದು ಹೋಯಿತು. 'ವಂದನೆಗಳು' ಎಂದು ಹೇಳಿ ಹುಂಜವು ತಲೆಯಾಡಿಸಿತು.

ಮರುದಿನ... ಕಾಡಿನ ಎಲ್ಲಾ ಪಕ್ಷಿಗಳೂ ಒಟ್ಟಾಗಿ ಸೇರಿದವು. ಸ್ಪರ್ಧೆಯಲ್ಲಿ ಭಾಗವಹಿಸುವ ಪಕ್ಷಿಗಳೆಲ್ಲಾ ಸಭಾಂಗಣದಲ್ಲಿ ಸಾಲಾಗಿ ನಿಂತಿದ್ದವು. ಅವುಗಳ ಹೆಸರುಗಳನ್ನು ಗೂಬೆ ಮಾವ ಬರೆದುಕೊಳ್ಳುತ್ತಿತ್ತು.

ಗುಬ್ಬಚ್ಚಿ ಸಭಾಂಗಣಕ್ಕೆ ಹಾರಿ ಬಂತು. ಧ್ವನಿ ವರ್ಧಕದ ಮುಂದೆ ನಿಂತು, 'ಪ್ರೀತಿಯ ಸ್ನೇಹಿತರೇ! ಈ ದಿನ ನಮ್ಮ ಕಾಡಿನಲ್ಲಿ ಪಕ್ಷಿಗಳಿಗಾಗಿ ಹಾಡಿನ ಸ್ಪರ್ಧೆ ನಡೆಯುತ್ತಿದೆ. ಇದರಲ್ಲಿ ಚೆನ್ನಾಗಿಯೂ ಹೆಚ್ಚು ಸಮಯವೂ ಹಾಡಬೇಕು. ಅದನ್ನು ಎಲ್ಲರೂ ಇಷ್ಟಪಟ್ಟು ಕೇಳುವಂತಿರಬೇಕು. ಅಂತಹ ಹಾಡನ್ನು ಯಾರು ಹಾಡುತ್ತಾರೆಯೋ ಅವರಿಗೆ ಬಹುಮಾನವನ್ನು ಕೊಡಲಾಗುತ್ತದೆ. ಏನು ಸ್ಪರ್ಧಿಗಳೇ, ತಯಾರಾಗಿದ್ದೀರಾ?' ಎಂದು ಕೇಳಿತು ಗುಬ್ಬಚ್ಚಿ. 'ನಾವು ತಯಾರಾಗಿದ್ದೇವೆ' ಎಂದು ಒಕ್ಕೊರಲಿನಲ್ಲಿ ಹೇಳಿದವು ಪಕ್ಷಿಗಳು.

'ಈ ಸ್ಪರ್ಧೆಗೆ ತೀರ್ಪುಗಾರರಾಗಿದ್ದು ಒಳ್ಳೆಯ ತೀರ್ಪನ್ನು ಕೊಡಬೇಕೆಂದು ನಿಮ್ಮೆಲ್ಲರ ಪರವಾಗಿ ನವಿಲಕ್ಕನನ್ನು ಸಭೆಗೆ ಪ್ರೀತಿಯಿಂದ ಆಹ್ವಾನಿಸುತ್ತೇನೆ!' ಎಂದು ಗುಬ್ಬಚ್ಚಿ ಹೇಳಿತು. ಒಯ್ಯಾರದಿಂದ ನಡೆದು ಬಂದು ವೇದಿಕೆಯನ್ನೇರಿ ತೀರ್ಪುಗಾರ ನವಿಲಕ್ಕ ಕುಳಿತುಕೊಂಡಿತು.

'ಮೊದಲು ಹಾಡಲು ಮೈನಾವನ್ನು ಕರೆಯುತ್ತೇನೆ!' ಎಂದು ನವಿಲಕ್ಕ ಹೇಳಿದೊಡನೆ ಮೈನಾ ವೇದಿಕೆಯ ಮೇಲೆ ಬಂದು, 'ಪಿಕ್‌ಪಿ... ಪಿಕ್‌ಪಿ... ಪಿಪಿಕ್‌ಪಿ... ಪಿಪಿಕ್‌ಪಿ...' ಎಂದು ಐದು ನಿಮಿಷ ಹಾಡಿತು ಮೈನಾ. ಅಷ್ಟರೊಳಗೆ ಅದಕ್ಕೆ ಗಂಟಲು ಕಟ್ಟಿಕೊಂಡಿತು. 'ಚೆನ್ನಾಗಿ ಹಾಡಿದ್ದೀರಿ ಸಾಕು!' ಎಂದು ತೀರ್ಪುಗಾರ ನವಿಲಕ್ಕ ಹೇಳಿದಾಗ ಮೈನಾ ತನ್ನ ಸ್ಥಳಕ್ಕೆ ಹಾರಿ ಹೋಯಿತು. 'ಮುಂದಿನ ಸ್ಪರ್ಧಿಯಾಗಿ ನಿಮಗಿಷ್ಟವಾದ ಹಾಡನ್ನು ಹಾಡಲು ಬರುತ್ತಿದ್ದಾರೆ ಗಿಳಿ ಮಾಮ!' ಎಂದು ನವಿಲಕ್ಕ ಹೇಳಿದಾಗ... ಗಿಳಿಯು ಮೇಲೆ ಬಂದು,

'ಕೀ... ಕೀ... ಕಿಕೀಕಿ... ಕಿಕಿಕೀ... ಕಿಕ್‌ಕೀ...' ಎಂದು ತಲೆ ನಿಮಿರಿಸಿ ಹಾಡಿತು.

ಹಾಡನ್ನು ಕೇಳಿದ ಕೆಲವು ಪ್ರಾಣಿಗಳು ಎದ್ದು ನಿಂತು ಕುಣಿದಾಡಲು ಪ್ರಾರಂಭಿಸಿದವು. ಸಿಳ್ಳೆ ಹೊಡೆಯುವ ಶಬ್ದ ಆಕಾಶವನ್ನೇ ಮುಟ್ಟಿತು. ಐದು ನಿಮಿಷ ನಿರಂತರವಾಗಿ ಹಾಡಿದ ಗಿಳಿಗೆ ಉಸಿರು ಕಟ್ಟಿತು. ಹಾಡನ್ನು ನಿಲ್ಲಿಸಿ ಅದು ವೇದಿಕೆಯಿಂದ ಕೆಳಗಿಳಿಯಿತು.







Tamil 4th-std_Term3.indd 135 12-07-2019 16:23:18

‘ನಮ್ಮ ಮುಂದಿನ ಸ್ಪರ್ಧಿ ಹುಂಜ. ಬನ್ನಿ, ವೇದಿಕೆಗೆ...’ ಆಹ್ವಾನ ಬಂದ ಕೂಡಲೇ ಪಕ್ಕದಲ್ಲಿದ್ದ ಮಂಗವನ್ನು ನೋಡಿಕೊಂಡೇ ವೇದಿಕೆಗೆ ಬಂತು ಹುಂಜ.

‘ಕೊ... ಕ್ಕೊ... ಕ್ಕೋ... ಕೊಕ್ಕರಕ್ಕೋ....’ ಎಂದು ಹಾಡಲು ಪ್ರಾರಂಭಿಸಿದ ಕೂಡಲೇ ಕಾಡಿನಲ್ಲಿ ನಿದ್ರೆ ಮಾಡುತ್ತಿದ್ದ ಒಂದೆರಡು ಕರಡಿಗಳು ಎಚ್ಚರಗೊಂಡವು. ಹುಂಜವನ್ನು ನೋಡಿ, ‘ನಿದ್ರಿಸುವವರನ್ನು ಎಬ್ಬಿಸಬೇಡ. ಇದು ನಿನ್ನ ಹಾಡೇ? ತುಂಬಾ ಚೆನ್ನಾಗಿದೆ... ಹಾಡಿದ್ದು ಸಾಕು...!’ ಎಂದು ಇತರ ಪಕ್ಷಿಗಳು ಇದ್ದಲ್ಲಿಂದಲೇ ಕಿರುಚಿಕೊಂಡವು. ಹುಂಜವು ನಾಚಿಕೆಯಿಂದ ಕೆಳಗೆ ಇಳಿಯಿತು. ನಂತರ ಪಟಪಟ ರೆಕ್ಕೆ ಬಡಿಯುತ್ತಾ ವೇದಿಕೆಗೆ ಬಂದದ್ದು ಹದ್ದು. ತಲೆಯನ್ನು ಹಿಂದೆಮುಂದೆ ಆಡಿಸುತ್ತಾ ಹಾಡಿತು ಹದ್ದು.

‘ಗೊವ್... ಗೊವ್... ಗೊವ್‌ಗೊವ್‌ಗೊವ್...’ ಕಾಡಿನಲ್ಲೆಲ್ಲಾ ಪ್ರತಿಧ್ವನಿಸಿತು ಹದ್ದಿನ ಹಾಡು. ಜಿಂಕೆಗಳು ಭಯಪಟ್ಟು ದೂರ ಓಡಿ ಹೋದವು. ಕೆಲವು ಭಯದಿಂದ ಅರಚಿಕೊಂಡವು. ಇನ್ನೂ ಕೆಲವು ಸಣ್ಣ ಪುಟ್ಟ ಪ್ರಾಣಿಗಳು ದೂರ ಓಡತೊಡಗಿದವು...ಇದನ್ನು ನೋಡಿ ನಕ್ಕು ನಕ್ಕು ಆನೆಗಳ ಕಣ್ಣಿನಲ್ಲಿ ನೀರು ಸುರಿಯತೊಡಗಿತು.

‘ಈಗ ಹಾಡಲು ಬರುತ್ತಿದ್ದಾರೆ ನಮ್ಮ ಕೊಕ್ಕರೆ ರಾಯರು!’ ನವಿಲಕ್ಕ ಹೇಳಿದಾಗ ಕೈ ಚಪ್ಪಾಳೆಯ ಶಬ್ದ ಜೋರಾಯಿತು. ವೇದಿಕೆಗೆ ಬಂತು ಕೊಕ್ಕರೆ.

‘ಕರ್... ಕರ್... ಕರ್‌ಕರ್...ಕರ್...’ ಎಂದು ಎರಡು ಬಾರಿ ರಾಗ ಎಳೆಯಿತು.

‘ಏನಾಯಿತು. ಹಾಡು ಹೇಳಿ. ಹಾಡು... ಹಾಡು...’ ಎಂದು ಸಭೆಯಲ್ಲಿ ಒಂದೇ ಗದ್ದಲ.

‘ಇದೇ ನನ್ನ ಹಾಡು’ ಎಂದು ಹೇಳಿ ಕೊಕ್ಕರೆ ಹಾರಿ ಹೋಯಿತು.

ನಂತರ ಕೋಗಿಲೆ ವೇದಿಕೆಯನ್ನೇರಿತು. ‘ಇಲ್ಲರೂ ಆಸಕ್ತಿಯಿಂದ ಕೈತಟ್ಟಿ ಆಹ್ವಾನಿಸಿದರು. ಹೆಚ್ಚು ಪ್ರಾಣಿಪಕ್ಷಿಗಳು ಕೋಗಿಲೆಯ ಅಭಿಮಾನಿಗಳಾಗಿದ್ದವು. ಎಲ್ಲರೂ ಕೋಗಿಲೆಗೆ ಶುಭಾಶಯಗಳನ್ನು ಹೇಳಿದರು. ಕೋಗಿಲೆ ಅತಿಯಾದ ಸಂತೋಷದಿಂದ ಜಿಗಿಯುತ್ತಾ ವೇದಿಕೆಯನ್ನೇರಿತು.



‘ಕುಹೂ... ಕುಹೂ... ಕುಹೂ... ಹೂ...’ ಕೋಗಿಲೆಯ ಹಾಡಿಗೆ ಎಲ್ಲಾ ಪಕ್ಷಿಗಳೂ ಎದ್ದು ನಿಂತು ದನಿಗೂಡಿಸಿದವು. ಸತತವಾಗಿ ಹತ್ತು ನಿಮಿಷಗಳವರೆಗೂ ಕೋಗಿಲೆ ಹಾಡಿತು. ನಂತರ ಉಸಿರು ಕಟ್ಟಿದಂತಾಗಿ ಹಾಡು ನಿಲ್ಲಿಸಿ ವೇದಿಕೆಯಿಂದ ಇಳಿಯತೊಡಗಿತು. ‘ಇನ್ನೂ ಸ್ವಲ್ಪ ಹೊತ್ತು ಹಾಡು ಕೋಗಿಲೆ’ ಎಂದು ಅದರ ರಸಿಕರು ಕೂಗಿಕೊಂಡರು.

‘ಈಗ ನಮ್ಮ ಸ್ಪರ್ಧೆಯ ಕೊನೆಯ ಸ್ಪರ್ಧಿಯಾಗಿ ವೇದಿಕೆಗೆ ಬರುತ್ತಿರುವುದು ಕಾಗೆ...’ ಎಂದು



Tamil 4th-std_Term3.indd 136 12-07-2019 16:23:18

ನವಿಲಕ್ಕ ಘೋಷಣೆ ಮಾಡಿದ ಕೂಡಲೇ ಸಭಾಂಗಣ ನಿಶ್ಶಬ್ದವಾಯಿತು.

'ಏನು ಬಾರೀ ಹಾಡು ಹೇಳಲು ಗೊತ್ತಿರುವಂತೆ ಬರುತ್ತಿದೆ...' ಎಂದಿತು ಮರಕುಟಿಗ. 'ನಿನ್ನನ್ನೆಲ್ಲಾ ಇಲ್ಲಿ ಬಂದು ಹಾಡು ಹೇಳುವಂತೆ ಹೇಳಿದವರು ಯಾರು?' ಎಂದು ವ್ಯಂಗ್ಯವಾಗಿ ಹೇಳಿತು ಅದು. ಕಾಗೆ ಇದನ್ನೆಲ್ಲ ಕೇಳಿಸಿಕೊಂಡೂ ಎದೆಗುಂದದೆ ವೇದಿಕೆಯನ್ನೇರಿತು. ಸಭೆಯಲ್ಲಿ ಒಂದೇ ಗದ್ದಲ. 'ನೀನು ಚೆನ್ನಾಗಿಯೇ ಹಾಡುತ್ತೀಯಾ, ಸಾಕಪ್ಪಾ, ಬಂದುಬಿಡು...' ಎಂದು ಕೆಲವು ಪ್ರಾಣಿಗಳು ಕಿರುಚಿದವು. ತೀರ್ಪುಗಾರ ನವಿಲು ಎಲ್ಲರನ್ನೂ ನಿಶ್ಶಬ್ದವಾಗಿ ಕುಳಿತುಕೊಳ್ಳುವಂತೆ ಹೇಳಿ, ಕಾಗೆಗೆ ಹಾಡನ್ನು ಪ್ರಾರಂಭಿಸುವಂತೆ ವಿನಂತಿಸಿಕೊಂಡಿತು.



ಕಾಗೆ, 'ಕಾ... ಕಾ... ಕಾಕಾ... ಕಾ...' ಎಂದು ಮೃದು ಧ್ವನಿಯಲ್ಲಿ ಹಾಡಲು ಪ್ರಾರಂಭಿಸಿತು. ಮೊದಲು ಕೂಗಾಡಿ ಅದನ್ನು ಹಾಡಲು ಬಿಡದ ಪ್ರಾಣಿಗಳು ಆಶ್ಚರ್ಯದಿಂದ ನೋಡಿದವು. 'ಕಾ... ಕಾ... ಕಾಕಾಕಾಕಾ...ಕಕಕಾ...' ಎಂಬ ಒಂದೇ ಅಕ್ಷರವನ್ನು ಬಳಸಿ ವಿವಿಧ ರಾಗಗಳಲ್ಲಿ ಹೊಸ ಹೊಸ ಆಲಾಪನೆಗಳಲ್ಲಿ ಅದು ಹಾಡಿತು. ಕಾಗೆ ಹಾಡುತ್ತಲೇ ಇತ್ತು.

ಹಾಡನ್ನು ಕೇಳಿದ ಪ್ರಾಣಿಪಕ್ಷಿಗಳೆಲ್ಲವೂ, 'ಏನಪ್ಪಾ ಇದು ಇಷ್ಟು ಚೆನ್ನಾಗಿ ಹಾಡುತ್ತಿದೆ...!' ಎಂದು ಮಾತನಾಡಿಕೊಂಡವು. ಮೊದಲು ಗೇಲಿ ಮಾಡಿದ ಪಕ್ಷಿಗಳಿಗೆಲ್ಲಾ ಏನೋ ಆದಂತಾಯಿತು. ಅಲ್ಲಿದ್ದ ಪ್ರಾಣಿಪಕ್ಷಿಗಳು ಎದ್ದು ನಿಂತು ಅದರ ಹಾಡಿನ ರಾಗಕ್ಕೆ ತಕ್ಕ ಹಾಗೆ ಕುಣಿಯಲು ತೊಡಗಿದವು. ಕೇಳುತ್ತಿದ್ದ ಹುಲಿರಾಯ, 'ಅದ್ಭುತವಾಗಿದೆ...!' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿತು. 'ಆಹಾ! ಎಷ್ಟು ಶೃತಿಶುದ್ಧವಾಗಿ ಇಂಪಾಗಿದೆ' ಎಂದಿತು ಸಿಂಹರಾಜ. ಕಾಗೆ ತುಂಬ ಹೊತ್ತು ನಿರಂತರವಾಗಿ ಹಾಡು ಹೇಳಿ ಮುಗಿಸಿತು. ಸರಿಯಾಗಿ ಅರ್ಧ ಗಂಟೆ ಕಾಗೆ ಹೀಗೆ ಹಾಡು ಹೇಳಿತು. ಆದರೂ ಸಮಯ ಹೋಗಿದ್ದೇ ಯಾರಿಗೂ ತಿಳಿಯಲಿಲ್ಲ. ಕಾಗೆ ಹಾಡು ಮುಗಿಸಿದ ಕೂಡಲೇ, ಎಲ್ಲರೂ ಚಪ್ಪಾಳೆಯ ಸುರಿಮಳೆಯನ್ನೇ ಸುರಿಸಿದರು. ಇದುವರೆಗೂ ಈ ಕಾಡಿನಲ್ಲಿ ಯಾರೂ ಇಂತಹ ಹಾಡನ್ನು ಕೇಳಿರಲೇ ಇಲ್ಲ ಎಂದು ಹುಲಿ ಎದ್ದು ನಿಂತು ಕಾಗೆಯನ್ನು ಅಪ್ಪಿಕೊಂಡು ಅಭಿನಂದನೆಯನ್ನು ಸಲ್ಲಿಸಿತು.

ತೀರ್ಪು ಹೇಳಲು ಧ್ವನಿವರ್ಧಕದ ಮುಂದೆ ತೀರ್ಪುಗಾರ ನವಿಲಕ್ಕ ಬಂದು ನಿಂತಿತು. ಸಭಿಕರೇ! ನೀವೆಲ್ಲರೂ ಇಂದು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ತುಂಬಾ ಸಂತೋಷದ ಸಮಯ. ಎಲ್ಲರೂ ನಿಮ್ಮ ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪ್ರಯತ್ನವನ್ನೂ ಮಾಡಿದ್ದೀರಿ. ಅದಕ್ಕಾಗಿ ನಿಮಗೆಲ್ಲರಿಗೂ ಅಭಿನಂದನೆಗಳು. ಕಾಗೆ ಹಾಡಲು ಬರುವಾಗ ನೀವೆಲ್ಲ ಮೊದಲು ಹಾಸ್ಯ ಮಾಡಿದಿರಿ. ಆದರೆ ಭಯ



Tamil 4th-std_Term3.indd 137 12-07-2019 16:23:19

ಪಡದೆ ಅದು ಆತ್ಮವಿಶ್ವಾಸದಿಂದ ಹಾಡು ಹೇಳಿದೆ. ಅಷ್ಟು ಮಾತ್ರವಲ್ಲದೆ ಅದು ನಿರಂತರವಾಗಿ ಸತತ ಅಭ್ಯಾಸವನ್ನೂ ಮಾಡಿಕೊಂಡು ಬಂದಿರುವುದರಿಂದ ಹೊಸ ಹೊಸ ರಾಗಗಳಲ್ಲಿ ಹಾಡಲು ಅದರಿಂದ ಸಾಧ್ಯವಾಗಿದೆ. ನೀವೆಲ್ಲರೂ ಮೆಚ್ಚಿಕೊಳ್ಳುವ ಹಾಗೆ ಅದು ಅರ್ಧಗಂಟೆಗಳ ಕಾಲ ಒಂದೇ ಸಮನೆ ಹಾಡಿದೆ. ಎಲ್ಲೂ ಅಪಸ್ವರವಾಗಲೀ, ಧ್ವನಿವ್ಯತ್ಯಾಸವಾಗಲೀ ಇರಲಿಲ್ಲ. ಅದರ ಧ್ವನಿಯಲ್ಲೊಂದು ಮಧುರತೆ ಇತ್ತು. ಅದು ಹಾಡಿದ ಒಂದೊಂದು ರಾಗಕ್ಕೂ ತನ್ನದೇ ಆದ ಪ್ರತ್ಯೇಕ ಸೌಂದರ್ಯವೂ ಇದೆ. ನಮಗೆಲ್ಲಾ ಇಂದು ತಾನೇ ಕಾಗೆಯ ರಾಗದ ವಿಶೇಷವೇನೆಂಬುದು ತಿಳಿಯಿತು. ಪ್ರಯತ್ನವೂ ಸತತ ಅಭ್ಯಾಸವೂ ಇದ್ದರೆ ಎಲ್ಲರಿಂದಲೂ ಚೆನ್ನಾಗಿಯೇ ಹಾಡಲು ಸಾಧ್ಯ ಎಂಬುದನ್ನು ಕಾಗೆ ಈಗ ನಮಗೆಲ್ಲರಿಗೂ ತಿಳಿಸಿಕೊಟ್ಟಿದೆ. ಇತರರೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಇದು ನಮಗೆ ಮಾದರಿಯಾಗಿದೆ. ಆದುದರಿಂದ ಕಾಗೆಗೆ ಮೊದಲ ಬಹುಮಾನವನ್ನು ನೀಡುತ್ತಿದ್ದೇನೆ' ಎಂದು ಹೇಳಿತು.

ಕಾಡಿನ ಎಲ್ಲಾ ಪ್ರಾಣಿಪಕ್ಷಿಗಳೂ ಈ ತೀರ್ಪಿಗೆ ಮೆಚ್ಚುಗೆ ವ್ಯಕ್ತಪಡಿಸಿದವು. 'ಆಹಾ! ಒಳ್ಳೆಯ ತೀರ್ಪು' ಎಂದು ಒಕ್ಕೊರಳಿನಿಂದ ಕೂಗಿದರು ಸಭೆಯಲ್ಲಿದ್ದವರೆಲ್ಲರೂ! ತೀರ್ಪುಗಾರ ನವಿಲಕ್ಕ, 'ಹಾಡಿನ ರಾಣಿ' ಎಂಬ ಬಿರುದನ್ನು ಕಾಗೆಗೆ ನೀಡಿ ತಲೆಗೆ ಕಿರೀಟವನ್ನು ತೊಡಿಸಿತು.

ಕಾಗೆ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿ ಸಂತೋಷದಿಂದ ಹಾರಿ ಹೋಯಿತು!



**ಬನ್ನಿ, ಮಾತಾಡೋಣ!**

ಈ ಕತೆಯಲ್ಲಿ ತೀರ್ಪುಗಾರ ನವಿಲು ನೀಡಿದ ತೀರ್ಪು ಸರಿಯಾದುದೇ ?

* ನಿಮ್ಮ ಶಾಲೆಯಲ್ಲಿ ನಡೆದ ಹಾಡಿನ ಸ್ಪರ್ಧೆಯನ್ನು ಕುರಿತು ಮಾತನಾಡಿ.
* ನಿಮ್ಮ ಶಾಲೆಯಲ್ಲಿ ನಡೆಯುವ ಹಾಡಿನ ಸ್ಪರ್ಧೆಯಲ್ಲಿ ತಯಾರಿ ಮಾಡಿಕೊಂಡು ಭಾಗವಹಿಸಿ.




**ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

01 ಕಾಡಿನಲ್ಲಿ ನಡೆದ ಸ್ಪರ್ಧೆಯ ಹೆಸರೇನು ?

02 ಕಾಗೆಯ ಹಾಡನ್ನು ಕೇಳಿದ ಸಿಂಹರಾಜ ಏನು ಹೇಳಿತು ?

03 'ಹಾಡಿನ ರಾಣಿ' ಎಂಬ ಕಿರೀಟವನ್ನು ಪಡೆದ ಪಕ್ಷಿ ಯಾವುದು ?



Tamil 4th-std_Term3.indd 138 12-07-2019 16:23:19

## ಒಗಟುಗಳನ್ನು ಓದೋಣ! ಉತ್ತರ ಕಂಡು ಹಿಡಿಯೋಣ! ಚಿತ್ರದೊಂದಿಗೆ ಹೊಂದಿಸೋಣ!

ರಾತ್ರಿಯಲ್ಲಿ ಆಹಾರ ಹುಡುಕುತ್ತೇನೆ
ತಲೆಕೆಳಗಾಗಿ ನೇತಾಡುತ್ತೇನೆ
ನಾನು ಯಾರು ?



ಕೂಗಿ ಕೂಗಿ ಕರೆಯುತ್ತೇನೆ
ಗುಂಪಿನಲ್ಲಿ ಜೀವಿಸುತ್ತೇನೆ
ನಾನು ಯಾರು ?



ಹಸಿರು ಬಣ್ಣದಲ್ಲಿರುವೆನು
ಹಣ್ಣುಗಳನ್ನು ಕುಟುಕಿ ಕುಟುಕಿ ತಿನ್ನುವೆನು
ನಾನು ಯಾರು ?



ಮಳೆ ಬರುವುದನ್ನು ಎಚ್ಚರಿಸುವೆ
ಗರಿ ಬಿಚ್ಚಿ ಆಡುವೆ
ನಾನು ಯಾರು ?



ಬಿಳಿಯ ಬಣ್ಣದಲ್ಲಿ ನಾನಿರುವೆ
ಒಂದೇ ಕಾಲಲ್ಲಿ ನಾ ನಿಲ್ಲುವೆ
ನಾನು ಯಾರು ?



## ಮತ್ತೆ ಮತ್ತೆ ಹೇಳೋಣ

★ ಎರಡೆರಡು ಎಮ್ಮೆ ಮರದಡಿ ನಿಂತು ಕೆರೆ ದಡದ ಹುಲ್ಲ ಕರಕರ ತಿಂದಿತು.

★ ಕೆಸ್ತೂರು ರಸ್ತೇಲಿ ಕಸ್ತೂರಿ ರಂಗರಾಯರು ಪಿಸ್ತೂಲು ಏಟ್ಟಿಂದು ಸುಸ್ತಾಗಿ ಸತ್ತುಬಿದ್ದರು.

## ಕಲೆ ಮತ್ತು ಕರಕೌಶಲ್ಯ

### ಕಾಗದದಲ್ಲಿ ಕರಡಿ ಮಾಡೋಣ !




## ತಿಳಿದುಕೊಳ್ಳೋಣ!



- ಗಂಡು ನವಿಲಿಗೆ ಮಾತ್ರ ಸುಂದರವಾದ ಗರಿಗಳಿರುತ್ತವೆ.
- ಗಂಡು ಸಿಂಹಕ್ಕೆ ಮಾತ್ರ ಕತ್ತಿನ ಸುತ್ತ ಕೇಸರಗಳಿರುತ್ತವೆ.
- ಮರ ಕುಟಿಕ ಪಕ್ಷಿ ಮರವನ್ನು ಒಂದು ನಿಮಿಷಕ್ಕೆ ಇಪ್ಪತ್ತು ಬಾರಿ ಕುಟುಕುವುದು.



## ಕಾರ್ಯ ಯೋಜನೆ



ಯಾವುದಾದರೂ ಐದು ಪಕ್ಷಿಗಳ ಚಿತ್ರವನ್ನು ಕಾಗದದಲ್ಲಿ ಅಂಟಿಸಿಕೊಂಡು, ಅವುಗಳ ಬಗ್ಗೆ ಐದು ಸಾಲುಗಳನ್ನು ಬರೆದು ಕೊಂಡು ತನ್ನಿ.



Tamil 4th-std_Term3.indd 140 12-07-2019 16:23:20

# 22 ಅನ್ನದಾತ !



ತಮಿಳುನಾಡಿಗೆ ಸುಗ್ಗಿಯು ಬಂದಿದೆ
ಹಿಗ್ಗಲಿ ಕೋಲನು ಹಾಕೋಣ !

ನಾಡಿನ ರೈತನ ನೆನೆಯುತ ಹರುಷದಿ
ಸುಗ್ಗಿಯ ಹಾಡನು ಹಾಡೋಣ !



ನಾಡಿನ ಜನತೆಗೆ ಅನ್ನವನೀಯಲು
ದುಡಿಯುತಲಿರುವನು ಹೊಲದಲ್ಲಿ !

ಉತ್ತುತ ಬಿತ್ತುತ ಕೊಯ್ಯುತ ಕುಣಿಯುತ
ಸುಗ್ಗಿಯ ಮಾಡುವ ಕಣದಲ್ಲಿ

ಹುಲಿಗೋ ಎನ್ನುತ ರಾಶಿಯ ಕಟ್ಟುತ
ಕಣದಲಿ ಹಬ್ಬವ ಮಾಡಿಹನು !

ತನ್ನಯ ಬಳಗದ ಗೆಳೆಯರ ಕರೆಯುತ
ರಾಶಿಯ ಪೂಜೆಯ ಮಾಡುವನು



ಎಲ್ಲಾ ಜನರಿಗೆ ಊಟಕೆ ಬಡಿಸುವ
ದಾನ ಧರ್ಮವ ಮಾಡಿಹನು !

ತಳಿರು ತೋರಣ ಬಂಡಿಗೆ ಕಟ್ಟುತ
ಎತ್ತಿಗೆ ಜೂಲವ ಹಾಕಿಹನು

ಸಂಭ್ರಮದಿಂದಲಿ ಎತ್ತನು ಹೂಡಿ
ಕಾಳನು ಮನೆಗೆ ಹೇರಿಹನು !



Tamil 4th-std_Term3.indd 141 12-07-2019 16:23:21

## ಬನ್ನಿ, ಮಾತಾಡೋಣ!



- ನಿಮ್ಮ ಊರಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ.
- ನಿಮ್ಮ ಊರಿನಲ್ಲಿ ಪ್ರಸಿದ್ಧಿ ಪಡೆದ ಸ್ಥಳಗಳ ಬಗ್ಗೆ ಚರ್ಚಿಸಿ.






ರಕ್ಷಿಸುವುದು ಹೇಗೆ?

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯೋಣವೇ?

01 'ಹೊಲ' ಎಂಬ ಪದದ ಅರ್ಥ ..............................................

ಅ. ನೀರು    ಆ. ಭೂಮಿ

ಇ. ಆಕಾಶ    ಈ. ಗಾಳಿ

02 'ಸುಗ್ಗಿಯಾಡು' ಎಂಬ ಪದವನ್ನು ಬಿಡಿಸಿ ಬರೆದಾಗ ______________

ಅ. ಸುಗ್ಗಿಯ+ಹಾಡು    ಆ. ಸುಗ್ಗಿ+ಆಡು

ಇ. ಸುಗ್ಗಿಯ+ಆಡು    ಈ. ಸುಗ್ಗಿ+ಯಾಡು

03 'ಧರ್ಮ' ಎಂಬ ಪದದ ವಿರುದ್ಧ ಪದ ______________

ಅ. ಶಾಂತಿ    ಆ. ಆನಂದ

ಇ. ಕರ್ಮ    ಈ. ಅಧರ್ಮ



Tamil 4th-std_Term3.indd 142   12-07-2019 16:23:21

04 ‘ಸಿಕ್ಷಕ’ ಈ ಪದವನ್ನು ಸರಿಯಾದ ರೂಪದಲ್ಲಿ ಬರೆಯಿರಿ.

ಅ. ಶಿಕ್ತಕ ಆ. ಷಿಕ್ಷಕ

ಇ. ಶಿಕ್ಷಕ ಈ. ರಕ್ಷಕ

05 ‘ಕೋಳಿ’ ಕೂಗನ್ನು ಅನುಸರಿಸಿ ಪದವನ್ನು ಆಯ್ಕೆ ಮಾಡಿರಿ ________

ಅ. ಕಾ...ಕಾ... ಆ. ಕೊ...ಕ್ಕೊ...ಕ್ಕೋ...

ಇ. ಕುಹೂ...ಕುಹೂ... ಈ. ಕೂ...ಕಾ...

## ಭಾಷೆಯೊಂದಿಗೆ ಆಟವಾಡು

ಚಿತ್ರವನ್ನು ನೋಡಿ ಹೆಸರನ್ನು ಬರೆಯಿರಿ.



ಸಮುದ್ರ

























Tamil 4th-std_Term3.indd 143 12-07-2019 16:23:22

## ಪದ್ಯದಲ್ಲಿ ಬಂದಿರುವ ಒತ್ತಕ್ಷರದ ಪದಗಳನ್ನು ಬರೆಯಿರಿ




## ಹೊಂದಿಸಿ ಬರೆಯಿರಿ

| | | |
|---|---|---|
| 1. ಸುಗ್ಗಿಯ ಹಾಡನು | – | ಬಂಡಿಗೆ ಕಟ್ಟುತ |
| 2. ದುಡಿಯುತಲಿರುವನು | – | ಕಣದಲ್ಲಿ |
| 3. ಸುಗ್ಗಿಯ ಮಾಡುವ | – | ಮಾಡುವನು |
| 4. ತಳಿರು ತೋರಣ | – | ಹಾಡೋಣ |
| 5. ರಾಶಿಯ ಪೂಜೆಯ | – | ಹೊಲದಲ್ಲಿ |

## ತಿಳಿದುಕೊಳ್ಳೋಣ!



**ವೃತ್ತಿ ನಿರತ ವ್ಯಕ್ತಿ, ನಾಡಿಗವನೇ ಶಕ್ತಿ**

**ಕೂಡಿ ಬಾಳಿದರೆ ಸ್ವರ್ಗ ಸುಖ**





## ಕಾರ್ಯ ಯೋಜನೆ

ನಿಮ್ಮ ಊರಿನಲ್ಲಿ ಹಾಡುವ ಜನಪದ ಗೀತೆಯನ್ನು ಕೇಳಿ ಬರೆದುಕೊಂಡು ಬನ್ನಿ.



Tamil 4th-std_Term3.indd 144 12-07-2019 16:23:22

# 23 ಗಣಕ ಯಂತ್ರದ ಪ್ರಪಂಚ

ಮಾಲ ಮತ್ತು ಚೈತ್ರಶ್ರೀ ಇಬ್ಬರೂ ಗೆಳತಿಯರು. ಇವರಿಬ್ಬರೂ ಬೇಸಿಗೆಯ ರಜೆಯಲ್ಲಿ ಹೊರ ಊರಿಗೆ ಹೊರಟಿದ್ದರು. ರಜೆಯನ್ನು ಮುಗಿಸಿ ಶಾಲೆ ಪ್ರಾರಂಭವಾಗುವ ಮುಂಚೆ ಇವರಿಬ್ಬರೂ ಸಂಧಿಸುವರು. ಆಗ...

**ಚೈತ್ರಶ್ರೀ** : ಗೆಳತಿ, ಚೆನ್ನಾಗಿರುವೆಯಾ?

**ಮಾಲ** : ಓ! ಚೆನ್ನಾಗಿದ್ದೇನೆ. ನೀನು ಬೇಸಿಗೆ ರಜೆಯನ್ನು ಹೇಗೆ ಕಳೆದೆ?

**ಚೈತ್ರಶ್ರೀ** : ಹೌದು ಮಾಲಾ. ನಮ್ಮ ಮಾವನ ಮದುವೆ ಚೆನ್ನೈನಲ್ಲಿ ಇತ್ತು. ನಾನು ಅಲ್ಲಿಗೆ ಹೋಗಿದ್ದೆ.

**ಮಾಲ** : ಹೌದೇನು? ಚೆನ್ನೈನಲ್ಲಿ ಸುತ್ತಮುತ್ತ ಹಲವು ಪ್ರವಾಸ ಸ್ಥಳಗಳಿವೆಯಲ್ಲವೇ? ಅಲ್ಲಿ ನೀನು ನೋಡಿದ ಸ್ಥಳಗಳ ಬಗ್ಗೆ ತಿಳಿಸುವೆಯಾ?

**ಚೈತ್ರಶ್ರೀ** : ಚೆನ್ನೈ ನಮ್ಮೂರಿನಂತೆ ಇಲ್ಲ. ಹಲವು ಮಹಡಿ ಕಟ್ಟಡಗಳು, ಬೃಹತ್ ಕಟ್ಟಡಗಳು. ಮೆರೀನಾ ಸಮುದ್ರ ತೀರ, ವಿಮಾನ ನಿಲ್ದಾಣ, ಮಹತ್ತರವಾದ ಅಣ್ಣಾ ಗ್ರಂಥಾಲಯ, ವಸ್ತು ಸಂಗ್ರಹಾಲಯ, ವಿಶ್ರಾಂತಿ ಧಾಮಗಳು, ಉದ್ಯಾನವನ, ತಂತ್ರಜ್ಞಾನ ವಿನಿಮಯ ಕೇಂದ್ರ ಇವೆಲ್ಲ ನವೀನತೆಯಿಂದ ಕೂಡಿವೆ.

**ಮಾಲ** : ಅದು ಸರಿ. ಉದ್ಯಾನವನ ಎಂದರೆ ಮರ, ಗಿಡ, ಬಳ್ಳಿಗಳಿಂದ ಕೂಡಿರುವುದು. ಸರಿ, ತಂತ್ರಜ್ಞಾನ ವಿನಿಮಯ ಕೇಂದ್ರ ಎಂಬುದು ಏನು? ನೀನು ಅಲ್ಲಿ ನೋಡಿರುವೆಯಾ?

**ಚೈತ್ರಶ್ರೀ** : ಚೆನ್ನೈನಲ್ಲಿ ತರಮಣಿ ರಾಜೀವ್‌ಗಾಂಧಿ ರಸ್ತೆಯಲ್ಲಿ ತಂತ್ರಜ್ಞಾನ ಕೇಂದ್ರವಿದೆ. ಹದಿಮೂರು ಮಹಡಿ ಕಟ್ಟಡಗಳಿಂದ ಇದು ನಿರ್ಮಿತವಾಗಿದೆ.



**ಮಾಲ** : ತಂತ್ರಜ್ಞಾನ ಉದ್ಯಾನವನದಲ್ಲಿ ಯಾವ ಯಾವ ಕೆಲಸಗಳು ನಡೆಯುತ್ತವೆ?

**ಚೈತ್ರಶ್ರೀ** : ಅಲ್ಲಿ ಗಣಕಯಂತ್ರದ ತಂತ್ರಜ್ಞಾನ, ಸುದ್ದಿ ವಿನಿಮಯ ಕಾರ್ಯಚಟುವಟಿಕೆಗಳು ನಡೆಯುತ್ತವೆ.

**ಮಾಲ** : ಪ್ರಪಂಚದೆಲ್ಲೆಡೆ ಗಣಕ ಯಂತ್ರದ ಕಾರ್ಯಚಟುವಟಿಕೆಯು ಮನೆಮಾತಾಗಿದೆ. ಅಷ್ಟೇ ಏಕೆ? ನಮ್ಮ ಶಾಲೆಗಳಲ್ಲೂ ಲ್ಯಾಪ್‌ಟಾಪ್(ಮಡಿಲ ಗಣಕ ಯಂತ್ರ)ವನ್ನು ಉಪಯೋಗಿಸುತ್ತಾರೆ. ನಾವು ಅದರ ಕಾರ್ಯಚಟುವಟಿಕೆಯನ್ನು ತಿಳಿದುಕೊಂಡು ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದು. ಹಾಗಾಗಿ ಗಣಕಯಂತ್ರದ ಬಗ್ಗೆ ತಿಳಿದುಕೊಳ್ಳಲು ತುಂಬಾ ಆಸಕ್ತಿ ಹುಟ್ಟುತ್ತದೆ!

**ಚೈತ್ರಶ್ರೀ** : ನನಗೂ ಕೂಡ ಗಣಕಯಂತ್ರದ ಬಗ್ಗೆ ತಿಳಿದುಕೊಳ್ಳಲು ಕುತೂಹಲವಾಗಿದೆ. ಸರಿ, ನಮ್ಮ ಅತ್ತೆಯು ಕೂಡ ಗಣಕಯಂತ್ರದ ತಂತ್ರಜ್ಞಾನ ವಿನಿಮಯ ಕೇಂದ್ರದಲ್ಲಿ ಕೆಲಸ



Tamil 4th-std_Term3.indd 145 12-07-2019 16:23:22

ಮಾಡುತ್ತಿದ್ದಾರೆ. ಅವರನ್ನು ಕೇಳಿ ಗಣಕಯಂತ್ರದ ಬಗ್ಗೆ ತಿಳಿದುಕೊಳ್ಳೋಣ.

**ಚೈತ್ರಶ್ರೀ ಮತ್ತು ಮಾಲ ಅತ್ತೆಯನ್ನು ಕೇಳಿ ಗಣಕಯಂತ್ರದ ಬಗ್ಗೆ ತಿಳಿದುಕೊಳ್ಳಲು ಅವರ ಬಳಿಗೆ ಬಂದು ವಿಚಾರಿಸಿದರು.**

**ಅತ್ತೆ** : ಗಣಕಯಂತ್ರವೆಂಬುದು ಒಂದು ಎಲೆಕ್ಟ್ರಾನಿಕ್ ಸಾಧನವಾಗಿದ್ದು ಅದು ಮಾಹಿತಿಯೊಂದಿಗೆ ಕೆಲಸ ಮಾಡುವಂತೆ ವಿನ್ಯಾಸ ಮಾಡಲಾಗಿದೆ. ಇದನ್ನು ಚಾರ್ಲ್ಸ್ ಬ್ಯಾಬೇಜ್ ಎಂಬುವವರು ಕಂಡು ಹಿಡಿದರು. ಮೊದಲು ದೊಡ್ಡದಾದ ಗಣಕಯಂತ್ರವನ್ನು ಉಪಯೋಗಿಸಲಾಗುತ್ತಿತ್ತು. ಈಗ ಸರಳವಾದ ಚಿಕ್ಕದಾದ ಗಣಕಯಂತ್ರಗಳು ಬಳಕೆಗೆ ಬಂದಿವೆ.

**ಮಾಲ** : ಹೌದು... ಹೌದು... ನಾವೂ ಚಿಕ್ಕದಾದ ಗಣಕಯಂತ್ರದ ಬಗ್ಗೆ (ಲ್ಯಾಪ್‌ಟ್ಯಾಪ್) ಕೇಳಿ ತಿಳಿದುಕೊಂಡಿದ್ದೇವೆ. ನಮಗೂ ಗಣಕಯಂತ್ರದ ಪ್ರಮುಖ ಭಾಗಗಳು ಯಾವುವೆಂಬುದನ್ನು ತಿಳಿಸಿಕೊಡಿ

**ಅತ್ತೆ** : ಆಧುನಿಕ ಡಿಜಿಟಲ್ ಕಂಪ್ಯೂಟರ್‌ನ ಮೂಲ ಅಂಶಗಳಾದ ಇನ್ಪುಟ್ ಸಾಧನ, ಔಟ್ಪುಟ್ ಸಾಧನ, ಕೇಂದ್ರೀಯ ಪ್ರೊಸೆಸರ್ ಯೂನಿಟ್(ಸಿಪಿಯು), ಸಾಮೂಹಿಕ ಶೇಖರಣಾ ಸಾಧನ ಮತ್ತು ಮೆಮೊರಿ ಇವುಗಳು ಪ್ರಮುಖ ಭಾಗಗಳಾಗಿವೆ.

**ಮಾಲ** : ಗಣಕ ಯಂತ್ರದ ಭಾಗಗಳ ಬಗ್ಗೆ ತಿಳಿಸಿದಿರಿ. ಅವುಗಳ ಕಾರ್ಯ ಚಟುವಟಿಕೆಯನ್ನು ತಿಳಿದುಕೊಳ್ಳಲು ನಮಗೆ ಕುತೂಹಲವಾಗಿದೆ.

**ಅತ್ತೆ** : ಗಣಕಯಂತ್ರದ ಕಾರ್ಯದ ಬಗ್ಗೆ ನೀವು ತಿಳಿದುಕೊಳ್ಳಬೇಕು. ಆಗ ತಾನೇ ಗಣಕಯಂತ್ರದಲ್ಲಿ ಕಾರ್ಯ ನಿರ್ವಹಿಸಲು ಸಹಾಯವಾಗುತ್ತದೆ. ಈಗ ನಾನು ಗಣಕಯಂತ್ರದ ಬಗ್ಗೆ ವಿವರವಾಗಿ ತಿಳಿಸಿ ಕೊಡುತ್ತೇನೆ.

**ಚೈತ್ರಶ್ರೀ** : ಸರಿ, ಅತ್ತೆ. ಗಣಕಯಂತ್ರದ ಒಳಭಾಗಗಳು ಮತ್ತು ಹೊರಭಾಗಗಳ ಕಾರ್ಯ ಚಟುವಟಿಕೆಯನ್ನು ತಿಳಿಸಿ ಕೊಡಿ.

**ಅತ್ತೆ** : ತಿಳಿಸುತ್ತೇನೆ, ಚೈತ್ರ. ಇನ್‌ಪುಟ್, ಒಳಸಾಧನ ಕಂಪ್ಯೂಟರಿಗೆ ಪ್ರವೇಶಿಸಿದ ಮಾಹಿತಿಯಾಗಿದೆ. ಇದು ಅಕ್ಷರಗಳು, ಸಂಖ್ಯೆಗಳು, ಚಿತ್ರಗಳು ಇತ್ಯಾದಿಗಳ ಸಂಗ್ರಹವಾಗಿದೆ.

ಔಟ್‌ಪುಟ್(ಹೊರ ಪ್ರತಿಕ್ರಿಯೆ) ಡೇಟಾ ಸಂಸ್ಕರಣೆಯ ನಂತರ ಕಂಪ್ಯೂಟರ್ ನೀಡಿದ ಪ್ರಕ್ರಿಯೆ ಡೇಟಾವೇ ಔಟ್‌ಪುಟ್.

**ಚೈತ್ರಶ್ರೀ** : ಗಣಕಯಂತ್ರ ಹೊರ ಭಾಗಗಳ ಕಾರ್ಯಗಳನ್ನು ತಿಳಿಸುತ್ತೀರಾ?

**ಅತ್ತೆ** : ಗಣಕಯಂತ್ರದಲ್ಲಿ ಸಿಪಿಯು(ಸೆಂಟ್ರಲ್ ಪ್ರೊಸೆಸಿಂಗ್ ಯೂನಿಟ್), 'ಕೇಂದ್ರೀಕೃತ ಕಾರ್ಯ ನಿರ್ವಹಣಾ ಘಟಕ'ಗಳು ಪ್ರಮುಖ ಭಾಗಗಳಾಗಿವೆ. ಇದರಲ್ಲಿರುವ 'ನೆನಪಿನ ಘಟಕ'ವು(ಮೆಮೊರಿ) ಲಕ್ಷಾವಧಿ ಅಂಶಗಳನ್ನು ಸಂಗ್ರಹಿಸಿಟ್ಟುಕೊಂಡಿರುತ್ತದೆ.

'ಸಿಪಿಯು'ಗೆ ಸಹಕಾರಿಯಾಗಿ 'ದರ್ಶಕ'(ಮಾನಿಟರ್) ಹಾಗೂ 'ಬೆರಳಚ್ಚು ಮಣೆ'(ಕೀ ಬೋರ್ಡ್)ಗಳು ಕಾರ್ಯ ನಿರ್ವಹಿಸುತ್ತವೆ. 'ಪರಿವರ್ತಕ'ವು (ಮೌಸ್) ಗಣಕಯಂತ್ರದಲ್ಲಿ ನಾವು ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತದೆ.

**ಗಣಕ ಯಂತ್ರದ ಭಾಗಗಳು ಮತ್ತು ಚಿತ್ರಗಳು**



**ಮಾಲ** : ಡೇಟಾ ನೋಂದಾವಣೆ, ಮಾಹಿತಿ ಶೇಖರಣೆ(ಡೌನ್‌ಲೋಡ್) ಎಂದರೇನು?

**ಅತ್ತೆ** : ತಿಳಿಸುತ್ತೇನೆ. ಗಮನವಿಟ್ಟು ಕೇಳಿ. ಗಣಕ ಯಂತ್ರಕ್ಕೆ ನೀಡುವ ಮಾಹಿತಿಗಳು ಡೇಟಾ ಆಗಿದ್ದು, ಅವುಗಳನ್ನು ಗಣಕಯಂತ್ರದಲ್ಲಿ ಸಂಗ್ರಹಿಸಿಡುವುದೇ ಡೌನ್‌ಲೋಡ್ ಆಗಿರುತ್ತದೆ.

**ಮಾಲ** : ಚೆನ್ನಾಗಿ ವಿವರಿಸಿದ್ದೀರಿ. ಹಾಗೆಯೇ ಜಾಲತಾಣದ ಬಗ್ಗೆಯೂ ತಿಳಿಸುತ್ತೀರಾ?

**ಅತ್ತೆ** : ಜಾಲತಾಣ ಅಥವಾ ವೆಬ್‌ಸೈಟ್ ಎಂಬುದು ಸಂಪನ್ಮೂಲಗಳ ಸಂಗ್ರಹವಾಗಿದೆ. ವೆಬ್ ಸಂಪನ್ಮೂಲ ಅಥವಾ ಸರಳ ಸಂಪನ್ಮೂಲ ಎಂದು ಗುರುತಿಸುವ ಅಮೂರ್ತ



Tamil 4th-std_Term3.indd 147 12-07-2019 16:23:22

ವಿಸ್ಮಯವಾಗಿದೆ. ವೆಬ್‌ಸೈಟ್‌ಗಳಲ್ಲಿ ಸಾರ್ವಜನಿಕ ನೆಟ್‌ವರ್ಕ್ ಮತ್ತು ಖಾಸಗಿ ನೆಟ್‌ವರ್ಕ್ ಮೂಲಕ ಪ್ರವೇಶಿಸಬಹುದು.

**ಮಾಲ** : ಅತ್ತೆ, ಗಣಕಯಂತ್ರ ಇನ್ನೂ ಎಂತೆಂತಹ ಅದ್ಭುತ ಕೆಲಸಗಳನ್ನು ಮಾಡುತ್ತದೆ?

**ಅತ್ತೆ** : ವಿಮಾನ, ರಾಕೆಟ್, ಕ್ಷಿಪಣಿ ಉಡಾವಣೆ ಮೊದಲಾದ ಹಲವು ಸಾಧನಗಳನ್ನೂ ಗಣಕಯಂತ್ರವು ಕಾರ್ಯಗತಗೊಳಿಸುತ್ತದೆ. ಗಗನದಲ್ಲಿ ಸುತ್ತಿ ಬರುವ ಉಪಗ್ರಹಗಳನ್ನು ನಿಯಂತ್ರಿಸುವುದೂ, ಕಾರ್ಯಗತ ಮಾಡುವುದೂ ಇದೇ. ಯಂತ್ರಮಾನವ (ರೋಬೋ) ಕೂಡ ಗಣಕಯಂತ್ರದ ಮೂಲಕವೇ ಕಾರ್ಯ ನಿರ್ವಹಿಸುವುದು. ಕ್ರಿಕೆಟ್‌ನಂತಹ ಕ್ರೀಡೆಗಳನ್ನು ಒಡನೊಡನೆಯೇ ಕಾಣುವುದಕ್ಕೆ ಗಣಕಯಂತ್ರವು ಸಹಾಯ ಮಾಡುತ್ತದೆ.

**ಮಾಲ** : ಧನ್ಯವಾದಗಳು ಅತ್ತೆ! ನಮಗೆ ಗಣಕ ಯಂತ್ರದ ಬಗ್ಗೆ ಮಹತ್ತರವಾದ ಮಾಹಿತಿಗಳನ್ನು ತಿಳಿಸಿಕೊಟ್ಟಿರಿ. ಗಣಕ ಯಂತ್ರದ ಬಗ್ಗೆ ನಾವು ತಿಳಿದುಕೊಂಡದ್ದನ್ನು ಬೇರೆಯವರಿಗೂ ತಿಳಿಸಿಕೊಡುತ್ತೇವೆ ಎಂದು ಹೇಳಿ ಇಬ್ಬರೂ ಅಲ್ಲಿಂದ ಹೊರಟರು.

**ಸಾಮರ್ಥ್ಯ : ಗಣಕಯಂತ್ರವನ್ನು ಬಳಸಿ ಅಂತರ್ಜಾಲವನ್ನು ತಿಳಿಯುವುದು.**

**ಬನ್ನಿ, ಮಾತಾಡೋಣ!**



**ವೈಜ್ಞಾನಿಕ ಯುಗದಲ್ಲಿ ಗಣಕಯಂತ್ರದ ಬಗ್ಗೆ ತಿಳಿದುಕೊಳ್ಳುವುದು**




ರವಿಯು ಪುಸ್ತಕದಲ್ಲಿ ಮಾತ್ರ ಓದಲು ಸಾಧ್ಯ ಎನ್ನುವನು.

ಅವನ ಸ್ನೇಹಿತ ಗಣಕಯಂತ್ರದಿಂದಲೂ ಓದಬಹುದು ಎನ್ನುವರು.

ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?



Tamil 4th-std_Term3.indd 148 12-07-2019 16:23:23

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.

01 'ಚಾರ್ಲ್ಸ್ ಬಾಬ್ಬೇಜ್' ಶೋಧಿಸಿದ ವಿಜ್ಞಾನದ ಸಾಧನೆ ________

ಅ. ದೂರದರ್ಶನ ಆ. ಗಣಕಯಂತ್ರ

ಇ. ರೇಡಿಯೋ ಈ. ದೂರವಾಣಿ

02 'ತಂತ್ರಜ್ಞಾನ' ಎಂಬ ಪದವನ್ನು ಬಿಡಿಸಿ ಬರೆದಾಗ ________

ಅ. ತಂತ್ರ+ಅಜ್ಞಾನ ಆ. ತಾಂತ್ರಿಕ+ಅಜ್ಞಾನ

ಇ. ತಂತ್ರದ+ಜ್ಞಾನ ಈ. ತಂತ್ರ+ಜ್ಞಾನ

03 'ಪ್ರಪಂಚದೆಲ್ಲೆಡೆ' ಈ ಪದವನ್ನು ಬಿಡಿಸಿ ಬರೆದಾಗ ________

ಅ. ಪ್ರಪಂಚ+ಎಲ್ಲೆಡೆ ಆ. ಪ್ರಪಂಚದ+ಎಲ್ಲೆಡೆ

ಇ. ಪ್ರಪಂಚ+ಯೆಲ್ಲೆಡೆ ಈ. ಪ್ರಪಂಚ+ದೆಲ್ಲೆಡೆ

04 ಚೆನ್ನೈನಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರ ________ನಲ್ಲಿದೆ.

ಅ. ತರಮಣಿ ಆ. ಮೆರೀನಾ

ಇ. ಅಣ್ಣಾರಸ್ತೆ ಈ. ಟೀನಗರ

### ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಚೆನ್ನೈನಲ್ಲಿ ಚೈತ್ರಶ್ರೀ ನೋಡಿದ ಪ್ರವಾಸ ಸ್ಥಳ ಯಾವುದು ?

02 ಗಣಕ ಯಂತ್ರದ ಪ್ರಮುಖ ಭಾಗಗಳಾವುವು ?

03 ಗಣಕ ಯಂತ್ರದ ಅದ್ಭುತ ಕೆಲಸಗಳು ಯಾವುವು ?

04 ವೆಬ್‌ಸೈಟ್ ಎಂದರೇನು ?



Tamil 4th-std_Term3.indd 149 12-07-2019 16:23:23

## ಸೂಚನೆಗಳನ್ನು ಓದಿ ಪದಗಳನ್ನು ಆಯ್ಕೆ ಮಾಡೋಣ !

ದೃಶ್ಯಗಳನ್ನು ನೋಡುವುದು

ವಿಷಯಗಳನ್ನು ಸಂಗ್ರಹಿಸುವುದು

ಗಣಕಯಂತ್ರದ ಜೀವಾಳ

ಕಿರು ಮಾಹಿತಿ ಸಂಗ್ರಾಹಕ

ನಿಯಂತ್ರಣ ಸಾಧನ




## ಭಾಷೆಯೊಂದಿಗೆ ಆಟವಾಡು

**ಕೈ ಎಂಬ ಪದವನ್ನು ಮೊದಲ ಅಕ್ಷರವಾಗಿ ಬಳಸಿ ಕೆಲವು ಪದಗಳನ್ನು ಸೃಷ್ಟಿಸೋಣವೇ?**



**ಕೈಚೌಕ**



_______________



_______________

## ಕಾರ್ಯ ಯೋಜನೆ



☞ ಗಣಕ ಯಂತ್ರದಲ್ಲಿ ಚಿತ್ರ ಬರೆದು ಬಣ್ಣ ಹಚ್ಚಿರಿ.

☞ ದಿನಪತ್ರಿಕೆ, ವಾರ ಪತ್ರಿಕೆಗಳಲ್ಲಿ ಬಿಡುಗಡೆಯಾಗುವ ಗಣಕ ಯಂತ್ರದ ವಿಷಯಗಳನ್ನು ಚಿತ್ರಗಳೊಡನೆ ನಿಮ್ಮ ಪುಸ್ತಕದಲ್ಲಿ ಅಂಟಿಸಿ ಆನಂದಿಸಿ.



Tamil 4th-std_Term3.indd 150 12-07-2019 16:23:24

# ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ

______

______

ಪ್ರೀತಿಯ ______

ನಾವೆಲ್ಲರೂ ಇಲ್ಲಿ ______ ಅದೇ ರೀತಿ ______ ಎಲ್ಲರ ______ ತಿಳಿದುಕೊಳ್ಳಲು ಆತುರವಾಗಿದೆ.

ಬರುವ ವಾರ ______ ಊರಲ್ಲಿ ______ ಪ್ರದರ್ಶನ ನಡೆಯುತ್ತದೆ. ಅಲ್ಲಿ ಹಲವಾರು ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗುತ್ತದೆ. ______ ಬೆಳವಣಿಗೆಗೆ ______ ಹಲವು ಗ್ರಂಥ ಪುಸ್ತಕಗಳನ್ನೂ ಒಂದೇ ______ ನೋಡಿ ಸಂತೋಷ ಪಡೋಣ. ______ಯಲ್ಲಿ ಭಾಗವಹಿಸಲು ______ ಕಳುಹಿಸಿದರೆ ನಾವೂ ಸಂತೋಷಪಡುವೆವು. ಹಲವು ______ ಪಡೆದುಕೊಂಡು ಪ್ರಯೋಜನ ಪಡೆಯೋಣ.

ಹಾಗಾಗಿ ______ರನ್ನು ಕಳುಹಿಸಿ ಕೊಡುವಂತೆ ______ಕೊಳ್ಳುತ್ತೇನೆ.

ಇಂತಿ

ನಿಮ್ಮ ಪ್ರೀತಿಯ

______



# 24 ಬೆಟ್ಟವೂ ಪ್ರತಿಧ್ವನಿಯೂ...

ತಂದೆ ಮತ್ತು ಮಗನು ಒಂದು ಬೆಟ್ಟವನ್ನು ಹತ್ತುತ್ತಿದ್ದರು. ಒಂದು ಬಂಡೆಯನ್ನು ಹತ್ತುವಾಗ ಕಾಲುಗಳು ಜಾರಿ ತಡವರಿಸಿ ದಿಢೀರೆಂದು ಒಂದು ಗುಹೆಯೊಳಗೆ ಬೀಳಲಿದ್ದ ಮಗ. ಹೇಗೋ ಸುಧಾರಿಸಿಕೊಂಡು ಸರಿಯಾಗಿ ಕಾಲುಗಳನ್ನು ಊರಿ ನಿಂತನು ತನಗೇ ತಿಳಿಯದೆ ಭಯದಿಂದ, 'ಆ...' ಎಂದು ಕೂಗಿಕೊಂಡ. ಕೂಡಲೇ 'ಆ...' ಎನ್ನುವ ಶಬ್ದ ಮತ್ತೆ ಕೇಳಿಸಿತು.

ಅವನು ಆಶ್ಚರ್ಯದಲ್ಲಿ ಮುಳುಗಿ ಹೋದ. ಯಾರು ಕೂಗಿಕೊಂಡದ್ದು! ನಿಶ್ಶಬ್ದವಾದ ಬೆಟ್ಟದ ಮೇಲೆ ಅವನೂ, ಅವನ ತಂದೆಯೂ ಹೊರತಾಗಿ ಬೇರೆ ಯಾರೂ ಇರಲಿಲ್ಲ! ಹಿಂದೆಕ್ಕೆ ತಿರುಗಿ ತಂದೆಯ ಕಡೆ ನೋಡಿದ. ಅವರು ಶಾಂತವಾಗಿ ಅವನನ್ನು ನೋಡುತ್ತಾ ನಿಂತುಕೊಂಡಿದ್ದರು.

'ನಮ್ಮ ಹೊರತಾಗಿ ಯಾರೋ ಇಲ್ಲಿ ಮರೆಯಾಗಿರಬೇಕು' ಎಂಬ ಭಾವ ಅವನೊಳಗೆ ಮೂಡಿತು. 'ಯಾರದು?' ಎಂದು ಕೂಗಿದ. ಕ್ಷಣದೊಳಗೆ ಮತ್ತೆ 'ಯಾರದು?' ಎಂಬ ಪ್ರಶ್ನೆ ಮರುಕಳಿಸಿತು.

'ನೀನು ಒಬ್ಬ ಮುಠ್ಠಾಳ' ಎಂದು ಅವನು ಕೂಗಿದ. ಮತ್ತೆ, 'ನೀನು ಒಬ್ಬ ಮುಠ್ಠಾಳ' ಎಂಬ ಧ್ವನಿ ಕೇಳಿಸಿತು. ಮಗ ಕೋಪದಿಂದ ತನ್ನ ತಂದೆಯನ್ನು ನೋಡಿ, 'ಏನಪ್ಪಾ ನಡೆಯುತ್ತಿದೆ ಇಲ್ಲಿ?' ಎಂದು ಪ್ರಶ್ನಿಸಿದ.

'ಸ್ವಲ್ಪ ತಾಳ್ಮೆಯಿಂದಿರು' ಎಂದು ಮೆಲ್ಲನೆ ಹೇಳಿದರು ಅವನ ತಂದೆ, 'ನಾನು ಒಬ್ಬ ಬುದ್ಧಿವಂತ' ಎಂದು ಜೋರಾಗಿ ಕೂಗಿದರು. ಪ್ರತಿಯಾಗಿ, ಆ ಮಾತು ಮತ್ತೆ ಕೇಳಿಸಿತು.





Tamil 4th-std_Term3.indd 152 12-07-2019 16:23:27

ಮಗನನ್ನು ನೋಡಿ ನಕ್ಕ ತಂದೆ ಮತ್ತೆ, 'ನೀನೊಬ್ಬ ವೀರ' ಎಂದರು. ಅದೇ ಪ್ರತಿಧ್ವನಿಸಿತು. ತಂದೆ ಅವನಿಗೆ, 'ಜನರು ಇದನ್ನೇ ಪ್ರತಿಧ್ವನಿ ಎಂದು ಹೇಳುವರು. ನಮ್ಮ ಬದುಕೂ ಕೂಡ ಈ ಪ್ರತಿಧ್ವನಿಯಂತಹುದೇ. ನಾವು ಏನು ಮಾಡುತ್ತೇವೋ ಅದೇ ನಮಗೆ ಹಿಂದಿರುಗಿ ಸಿಗುತ್ತದೆ. ನೀನು ಒಬ್ಬರ ಮೇಲೆ ಅಪರಿಮಿತ ಪ್ರೀತಿ ಇಟ್ಟುಕೊಂಡಿದ್ದರೆ ನಿನಗೂ ಪ್ರೀತಿಯೇ ಸಿಗುತ್ತದೆ. ಒಳ್ಳೆಯದನ್ನೇ ಭಾವಿಸಿ, ಒಳ್ಳೆಯದನ್ನೇ ಮಾಡುತ್ತಿದ್ದರೆ ಅದೇ ನಮ್ಮ ಬದುಕಿನಲ್ಲೂ ಪ್ರತಿಫಲಿಸುತ್ತದೆ' ಎಂದರು. ಆ ಹುಡುಗ, 'ನೀನು ನನಗೆ ತುಂಬಾ ಇಷ್ಟ' ಎಂದ! ಅವನಿಗೆ ಅದು ಮತ್ತೆ ಕೇಳಿಸಿತು!

ಅವನ ತಂದೆ ಮುಂದುವರೆದು, 'ನೀನು ಬೇರೆಯವರಲ್ಲಿ ಅತಿಯಾದ ಸಾಮರ್ಥ್ಯವನ್ನು ಅಪೇಕ್ಷಿಸುವುದಾದರೆ ಮೊದಲು ನಿನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ನಾವು ಏನನ್ನು ಕೊಡುತ್ತೇವೆಯೋ ಅದನ್ನೇ ಜೀವನದಲ್ಲಿ ಹಿಂದಿರುಗಿ ಪಡೆಯುತ್ತೇವೆ. ಜೀವನದಲ್ಲಿ ಆಕಸ್ಮಿಕವಾಗಿ ನಡೆಯುವ ಒಂದೊಂದು ಘಟನೆಯು ನಿನ್ನ ಜೀವನದ ಪ್ರತಿಧ್ವನಿಯಾಗಿರುತ್ತದೆ.

**ನೀತಿ : ನಾವು ಮಾಡುವ ಕಾರ್ಯಗಳೇ ನಮಗೆ ಒಳ್ಳೆಯ ಮತ್ತು ಕೆಟ್ಟದ್ದನ್ನು ನಿರ್ಣಯಿಸುತ್ತವೆ.**

**ಬನ್ನಿ, ಮಾತಾಡೋಣ!**



- ನೀವು ಬೆಟ್ಟ ಪ್ರದೇಶಕ್ಕೆ ಹೋಗಿದ್ದೀರಾ? ನಿಮಗಾದ ಅನುಭವವನ್ನು ತಿಳಿಸಿ.








ಮೇಲಿನ ಎರಡು ಚಿತ್ರಗಳಿಂದ ನೀವು ತಿಳಿದುಕೊಂಡದ್ದೇನು ? ಇಬ್ಬರಲ್ಲಿ ಯಾರ ಕಾರ್ಯ ಚಟುವಟಿಕೆ ಉತ್ತಮವಾಗಿದೆ.

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ತಂದೆ ಮತ್ತು ಮಗ ಇಬ್ಬರೂ ಎಲ್ಲಿಗೆ ಹೊರಟಿದ್ದರು ?

02 ಹುಡುಗನು ಮಾತನಾಡುವಾಗ ಬೆಟ್ಟ ಹೇಗೆ ಪ್ರತಿಧ್ವನಿಸಿತು ?

03 ಹುಡುಗನು 'ನೀನು ನನಗೆ ತುಂಬಾ ಇಷ್ಟ' ಎಂದು ಹೇಳಿದಾಗ ಬೆಟ್ಟ ಏನೆಂದು ಹೇಳಿತು?

04 ಈ ಕಥೆಯ ಮೂಲಕ ತಂದೆ ಮಗನಿಗೆ ಹೇಳಿದ ನೀತಿಪಾಠವೇನು?

## ಕಲೆ ಮತ್ತು ಕರಕೌಶಲ್ಯ

ಬಣ್ಣವನ್ನು ಹಚ್ಚಿ ಆನಂದಿಸೋಣ.





Tamil 4th-std_Term3.indd 154 12-07-2019 16:23:28

## ಗಾದೆಗೆ ತಕ್ಕಂತೆ ಚಿತ್ರವನ್ನು ಆಯ್ಕೆ ಮಾಡೋಣ

01 ವೃತ್ತಾಕಾರವಾಗಿ ಇರುವೆನು. ಊಟ ಮಾಡಲು ನನ್ನನ್ನ ಬಳಸುತ್ತಾರೆ. ಆದರೆ ನನ್ನನ್ನು ತಿನ್ನುವುದಿಲ್ಲ. ನಾನ್ಯಾರು?





02 ಎತ್ತರವಾಗಿ ನಾನಿರುವೆ. ಹಸಿರು ಬಟ್ಟೆ ತೊಟ್ಟಿರುವೆ. ತಣ್ಣನೆಯ ನೀರ ತೊಟ್ಟಿಕ್ಕುವೆ. ನಾನ್ಯಾರು ?





04 ನೀಲಿ ಬಣ್ಣದಿ ನಾನಿರುವೆ. ವಿರಾಮವಿಲ್ಲದೆ ನಾ ಓಡುವೆ. ನೆಗೆದು ನೆಗೆದು ನಾ ಬರುವೆ. ನಾನ್ಯಾರು?





05 ನೀ ನೋಡಿದರೆ ನಾನೂ ನೋಡುವೆ. ನೀ ನಕ್ಕರೆ ನಾನೂ ನಗುವೆ. ನೀನು ಮಾಡಿದ ಹಾಗೆ ನಾನೂ ಮಾಡುವೆ. ನಾನ್ಯಾರು?





06 ನೆಲದಲ್ಲಿ ಉರುಳುವೆನು, ಆಕಾಶದಲ್ಲಿ ಹಾರುವೆನು, ಸಮುದ್ರವನ್ನು ದಾಟುವೆನು. ಜನರ ಹೊತ್ತು ನಾ ಸಾಗುವೆ. ನಾನ್ಯಾರು?







Tamil 4th-std_Term3.indd 155 12-07-2019 16:23:28

# ಭಾಷೆಯೊಂದಿಗೆ ಆಟವಾಡು

**'ಸ' ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ.**

ಮಾದರಿ : ಅಪ್ಪ ಜಾತ್ರೆಯಿಂದ ತಂದ ವಸ್ತು ಸರ

01 ಇರುವೆಗೆ ಇಷ್ಟವಾದ ಸಿಹಿ

02 ಗಂಡು ಆನೆಯನ್ನು ಹೀಗೆ ಕರೆಯುತ್ತಾರೆ

03 ತೋಟದಲ್ಲಿ ಹಾವು ಹೀಗೆ ಸರಿಯಿತು

04 ಅಣ್ಣ ತಮ್ಮ ಒಂದು ರೊಟ್ಟಿಯನ್ನು ಹೀಗೆ ಹಂಚಿ ತಿಂದರು

**ತಿಳಿದುಕೊಳ್ಳೋಣ!**



ಪ್ರಪಂಚದ ಅತಿ ಎತ್ತರವಾದ ಶಿಖರ

– ಎವರೆಸ್ಟ್ ಶಿಖರ

ತಮಿಳುನಾಡಿನ ಅತಿ ಎತ್ತರವಾದ ಶಿಖರ

– ಆನೈ ಮಲೈ, ಆನೈ ಮುಡಿ.





**ಕಾರ್ಯ ಯೋಜನೆ**

ನಿನಗೆ ಇಷ್ಟವಾದ ಪ್ರೀತಿಯ ಪ್ರಾಣಿ ಯಾವುದು ? ಅದರ ಜೊತೆ ನೀನು ಯಾವ ರೀತಿ ಪ್ರತಿಕ್ರಿಯಿಸುವೆ? ಬರೆದುಕೊಂಡು ತನ್ನಿ.



Tamil 4th-std_Term3.indd 156 12-07-2019 16:23:29

# ವ್ಯಾಕರಣ

## ಕ್ರಿಯಾಪದಗಳು

ಕ್ರಿಯೆಯೊಂದನ್ನು ಪೂರ್ಣವಾಗಿ ಅರ್ಥ ಸೂಚಿಸುವ ಶಬ್ದಗಳಿಗೆ ಕ್ರಿಯಾಪದಗಳು ಎನ್ನುವರು. ಕ್ರಿಯೆಯೊಂದಕ್ಕೆ ಕಾರಣರಾದವರು ಯಾರು ? ಅಥವಾ ಯಾವುದು? ಎಂದರೆ ಅದಕ್ಕೆ ಬರುವ ಉತ್ತರ ಕರ್ತೃಪದ. ಹಾಗೆಯೇ ಕ್ರಿಯೆಯನ್ನು ಸೂಚಿಸುವುದು ಕ್ರಿಯಾಪದ. ಯಾವ ಕ್ರಿಯೆ ಹೇಗೆ ನಡೆಯಿತು ಎನ್ನುವ ಪ್ರಶ್ನೆ ಬಂದಾಗ ಬರುವ ಉತ್ತರ ಕ್ರಿಯಾಪದ.

## ಕರ್ತೃಪದಗಳು

ವಾಕ್ಯವೊಂದರಲ್ಲಿ ಕಾರ್ಯ ಮಾಡುವ ವ್ಯಕ್ತಿ ಅಥವಾ ವಸ್ತುವಿನ ಹೆಸರನ್ನು ಸೂಚಿಸುವ ಪದಗಳಿಗೆ ಕರ್ತೃಪದಗಳೆನ್ನುವರು.

ಉದಾಹರಣೆ :

01 ರಾಮನು ಆಟ ಆಡುತ್ತಾನೆ.
ಇಲ್ಲಿ ಆಟವಾಡುತ್ತಿರುವವರು ಯಾರು ? – ರಾಮ

02 ಬೆಂಗಳೂರು ಒಂದು ಸುಂದರ ನಗರ.
ಸುಂದರವಾದ ನಗರ ಯಾವುದು ? – ಬೆಂಗಳೂರು

03 ಕಾಶ್ಮೀರದಲ್ಲಿ ಹಿಮಪಾತವಾಗುತ್ತದೆ.
ಎಲ್ಲಿ ಹಿಮಪಾತವಾಗುತ್ತದೆ ? – ಕಾಶ್ಮೀರ

## ಕ್ರಿಯಾಪದಗಳು

ಕ್ರಿಯಾಪದಗಳು ವಾಕ್ಯಗಳಲ್ಲಿ ಅತ್ಯಂತ ಮಹತ್ವಪೂರ್ಣ ಪಾತ್ರ ವಹಿಸುತ್ತವೆ. ವಾಕ್ಯಗಳಿಗೆ ನಿರ್ದಿಷ್ಟ ಅರ್ಥ ನೀಡುತ್ತವೆ. ವ್ಯಕ್ತಿ, ವಸ್ತು, ಪ್ರದೇಶದ ಕುರಿತಾಗಿ ಮಾಹಿತಿ ನೀಡುತ್ತವೆ.

ಈ ಕೆಳಗಿನ ವಾಕ್ಯವನ್ನು ಗಮನಿಸಿ.

ಸೀತೆಯು ಹಣ್ಣನ್ನು ತಿಂದಳು (ಏನನ್ನು?)

ಇಲ್ಲಿ ಹಣ್ಣು ಕರ್ಮಪದ.

ಕೆಲವು ಸಂದರ್ಭಗಳಲ್ಲಿ ಕರ್ಮಪದಗಳನ್ನು ಉಪಯೋಗಿಸದಿದ್ದರೂ ಸಹ ವಾಕ್ಯಗಳ ಅರ್ಥಗಳಿಗೆ ತೊಂದರೆ ಉಂಟಾಗದು.



Tamil 4th-std_Term3.indd 157 12-07-2019 16:23:29

## ಧಾತುಗಳು

ಕ್ರಿಯೆಯೊಂದರ ಅರ್ಥವನ್ನು ನೀಡುವ, ಕ್ರಿಯಾಪದದ ಮೂಲ ರೂಪಕ್ಕೆ 'ಧಾತು' ಎಂದು ಕರೆಯುತ್ತೇವೆ. ಧಾತುಗಳಲ್ಲಿ ಮೂರು ವಿಧಗಳಿವೆ.

1. ಮೂಲ ಧಾತು
2. ಪ್ರತ್ಯಯಾಂತ ಧಾತು
3. ಸಂಯುಕ್ತ ಧಾತು

01 **ಮೂಲಧಾತು :** ಪ್ರತ್ಯಯಗಳ ಅವಶ್ಯಕತೆಯಿಲ್ಲದ ಮೂಲ ರೂಪದಲ್ಲಿಯೇ ಇರುವ ಧಾತುಗಳಿಗೆ ಮೂಲಧಾತು ಎನ್ನಲಾಗುವುದು.

ಉದಾಹರಣೆ : ನೋಡು, ಕೊಡು, ಆಡು, ಮಾಡು.

02 **ಪ್ರತ್ಯಯಾಂತ ಧಾತು :** ಪ್ರತ್ಯಯಗಳು ಮೂಲ ಧಾತುವಿನೊಂದಿಗೆ ಬೆರೆತು ಪರಿವರ್ತನಾ ರೂಪದಲ್ಲಿ ಹೊರಹೊಮ್ಮುವ ಧಾತುಗಳನ್ನು ಪ್ರತ್ಯಯಾಂತ ಧಾತು ಎನ್ನಲಾಗುವುದು.

ಉದಾಹರಣೆ : ಶಿಕ್ಷಿಸು, ಭಕ್ಷಿಸು, ರಕ್ಷಿಸು.

ಧಾತುಗಳ ಜೊತೆಯಲ್ಲಿ 'ಇಸು' ಪ್ರತ್ಯಯವನ್ನು ಸೇರಿಸುವುದರಿಂದ ಹೊಸ ಧಾತುವಿನ ಉತ್ಪನ್ನವಾಗುವುದು.

03 **ಸಂಯುಕ್ತ ಧಾತುಗಳು :** ಕೃತ್ ಪ್ರತ್ಯಯಗಳು ಕೃದಂತಾವ್ಯಯಗಳ ಜೊತೆ ಸೇರಿ ಉಂಟಾಗುವ ಪರಿವರ್ತಿತ ಧಾತು ರೂಪಗಳನ್ನು ಸಂಯುಕ್ತ ಧಾತುಗಳು ಎನ್ನಲಾಗುವುದು.

ಉದಾಹರಣೆ : ತಿಂದು + ಬಿಡು
ಮಾಡಿ + ಬಿಡು
ಮಾತು + ಕೊಡು

# 25 ಸರ್ವಜ್ಞನ ತ್ರಿಪದಿಗಳು

ಅನ್ನವನು ಇಕ್ಕುವುದು । ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ । ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ ॥

ಕೊಟ್ಟದ್ದು ತನಗೆ । ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟಿದ್ದು ಕೆಟ್ಟಿತೆನಬೇಡ । ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ ॥

ಸಿರಿ ಬಂದ ಕಾಲಕ್ಕೆ । ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು । ಸ್ವರ್ಗ ತಾ
ನೆರೆಮನೆಯಕ್ಕು ಸರ್ವಜ್ಞ ॥

ಆಗ ಬಾ ಈಗ ಬಾ ಹೋಗಿ ಬಾ । ಎನ್ನದಲೆ
ಆಗಲೇ ಕರೆದು ಕೊಡುವನ ಧರ್ಮ ।
ಹೊನ್ನಾಗದೆ ಬಿಡದು ಸರ್ವಜ್ಞ ॥

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವಗ್ನಿಯೊಂದೇ ಇರುತಿರಲು । ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ ॥

ಕೋಪವೆಂಬುದು ತಾನು । ಪಾಪದಾ ನೆಲೆಗಟ್ಟು
ಆಪತ್ತು ಸುಖವು ಸರಿಯೆಂದು । ಕಾಂಬವಗೆ
ಪಾಪವೆಲ್ಲಿಹುದು ಸರ್ವಜ್ಞ ॥

**ನುಡಿದಂತೆ ನಡೆ, ನಡೆದಂತೆ ನುಡಿ**



**ಪದಗಳ ಅರ್ಥ**

ಇಕ್ಕುವುದು–ಇಡುವುದು; ನನ್ನಿ–ನಿಜ; ಬಿನ್ನಾಣ–ಬೆಡಗು; ಅಗ್ನಿ–ಬೆಂಕಿ; ಕುಲಗೋತ್ರ–ವಂಶ, ಜಾತಿ; ಆಪತ್ತು–ಅಪಾಯ, ತೊಂದರೆ; ಬಗೆ–ಯೋಚಿಸು, ಚಿಂತಿಸು; ಭಾವಿಸು; ಸಿರಿ–ಸಂಪತ್ತು; ದಾನ–ಕೊಡುಗೆ; ನೆರಮನೆ–ಪಕ್ಕದಮನೆ.

## ಬನ್ನಿ, ಮಾತಾಡೋಣ!



- ಈ ಪದ್ಯವನ್ನು ಬಾಯಿ ಪಾಠ ಮಾಡಿ. ದೊಡ್ಡ ಸಭೆಗಳಲ್ಲಿ ಆನಂದದಿಂದ ಹಾಡಿರಿ.




ಸುರೇಶ್ ಚೆನ್ನಾಗಿ ಓದುತ್ತಾನೆ. ಆದರೆ ತರಗತಿಯಲ್ಲಿ ಉಪಾಧ್ಯಾಯರು ಯಾವುದಾದರೂ ಪ್ರಶ್ನೆ ಕೇಳಿದರೆ ಉತ್ತರವನ್ನು ಹೇಳಲು ಭಯ ಪಡುತ್ತಾನೆ. ಅವನ ನಾಚಿಕೆಯನ್ನು ಯಾವ ರೀತಿ ನಿವಾರಿಸಬಹುದು.

## ಓದೋಣ! ಚಿಂತಿಸೋಣ! ಬರೆಯೋಣ!

**ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**

01 ದಾನ ಎಂಬ ಪದದ ಅರ್ಥ ________

ಅ. ಕೊಡುವುದು ಆ. ದೀನ

ಇ. ಧರ್ಮ ಈ. ದಾನಿ

02 'ಕುಡಿವುದೊಂದೇ' ಎಂಬ ಪದವನ್ನು ಬಿಡಿಸಿ ಬರೆದರೆ ________.

ಅ. ಕುಡಿ+ವುದೊಂದೇ ಆ. ಕುಡಿವು+ದೊಂದೇ

ಇ. ಕುಡಿಯುವುದು+ಒಂದೇ ಈ. ಕುಡಿಯು+ವುದೊಂದೇ



Tamil 4th-std_Term3.indd 160 12-07-2019 16:23:29

03 ಸುಖ ಎಂಬ ಪದದ ವಿರುದ್ಧ ಪದ ________

ಅ. ಕಷ್ಟ ಆ. ದುಃಖ

ಇ. ಕೆಲಸ ಈ. ಸತ್ಯ

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಪರರನ್ನು ಏನೆಂದು ಬಗೆಯಬೇಕು ?

02 ಪಾಪದ ನೆಲೆಗಟ್ಟು ಯಾವುದು ?

03 ಸಿರಿ ಬಂದ ಕಾಲಕ್ಕೆ ಏನು ಮಾಡಬೇಕು ?

## ಸ್ಪಷ್ಟವಾಗಿ ಓದಿ ವ್ಯತ್ಯಾಸ ಗಮನಿಸಿ

01 ಹಾಳು - ಆಳು

02 ________ - ________

03 ________ - ________

## ಭಾಷೆಯೊಂದಿಗೆ ಆಟವಾಡು

ಮಾದರಿಯಂತೆ ಸೂಕ್ತ ಸ್ಥಳದಲ್ಲಿ ಸ, ಶ, ಷ ಸೇರಿಸಿ ಪದ ರಚಿಸಿ.

ಮಾದರಿ : ಸನ್ಯಾಸ ವಿನಾಶ ಪುರುಷ

| | | |
|---|---|---|
| ಪ್ರಯಾ____ | ಆಕಾ____ | ದೋ____ |
| ವಿಶ್ವಾ____ | ವಿದೇ____ | ರೋ____ |
| ವಿಲಾ____ | ವರು____ | ನಿಮಿ____ |

## ಕೂಡಿ ಮಾಡೋಣ

ಕಾಯಕವೇ ಕೈಲಾಸ, ಕೈ ಕೆಸರಾದರೆ ಬಾಯಿ ಮೊಸರು, ಕರೆದು ದಾನವ ಮಾಡು.




1.

2.

3.

## ತಿಳಿದುಕೊಳ್ಳೋಣ!



ಈ ಪದ್ಯವನ್ನು ಕಂಠಪಾಠ ಮಾಡಿರಿ ಮತ್ತು ನೋಡದೆ ಬರೆಯಿರಿ.





## ಕಾರ್ಯ ಯೋಜನೆ

ಪುರಾಣದಲ್ಲಿ ಬರುವ ವೀರ ಬಾಲಕನೊಬ್ಬನ ಕಥೆಯನ್ನು ಬರೆದು ತರಗತಿಯಲ್ಲಿ ಓದಿ. ನಂತರ ಎಲ್ಲರೂ ಬರೆದ ಕಥೆಯನ್ನು ತರಗತಿಯ ಹಿರೇಮಾಣಿಯು(ಲೀಡರ್) ಸಂಗ್ರಹಿಸಿ ಗ್ರಂಥಾಲಯದಲ್ಲಿಡಿ.



Tamil 4th-std_Term3.indd 162 12-07-2019 16:23:30

# 26 ಗೆಳತಿಗೊಂದು ಪತ್ರ

ಹೊಸೂರು ರಸ್ತೆ, ತಾಳವಾಡಿ

ದಿನಾಂಕ : ____________

ಪ್ರೀತಿಯ ಕಮಲ,

ನಾನು ಕ್ಷೇಮ. ನಿನ್ನ ಕ್ಷೇಮವನ್ನು ತಿಳಿಯಲು ಕಾತರಳಾಗಿದ್ದೇನೆ. ನಿನ್ನ ಜೊತೆ ಹಲವು ವಿಷಯಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ. ಕಳೆದ ವಾರ ನಮ್ಮ ಶಾಲೆಯಲ್ಲಿ 'ಸಾಂಪ್ರದಾಯಿಕ ಕ್ರೀಡಾ ಮಹೋತ್ಸವ' ನಡೆಯಿತು. ಸಾಂಪ್ರದಾಯಿಕ ಆಟಗಳಾದ ಒಳಾಂಗಣ ಆಟ, ಹೊರಾಂಗಣ ಆಟಗಳನ್ನು ಏರ್ಪಡಿಸಲಾಗಿತ್ತು. ನಮಗೆ ಇಷ್ಟವಾದ ಆಟಕ್ಕೆ ಸೇರಬಹುದಾಗಿತ್ತು. ನಾನು ಒಳಾಂಗಣ ಆಟವಾದ ಅಳಗುಳಿಮಣೆ ಆಟ ಮತ್ತು ಗುಚ್ಚಿಕಲ್ಲು ಆಟಗಳಲ್ಲಿ ಭಾಗವಹಿಸಿದೆ. ಈ ಆಟಗಳು ಮನಸ್ಸಿನ ಕ್ರಿಯಾಶೀಲತೆಯನ್ನು ಹೆಚ್ಚಿಸುವುದರ ಜೊತೆಗೆ ಸ್ಫೂರ್ತಿಯನ್ನು ತರುತ್ತದೆ.

ಇಂತಹ ಒಳಾಂಗಣ ಮತ್ತು ಹೊರಾಂಗಣ ಆಟಗಳು ನೆರೆಹೊರೆ ದೇಶಗಳಾದ ಚೀನಾ, ಬರ್ಮಾ, ಶ್ರೀಲಂಕಾ ದೇಶಗಳಲ್ಲೂ ಕೂಡ ಪ್ರಸಿದ್ಧವಾಗಿವೆ.





Tamil 4th-std_Term3.indd 163 12-07-2019 16:23:30

ನಾನು ಇಂತಹ ಆಟಗಳನ್ನು ತುಂಬಾ ಉತ್ಸಾಹದಿಂದ ಆಡಿದೆ. ಅಂದು ಪೂರ್ತಿ ದಿನ ಎಲ್ಲಾ ಆಟಗಳಲ್ಲೂ ಭಾಗವಹಿಸಿ ಜಯ ಗಳಿಸಿದೆ. ಈ ಕ್ರೀಡಾ ಉತ್ಸವದಲ್ಲಿ ನೀನು ಕೂಡ ಪಾಲ್ಗೊಂಡಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ನಿಮ್ಮ ಶಾಲೆಯಲ್ಲಿ ನಡೆಯುವ ಸಾಂಪ್ರದಾಯಿಕ ಕ್ರೀಡಾ ಮಹೋತ್ಸವದಲ್ಲಿ ಪಾಲ್ಗೊಂಡು ವಿಜೇತಳಾಗಬೇಕೆಂದು ಆಶಿಸುತ್ತೇನೆ.

ಇಂತಿ ನಿನ್ನ ಗೆಳತಿ
ವಿಮಲ

ವಿಳಾಸ

ಕಮಲ
ಮನೆ ಸಂಖ್ಯೆ 2/10
4ನೇ ಮುಖ್ಯರಸ್ತೆ
ಅರಳವಾಡಿ 638461.

## ಬನ್ನಿ, ಮಾತಾಡೋಣ!



• ಶರೀರವನ್ನು ದೃಢಪಡಿಸುವುದು ಕ್ರೀಡೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಬರೆಯಿರಿ.




ನವೀನ ತಾನು ಅಂದುಕೊಳ್ಳುವುದನ್ನೆಲ್ಲ ತನ್ನ ಮಾವನ ಜೊತೆ ದೂರವಾಣಿಯಲ್ಲಿ ಮಾತನಾಡುವನು. ದೂರವಾಣಿಯಲ್ಲಿ ಮಾತನಾಡಿದ ಮಾತುಗಳೆಲ್ಲ ಕೆಲವು ದಿನಗಳ ನಂತರ ಮರೆತು ಹೋಗುವುವು.

ಶಿಲ್ಪ ತಾನು ಮಾತನಾಡುವ ವಿಚಾರಗಳನ್ನು ಪತ್ರದ ಮೂಲಕ ತನ್ನ ಅಕ್ಕನಿಗೆ ಬರೆದು ಕಳಿಸುವಳು.

ಈ ಸಂದರ್ಭಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಯಾವುದು ಉತ್ತಮವಾದುದೆಂದು ನೀವು ಹೇಳುವಿರಿ?



Tamil 4th-std_Term3.indd 164 12-07-2019 16:23:31

# ಓದೋಣ! ಚಿಂತಿಸೋಣ! ಬರೆಯೋಣ!

## ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

01 'ಮಹೋತ್ಸವ' ಈ ಪದವನ್ನು ಬಿಡಿಸಿ ಬರೆದಾಗ ___________

ಅ. ಮಹ+ಉತ್ಸವ    ಆ. ಮಹಾ+ಉತ್ಸವ

ಇ. ಮಹೋ+ಉತ್ಸವ    ಈ. ಮಹೋ+ತ್ಸವ

02 ಇವುಗಳಲ್ಲಿ ಯಾವುದು ಒಳಾಂಗಣ ಆಟ ___________

ಅ. ಕಬಡ್ಡಿ    ಆ. ಅಳಗುಳಿ ಮಣೆ

ಇ. ಕೊಕ್ಕೋ    ಈ. ಕುಂಟೇಬಿಲ್ಲೆ

03 ಸಾಂಪ್ರದಾಯಿಕ ಕ್ರೀಡೆಯಲ್ಲದ್ದು ___________

ಅ. ಅಳಗುಳಿಮಣೆ ಆಟ    ಆ. ಕಬಡ್ಡಿ

ಇ. ಕ್ರಿಕೆಟ್    ಈ. ಕುಂಟೇಬಿಲ್ಲೆ

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ತಮಿಳುನಾಡಿನ ಸಾಂಪ್ರದಾಯಿಕ ಆಟಗಳು ಯಾವುವು ?

02 ಒಳಾಂಗಣ ಆಟಗಳ ಹೆಸರುಗಳನ್ನು ಬರೆಯಿರಿ.

03 ಹೊರಾಂಗಣ ಆಟಗಳ ಹೆಸರುಗಳನ್ನು ಬರೆಯಿರಿ.

# ಭಾಷೆಯೊಂದಿಗೆ ಆಟವಾಡು

**ನಿಮಗೆ ಇಷ್ಟವಾದ ಆಟವನ್ನು ನೀಡಲಾಗಿರುವ ಅಕ್ಷರ ಚೌಕದಲ್ಲಿ ಕಂಡು ಹಿಡಿದು ಬರೆಯಿರಿ.**











| | | | | | | |
|---|---|---|---|---|---|---|
| ಕ | ಬ | ಡ್ಡು | ಕೊ | ಕ್ಕೊ | ಬ | ಗಿ |
| ಅ | ಳ | ಗು | ಳಿ | ಮ | ಣೆ | ಲ್ಲಿ |
| ಸ | ಬು | ಕ್ರಿ | ಕೆ | ಟ್ | ಸ | ದಾಂ |
| ಆ | ಟ | ಗು | ಪ | ಟ | ದಾ | ಡು |
| ಲ | ಬು | ಗು | ರಿ | ತ | ಬ | ಲ |
| ಪ | ಗ | ಡೆ | ಚಿ | ನ್ನಿ | ಕೋ | ಲು |
| ಡೆ | ಚ್ಚೆ | ಡಾ | ಟ | ಬಂ | ದಾ | ಐ |

____________ ____________ ____________

## ಕಲೆ ಮತ್ತು ಕರಕೌಶಲ್ಯ

**ರಾಕೇಟು ತಯಾರಿಸೋಣ ! ಗಿಡಗಳಿಗೆ ನೀರು ಹಾಕೋಣ !**





Tamil 4th-std_Term3.indd 166 12-07-2019 16:23:31

## ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಕ್ರೀಡೆಗಳು ಮತ್ತು ಮನೋರಂಜನೆಯು ಒಂದು ವರ್ಗದ ಜನರ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದೆ. ಸಂಘ ಕಾಲದಲ್ಲಿ ಹಿರಿಯರು ಮತ್ತು ಕಿರಿಯರು ಹಲವು ಬಗೆಯ ಕ್ರೀಡೆ ಮತ್ತು ಮನೋರಂಜನೆಗಳಲ್ಲಿ ಭಾಗವಹಿಸುತ್ತಿದ್ದರು. ಅವುಗಳಲ್ಲಿ 'ಜಲ್ಲಿಕಟ್ಟು' ಕ್ರೀಡೆಯು ಪ್ರಮುಖವಾದುದು. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರು ಚೂಪಾದ ಕೊಂಬುಗಳನ್ನು ಹೊಂದಿರುವ ಗೂಳಿಗಳನ್ನು ಸೋಲಿಸಿ ಕ್ರೀಡೆಯಲ್ಲಿ ಗೆಲ್ಲುತ್ತಿದ್ದರು. ಇದನ್ನು 'ವೀರ' ಆಟವೆಂದು ಕರೆಯಲಾಗುತ್ತಿತ್ತು.



01 ಒಂದು ವರ್ಗದ ಜನರ ಸಾಂಸ್ಕೃತಿಕ ಇತಿಹಾಸದಲ್ಲಿ ಗುರುತಿಸುವಂತಹವು ಯಾವುವು?

02 'ಜಲ್ಲಿಕಟ್ಟು' ಎಂದರೇನು ?

03 ಗದ್ಯಭಾಗದಲ್ಲಿ ಇರುವ ವಿರುದ್ಧ ಪದಗಳನ್ನು ಬರೆಯಿರಿ ?

04 ಜಲ್ಲಿಕಟ್ಟು ಕ್ರೀಡೆಯು ಯಾವ ವಿಭಾಗಕ್ಕೆ ಸಂಬಂಧಪಟ್ಟದ್ದು?

05 ಜಲ್ಲಿಕಟ್ಟು ಎಂಬುದು ____________ ಕ್ರೀಡೆಯಾಗಿದೆ(ಒಳಾಂಗಣ/ಹೊರಾಂಗಣ).

## ತಿಳಿದುಕೊಳ್ಳೋಣ !



**ಪತ್ರದಲ್ಲಿ ಕಳುಹಿಸುವವರು ಮತ್ತು ಪಡೆಯುವವರ ವಿಳಾಸವನ್ನು ಸರಿಯಾಗಿ ಬರೆಯಬೇಕು. ಇಲ್ಲದಿದ್ದರೆ ಅದು ಕಳುಹಿಸಿದವರಿಗೇ ಹಿಂದಿರುಗಿ ಬಂದು ಸೇರುವುದು.**





## ಕಾರ್ಯ ಯೋಜನೆ

ಯಾವುದಾದರೂ ಹತ್ತು ಆಟಗಳ ಹೆಸರುಗಳನ್ನು ಮತ್ತು ಅವುಗಳ ಚಿತ್ರಪಟಗಳನ್ನು ಸಂಗ್ರಹಿಸಿ, ಚಿತ್ರಗುಚ್ಛ(ಆಲ್ಬಂ)ವನ್ನು ತಯಾರಿಸಿ.



Tamil 4th-std_Term3.indd 167 12-07-2019 16:23:32




ಒಂದು ಊರಿನಲ್ಲಿ ಅಣ್ಣ ಮತ್ತು ತಮ್ಮ ವಾಸಿಸುತ್ತಿದ್ದರು. ಇವರಲ್ಲಿ ತಮ್ಮನು ಬಡತನದಿಂದ ಬಳಲುತ್ತಿದ್ದನು. ಆದರೆ ಅಣ್ಣ ಸಿರಿವಂತನಾಗಿದ್ದನು. ತಮ್ಮನು ಒಂದು ದಿನ ಅಣ್ಣನ ಹತ್ತಿರ ಹೋಗಿ ಒಂದು ಹಸುವನ್ನು ಕೊಡುವಂತೆ ಬೇಡಿದನು. ತಮ್ಮನಿಗೆ ಹಸುವನ್ನು ಕೊಟ್ಟು, ತನ್ನ ಜಮೀನಿನಲ್ಲಿ ಒಂದು ವರ್ಷ ಉಳುಮೆ ಮಾಡುವಂತೆ ಹೇಳಿದನು.

ತಮ್ಮನು ಇದಕ್ಕೆ ಒಪ್ಪಿಕೊಂಡು ಒಂದು ವರ್ಷ ಕಾಲ ಜಮೀನಿನಲ್ಲಿ ಉಳುಮೆ ಮಾಡಿದನು. ಒಂದು ವರ್ಷ ಮುಗಿದ ಮೇಲೆ ತಮ್ಮನು ಅಣ್ಣನ ಜಮೀನನ್ನು ಉಳುಮೆ ಮಾಡುವುದನ್ನು ನಿಲ್ಲಿಸಿದನು. ಅದಕ್ಕೆ ಬದಲಾಗಿ ಅಣ್ಣನು ತನ್ನ ಹಸುವನ್ನು ಹಿಂದಿರುಗಿ ಕೊಡುವಂತೆ ಕೇಳಿದನು.

'ನಾನು ಒಂದು ವರ್ಷ ಕಾಲ ನಿನ್ನ ಜಮೀನಿನಲ್ಲಿ ಉಳುಮೆ ಮಾಡಿದೆನಲ್ಲವೇ? ಅದಕ್ಕೆ ಪ್ರತಿಯಾಗಿ ಹಸುವನ್ನು ನನಗೆ ಕೊಟ್ಟದ್ದಲ್ಲವೇ?' ಎಂದು ತಮ್ಮನು ಕೇಳಿದನು. ಅಣ್ಣನು, 'ಅದು ಹೇಗೆ ಸಾಧ್ಯ?' ಒಂದು ವರ್ಷಗಳ ಕಾಲ ನೀನು ನನ್ನ ಹಸುವಿನ ಹಾಲನ್ನು ಕರೆದುಕೊಂಡು ಅದರ ಆದಾಯವನ್ನು ಅನುಭವಿಸಿದ್ದೀಯ ಅಲ್ಲವೇ? ಆದ್ದರಿಂದ ಎರಡಕ್ಕೂ ಸರಿಯಾಯಿತು' ಎಂದನು. ಹೀಗೆ ಇಬ್ಬರ ನಡುವೆ ವಾಗ್ವಾದ ನಡೆಯಿತು. ಕಡೆಗೆ ಇಬ್ಬರೂ ನ್ಯಾಯ ತೀರ್ಮಾನಕ್ಕಾಗಿ ಊರಿನ ಹಿರಿಯರ ಬಳಿಗೆ ಹೋದರು. ಅವರು ಇಬ್ಬರ ನಡುವೆ ನಡೆದ ವಿಷಯವನ್ನೆಲ್ಲ ವಿಚಾರಿಸಿ ತಿಳಿದುಕೊಂಡರು.

ಹಿರಿಯರಾದ ತೀರ್ಪುಗಾರರು ಇವರಿಬ್ಬರಿಗೆ ಮೂರು ಒಗಟುಗಳನ್ನು ಬಿಡಿಸುವಂತೆ ತಿಳಿಸಿದರು. ಈ ಒಗಟುಗಳನ್ನು ಸರಿಯಾಗಿ ಬಿಡಿಸಿ ಉತ್ತರ ಹೇಳಿದವರಿಗೆ ಈ ಹಸುವನ್ನು ನೀಡಲಾಗುವುದು ಎಂದು ಒಗಟುಗಳನ್ನು ಹೇಳಿದರು.

ಮೊದಲನೆಯ ಒಗಟು : 'ಮನುಷ್ಯನ ಹಸಿವನ್ನು ನೀಗಿಸುವುದು ಯಾವುದು?'



Tamil 4th-std_Term3.indd 168 12-07-2019 16:23:33

ಎರಡನೆಯ ಒಗಟು : ಮನುಷ್ಯನಿಗೆ ಅತಿ ಸಂತೋಷ ತರುವುದು ಯಾವುದು?

ಮೂರನೆಯ ಒಗಟು : ಅತಿ ವೇಗವಾಗಿ ಚಲಿಸುವುದು ಯಾವುದು ?

ಈ ಮೂರೂ ಒಗಟುಗಳ ಉತ್ತರವನ್ನು ನಾಳೆ ಹೇಳಿ ಎಂದು ಹೇಳಿ ಅವರನ್ನು ಕಳಿಸಿದರು. ಇಬ್ಬರೂ ಮನೆಗೆ ಹಿಂದಿರುಗಿ ಹೋಗಿ ಯೋಚಿಸಿದರು. ಮರುದಿನ ಬೆಳಿಗ್ಗೆ ತೀರ್ಪುಗಾರರ ಬಳಿಗೆ ಬಂದರು. ಮೊದಲು ಅಣ್ಣನನ್ನು ಒಗಟುಗಳ ಉತ್ತರ ಹೇಳುವಂತೆ ಕೇಳಿದರು. 'ಮಹಾಸ್ವಾಮೀ! ಒಬ್ಬ ಮನುಷ್ಯನ ಹಸಿವನ್ನು ನೀಗಿಸುವುದು ಯಾವುದು ಎಂದು ಕೇಳಿದ್ದೀರಿ. ಅದಕ್ಕೆ ಸರಿಯಾದ ಉತ್ತರ ರುಚಿಯಾದ ಆಹಾರವನ್ನು ಸೇವಿಸಿದರೆ ಹಸಿವು ನೀಗುವುದು. ಎರಡನೆಯದು ಮನುಷ್ಯನಿಗೆ ಸಂತೋಷ ತರುವುದು ಯಾವುದು ಎಂದು ಕೇಳಿದಿರಿ. ಅದಕ್ಕೆ ಉತ್ತರ ಹಣ. ಹಣ ಪೆಟ್ಟಿಗೆಯ ತುಂಬಾ ಇದ್ದರೆ ಮನುಷ್ಯನಿಗೆ ಸಂತೋಷವಲ್ಲವೇ? ಹಣ ಕಡಿಮೆಯಾಗುತ್ತಾ ಹೋದಂತೆ ಸಂತೋಷವೂ ಕಡಿಮೆಯಾಗುತ್ತದೆ. ಇನ್ನು ಮೂರನೆಯ ಒಗಟು, ಅತಿ ವೇಗವಾಗಿ ಚಲಿಸುವುದು ಯಾವುದು ಎಂದು ಕೇಳಿದಿರಿ. ಅದಕ್ಕೆ ಉತ್ತರ ಬೇಟೆ ನಾಯಿ. ಬೇಟೆ ನಾಯಿಯು ವೇಗವಾಗಿ ಓಡುವ ಮೊಲವನ್ನೂ ಕೂಡ ಹಿಡಿಯುವುದು. ಈಗ ಎಲ್ಲ ಒಗಟುಗಳಿಗೂ ನಾನು ಸರಿಯಾದ ಉತ್ತರವನ್ನು ಹೇಳಿದ್ದೇನಲ್ಲವೇ, ಈ ಹಸು ನನಗೇ ಅಲ್ಲವೇ?' ಎಂದು ಕೇಳಿದನು. ಅದಕ್ಕೆ ನ್ಯಾಯ ತೀರ್ಮಾನ ಮಾಡುವ ಹಿರಿಯರು 'ನೀನು ಹೇಳಿದ ಉತ್ತರಗಳೆಲ್ಲವೂ ಅಸಮಂಜಸವಾದವು' ಎಂದುಬಿಟ್ಟರು!



ನಂತರ ಆ ತೀರ್ಪುಗಾರರು ತಮ್ಮನಿಗೆ ಉತ್ತರ ಹೇಳುವಂತೆ ಹೇಳಿದರು. 'ಮನುಷ್ಯನ ಹಸಿವನ್ನು ನೀಗಿಸುವುದು ಭೂಮಿತಾಯಿ. ಭೂಮಿಯಿಂದ ನಾವು ಧಾನ್ಯಗಳನ್ನು ಬೆಳೆಯುತ್ತೇವೆ. ಅದನ್ನು ಮನುಷ್ಯರು, ಪ್ರಾಣಿಗಳು, ಪಕ್ಷಿಗಳು ತಿಂದು ಜೀವಿಸುತ್ತವೆ. ಎರಡನೆಯ ಒಗಟಿಗೆ ಉತ್ತರ: ಮನುಷ್ಯನಿಗೆ ಅಧಿಕ ಸಂತೋಷವನ್ನು ನೀಡುವುದು ನಿದ್ರೆ. ನಿದ್ರೆಗಾಗಿ ಮನುಷ್ಯನು ಬೆಲೆ ಬಾಳುವ ಸಂಪತ್ತನ್ನು ಸಹ ಬಿಟ್ಟುಬಿಡುತ್ತಾನೆ. ಮೂರನೆಯ ಒಗಟಿನ ಉತ್ತರ: ಅತಿವೇಗವಾಗಿ ಚಲಿಸುವುದು ನಮ್ಮ ಮನಸ್ಸು' ಎಂದನು

'ಆಹಾ! ಸರಿಯಾದ ಉತ್ತರವನ್ನು ಹೇಳಿರುವೆ. ಈ ಹಸುವನ್ನು ನೀನೇ ತೆಗೆದುಕೋ' ಎಂದು ಅವರು ಹೇಳಿ, ಈ ಒಗಟುಗಳಿಗೆ ಉತ್ತರವನ್ನು ನಿನಗೆ ಹೇಳಿಕೊಟ್ಟವರು ಯಾರು?' ಎಂದು ಕೇಳಿದರು. ಅದಕ್ಕೆ ತಮ್ಮನು, 'ನನ್ನ ಮಗಳಾದ ಚಂದ್ರಿಕಾ' ಎಂದನು. 'ನಿನ್ನ ಮಗಳು ಅಷ್ಟೊಂದು ಬುದ್ಧಿವಂತಳೇ?' ಎಂದು ಅವರು ಕೇಳಿದರು.

ಆಗ ಆ ತೀರ್ಪುಗಾರರು ಚಂದ್ರಿಕಾಳ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ಯೋಚಿಸಿದರು. ಹತ್ತು ಬೇಯಿಸಿದ ಮೊಟ್ಟೆಗಳನ್ನು ಅವಳಿಗೆ ಕೊಡುವಂತೆ ಕೊಟ್ಟು ಕಳಿಸಿ, 'ಇವುಗಳನ್ನು ಒಂದು ಕೋಳಿಯಿಂದ ಕಾವು ಕೊಡಿಸಿ ಒಂದೇ ರಾತ್ರಿಯಲ್ಲಿ ಕೋಳಿ ಮರಿಗಳನ್ನು ಮಾಡಿ, ಅಂದೇ ರಾತ್ರಿಯಲ್ಲಿ ಅವುಗಳಿಂದ ಮೊಟ್ಟೆಗಳನ್ನು ಹಾಕಿಸಿ ಹತ್ತು ಮೊಟ್ಟೆಗಳಲ್ಲಿ ಮೂರು ಮೊಟ್ಟೆಗಳನ್ನು ತೆಗೆದು ಬೇಯಿಸಿ, ನಾಳೆ ಬೆಳಿಗ್ಗೆ ನನ್ನ ಉಪಹಾರಕ್ಕೆ ತೆಗೆದುಕೊಂಡು ಬಾ!' ಎಂದರು.

ತನ್ನ ಮಗಳಾದ ಚಂದ್ರಿಕಾಳು ಹಿರಿಯರು ಹೇಳಿದ ಈ ಕೆಲಸಕ್ಕೆ ಏನು ಉತ್ತರ ಹೇಳುವಳೋ ಎಂದು ತಮ್ಮನು ಚಿಂತೆಗೀಡಾದನು. ಆದರೆ ಅವಳು ಈ ಒಗಟಿಗೆ ಪ್ರತಿಯಾಗಿ ಇನ್ನೊಂದು ಒಗಟನ್ನು ಅವರಿಗೆ ಹೇಳಿಕಳಿಸಿದಳು. ಒಂದು ಮಡಕೆಯಲ್ಲಿ ಬೇಯಿಸಿದ ತೊಗರಿ ಕಾಳುಗಳನ್ನು ಹಾಕಿ ಕೊಟ್ಟು ಕಳಿಸಿ, 'ಈ ಬೇಯಿಸಿದ ತೊಗರಿಯನ್ನು ಭೂಮಿಯಲ್ಲಿ ಹಾಕಿ, ಬೆಳೆದ ಧಾನ್ಯಗಳನ್ನು ಕೋಳಿ ಮರಿಗಳಿಗೆ ಆಹಾರವನ್ನಾಗಿ ಕೊಡುವಂತೆ ಹೇಳಿ' ಎಂದು ಅವಳು ತನ್ನ ತಂದೆಯ ಬಳಿ ಹೇಳಿ ಕಳಿಸಿದಳು. ಚಂದ್ರಿಕಾಳ ತಂದೆ ತೀರ್ಪುಗಾರರ ಬಳಿ ಹೋಗಿ ಅವಳು ಹೇಳಿಕೊಟ್ಟಂತೆಯೇ ಹೇಳಿದರು. ಅವರು ಬೇಯಿಸಿದ ತೊಗರಿಯನ್ನು ನಾಯಿಗೆ ಹಾಕಿದರು.

ಮತ್ತೆ ಅವರು, ಚಂದ್ರಿಕಾಳ ತಂದೆಯ ಹತ್ತಿರ ನೂಲಿನ ಉಂಡೆಯೊಂದನ್ನು ಕೊಟ್ಟು, ಅದನ್ನು ನೆನೆಸಿ, ಕಾಯಿಸಿ ಉತ್ತಮವಾದ ಬಟ್ಟೆಯನ್ನು ನೇಯ್ದುಕೊಡುವಂತೆ ನಿನ್ನ ಮಗಳಿಗೆ ತಿಳಿಸು' ಎಂದರು. ಆದರೆ ಚಂದ್ರಿಕಾಳು ಮತ್ತೆ ಅದಕ್ಕೆ ಪ್ರತಿಯಾಗಿ ಮತ್ತೊಂದು ಒಗಟನ್ನು ಹೇಳಿಕಳಿಸಿದಳು. ಅವಳು ಒಂದು ಮೃದುವಾದ ಕಡ್ಡಿಯನ್ನು ಕೊಟ್ಟು, ಆ ಕಡ್ಡಿಯಿಂದ ನೂಲು ಸುತ್ತುವ ರಾಟೆಯೊಂದನ್ನು ಮಾಡಿ ಕೊಡಲು ಹಿರಿಯರಿಗೆ ತಿಳಿಸಿ' ಎಂದು ಹೇಳಿ ಕಳಿಸಿದಳು. ಚಂದ್ರಿಕಾಳ ಬುದ್ಧಿವಂತಿಕೆಯನ್ನು ನೋಡಿದ ಆ ಹಿರಿಯರು 'ನಿನ್ನ ಮಗಳಿಗೆ ನನ್ನನ್ನು ಬಂದು ಕಾಣುವಂತೆ ಹೇಳು' ಎಂದರು.

ಆದರೆ ಅವಳು ನಡೆಯದೆಯೂ, ಓಡದೆಯೂ; ಬರಿಗಾಲಿನಲ್ಲಿಯೋ ಪಾದರಕ್ಷೆಯೊಡನೆಯೋ ಬರಬಾರದು. ನಮ್ಮನ್ನು ಕಾಣಲು ಬರುವಾಗ ನಮಗಾಗಿ ಉಡುಗೊರೆಯೊಂದಿಗೋ ಉಡುಗೊರೆ ಇಲ್ಲದೆಯೋ ಬರಬಾರದು. ಇದು ನಮ್ಮ ಕಠಿಣವಾದ ಆಜ್ಞೆ' ಎಂದರು.

ಮರುದಿನ ಸರಕುಗಳನ್ನು ಸಾಗಿಸುವ ಗಾಡಿಗೆ ಎರಡು ಆಡುಗಳನ್ನು ಕಟ್ಟಿಕೊಂಡು, ಆ ಗಾಡಿಯಲ್ಲಿ ಕುಳಿತು, ಒಂದು ಕಾಲಿಗೆ ಮಾತ್ರ ಪಾದರಕ್ಷೆಯನ್ನು ಹಾಕಿಕೊಂಡು; ಮೊಲದ ಮರಿಯೊಂದನ್ನು ಮತ್ತು

ಗುಬ್ಬಚ್ಚಿಯೊಂದನ್ನು ತನ್ನ ಕಂಕುಳಲ್ಲಿ ಯಾರಿಗೂ ತಿಳಿಯದಂತೆ ಬಚ್ಚಿಟ್ಟುಕೊಂಡು ಬಂದಳು. ಅವಳು ಬರುವುದನ್ನು ಕಂಡ ಹಿರಿಯರು, ನಾಯಿಗಳನ್ನು ಛೂ ಬಿಟ್ಟರು. ಚಂದ್ರಿಕಾ ಅದಕ್ಕೆ ಪ್ರತಿಯಾಗಿ ತನ್ನ ಬಳಿ ಇದ್ದ ಮೊಲವನ್ನು ಹೊರಗೆ ಬಿಟ್ಟಳು. ನಾಯಿಗಳು ಮೊಲದ ಮರಿಯನ್ನು ಓಡಿಸಿಕೊಂಡು ಹೋದವು. ಅವಳು ಅವರ ಹತ್ತಿರ ಬಂದು, 'ತೆಗೆದುಕೊಳ್ಳಿ ಈ ಉಡುಗೊರೆಯನ್ನು' ಎಂದು ಅವರಿಗೆ ಗುಬ್ಬಚ್ಚಿಯನ್ನು ಕೊಟ್ಟಳು. ಅದು ಅವರ ಕೈಯಿಂದ ಹಾರಿ ಹೋಯಿತು. ಹಿರಿಯರು ತಾವು ಹೇಳಿದಂತೆ ಮಾಡಿದ ಚಂದ್ರಿಕಾಳ ಬುದ್ಧಿವಂತಿಕೆಯನ್ನು ಮೆಚ್ಚಿ ಹೊಗಳಿ, ಅವಳಿಗೆ ಬಹುಮಾನವನ್ನು ಕೊಟ್ಟು ಕಳಿಸಿದರು.

**ನೀತಿ : ಬಲ್ಲವನೇ ಬಲ್ಲ ಬೆಲ್ಲದ ರುಚಿಯ**
**ಬಲ್ಲವನಿಗೆ ಹುಲ್ಲೂ ಆಯುಧ**



## ಬನ್ನಿ, ಮಾತಾಡೋಣ!

• ನಿಮಗೆ ತಿಳಿದ ಯಾವುದಾದರೂ ಒಗಟನ್ನು ತರಗತಿಯಲ್ಲಿ ಹೇಳಿರಿ.




ಈ ಕಥೆಯಲ್ಲಿ ಬರುವ ಅಣ್ಣನಂತೆ ನೀವು ಇದ್ದಿದ್ದರೆ ನಿಮ್ಮ ತಮ್ಮನಿಗೆ ಏನು ಮಾಡುತ್ತಿದ್ದಿರಿ ?

## ಓದೋಣ! ಚಿಂತಿಸೋಣ! ಬರೆಯೋಣ!

### ಕೆಳಗೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ

01 'ತಂದೆ' ಎಂಬ ಅರ್ಥ ನೀಡುವ ಮತ್ತೊಂದು ಪದ ________

ಅ. ಶತ್ರು ಆ. ಪಿತೃ

ಇ. ಮಿತ್ರ ಈ. ಮಾತೃ

02 'ತೀರ್ಪುಗಾರ' ಇದನ್ನು ಬಿಡಿಸಿ ಬರೆದಾಗ ________

ಅ. ತೀರ್ಪು+ಕಾರ ಆ. ತೀರ್ಪು+ಗಾರ

ಇ. ತೀರ್ಪಿನ+ಕಾರ ಈ. ತೀರ್ಪಿಗೆ+ಕಾರ

03 'ಊರಿನ+ಅಲ್ಲಿ' – ಈ ಪದವನ್ನು ಸೇರಿಸಿ ಬರೆದಾಗ ______

ಅ. ಊರಿನಅಲ್ಲಿ          ಆ. ಊರಲ್ಲಿ

ಇ. ಊರಿನಲ್ಲಿ          ಈ. ಊರುನಲ್ಲಿ

## ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

01 ಒಂದು ವರ್ಷ ಭೂಮಿಯನ್ನು ಉಳುಮೆ ಮಾಡಿದ್ದು ಯಾರು ?

02 ಒಗಟುಗಳಿಗೆ ಸರಿಯಾದ ಉತ್ತರವನ್ನು ಹೇಳಿದವರು ಯಾರು ?

03 ಹಿರಿಯರು ಹಸುವನ್ನು ಯಾರಿಗೆ ಕೊಟ್ಟರು ?

04 ಚಂದ್ರಿಕಾ ಊರಿನ ಹಿರಿಯರಿಗೆ ಯಾವ ಉಡುಗೊರೆ ಕೊಟ್ಟಳು ?

## ವಿರುದ್ಧ ಪದಗಳನ್ನು ಹೊಂದಿಸಿ ಬರೆಯಿರಿ

| | |
|---|---|
| ಸಂತೋಷ | ಸುಖ |
| ಹಗಲು | ದುಃಖ |
| ವೇಗವಾಗಿ | ಇರುಳು |
| ಕಷ್ಟ | ನಿಧಾನವಾಗಿ |



Tamil 4th-std_Term3.indd 172 12-07-2019 16:23:35

## ಕಲೆ ಮತ್ತು ಕರಕೌಶಲ್ಯ

ಬಣ್ಣ ಹಚ್ಚಿ ಸಂತೋಷ ಪಡೋಣ!

ಇಲ್ಲಿ ಅರ್ಧ ಚಿತ್ರವನ್ನು ಬರೆಯಲಾಗಿದೆ. ಉಳಿದ ಅರ್ಧ ಚಿತ್ರವನ್ನು ಬರೆದು ಬಣ್ಣ ಹಚ್ಚಿರಿ.



## ಕೂಡಿ ಮಾಡೋಣ !

### ಆಟ ಆಡೋಣ ಬನ್ನಿ ! ಗಾಳ ಮೀನಿನ ಆಟ !

ಮೀನಿನ ಆಕಾರದಲ್ಲಿ ರಟ್ಟುಗಳನ್ನು ಕತ್ತರಿಸಿಕೊಂಡು ಆ ರಟ್ಟುಗಳಲ್ಲಿ ಕೆಳಕಂಡ ಪದಗಳನ್ನು ಬರೆದುಕೊಳ್ಳುವುದು. ಮೀನಿನ ಆಕಾರದಲ್ಲಿ ಕತ್ತರಿಸಿರುವ ರಟ್ಟಿನ ಮೇಲೆ ಗುಂಡುಸೂಜಿಯನ್ನು ಚುಚ್ಚುವುದು. ತರಗತಿಯ ಮಧ್ಯ ವೃತ್ತ ಹಾಕಿ ರಟ್ಟುಗಳನ್ನು ವೃತ್ತದಲ್ಲಿ ಹಾಕುವುದು. ಒಂದು ಕಡ್ಡಿಗೆ ದಾರವನ್ನು ಕಟ್ಟಿಕೊಂಡು ದಾರದ ಮತ್ತೊಂದು ತುದಿಗೆ ಕಾಂತವನ್ನು ಕಟ್ಟಿಕೊಳ್ಳುವುದು. ದಾರದ ಮತ್ತೊಂದು ತುದಿಗೆ ಕಾಂತವನ್ನು ಕಟ್ಟಿಕೊಳ್ಳುವುದು. ತರಗತಿಯಲ್ಲಿ ದೊಡ್ಡದಾದ ವೃತ್ತವನ್ನು ಹಾಕಿ, ವೃತ್ತದ ಒಂದು ಸ್ಥಳದಲ್ಲಿ ಬಾಣದ ಗುರುತನ್ನು ಹಾಕುವುದು. ವಿದ್ಯಾರ್ಥಿಗಳು ವೃತ್ತವನ್ನು ಸುತ್ತುವಂತೆ ಹೇಳುವುದು. ಶಿಕ್ಷಕರು ಸೀಟಿಯನ್ನು ಊದಿದಾಗ ವಿದ್ಯಾರ್ಥಿಗಳು ವೃತ್ತದಲ್ಲಿ ನಿಲ್ಲಬೇಕು. ಬಾಣದ ಗುರುತಿನ ಸ್ಥಳದಲ್ಲಿ ನಿಂತ ವಿದ್ಯಾರ್ಥಿಯು ಗಾಳದ ಮೂಲಕ ವೃತ್ತದೊಳಗೆ ಇಡಲ್ಪಟ್ಟಿರುವ ರಟ್ಟೊಂದನ್ನು ತೆಗೆದುಕೊಂಡು ಅದರಲ್ಲಿರುವ ಪದಕ್ಕೆ ಬಹುವಚನ ಹೇಳುವುದು.

ಉದಾಹರಣೆ : ಪಕ್ಷಿ – ಪಕ್ಷಿಗಳು

ಮರ, ನಾಯಿ, ಗಂಡಸು, ಮನೆ, ಕೋಳಿ, ಮಗು, ಪುಸ್ತಕ, ಅಕ್ಕ, ಹುಡುಗ, ಗಾಡಿ, ಗುಬ್ಬಚ್ಚಿ, ಗಿಳಿ, ಅಮ್ಮ, ಕಾಗೆ... ಇತ್ಯಾದಿ ಇನ್ನೂ ಹಲವು ಪದಗಳನ್ನು ಶಿಕ್ಷಕರು ಹೇಳುವುದು.



Tamil 4th-std_Term3.indd 173 12-07-2019 16:23:35

# ಭಾಷೆಯೊಂದಿಗೆ ಆಟವಾಡು

ಕೆಳಗಿನ ಅಕ್ಷರಗಳನ್ನು ಬಳಸಿ ಪದಗಳನ್ನು ಬರೆಯಿರಿ.

ಸಿ ಹಿ ಸ ದ ರೆ

ಣ್ಣು ಗ್ಗಿ ಠ ಟ್ಟ ಡ್ಡಿ

**ತಿಳಿದುಕೊಳ್ಳೋಣ**



ಹಿಂದಿನ ಪರಂಪರೆಯನ್ನು ತಿಳಿದುಕೊಳ್ಳಲು ಮತ್ತು ಜನರ ವೈವಿಧ್ಯಮಯ ಜೀವನದಲ್ಲಿ ಕಷ್ಟಕರವಾದ ವಿಷಯಗಳನ್ನು ಸರಳವಾಗಿ ತಿಳಿದುಕೊಳ್ಳಲು ಗಾದೆ ಮಾತುಗಳು, ನುಡಿಗಟ್ಟುಗಳು ಮತ್ತು ಒಗಟುಗಳು ಸಹಕಾರಿಯಾಗಿವೆ.



ಶತಕ ___

| | | | |
|---|---|---|---|
| ಸ | ನೂ | ಚ | ಲ |
| ನ | ಬ | ಮ | ರ |
| ಜ | ಡ | ರು | ಕ |

ಕನ್ನಡದ ಮೊದಲ ತಿಂಗಳು

___________ ?

| | | | |
|---|---|---|---|
| ಡ | ಕ | ತ್ರ | ಪ |
| ಚೈ | ಜ | ಮ | ಯ |
| ರ | ಲ | ಅ | ಗ |

ಜುಟ್ಟುಂಟು ನಾರಿಯಲ್ಲ ಕಣ್ಣುಂಟು ಮನುಷ್ಯನಲ್ಲ ನೀರುಂಟು ಬಾವಿಯಲ್ಲ

ಹಾಗಾದರೆ ನಾನು ಯಾರು ? ___________

| | | | |
|---|---|---|---|
| ಮ | ಪ | ಅ | ಜ |
| ತೆಂ | ಟ | ಗಿ | ಕ |
| ಡ | ನ | ತ | ರಿ |
| ಕಾ | ಸಿ | ಯಿ | ಲ್ಲ |



**ಕಾರ್ಯ ಯೋಜನೆ**

ನಿಮ್ಮ ಮನೆಯಲ್ಲಿ ಹಿರಿಯರನ್ನು ಕೇಳಿ, 10 ಗಾದೆಗಳನ್ನು ಬರೆದುಕೊಂಡು ಬನ್ನಿರಿ.



Tamil 4th-std_Term3.indd 174 12-07-2019 16:23:35

# ಶಬ್ದಾರ್ಥಗಳು

**ಅ**

ಅಪ್ಪುಗೆ : ಆಲಿಂಗನ
ಅರಿತು : ತಿಳಿದು
ಅದ್ಭುತ : ಆಶ್ಚರ್ಯ
ಅಗ್ನಿ : ಬೆಂಕಿ

**ಆ**

ಆವಿಷ್ಕಾರ : ಸಂಶೋಧನೆ
ಆದಾಯ : ಲಾಭ, ವರಮಾನ

**ಇ**

ಇಕ್ಕಟ್ಟು : ಒತ್ತಡ, ಎರಡು ಕಟ್ಟುಗಳ ನಡುವೆ ಸಿಕ್ಕಿಕೊಂಡಂತೆ ಬಿಗಿಯಾದ ವಾತಾವರಣ

**ಈ**

ಈಶ : ಶಿವ, ಶಂಕರ

**ಉ**

ಉತ್ತಮ : ಉನ್ನತ
ಉಸಿರು : ಪ್ರಾಣ, ಶ್ವಾಸ
ಉತ್ಸಾಹ : ಅತಿಯಾದ ಸಂತೋಷ.

**ಊ**

ಊಟ : ಆಹಾರ, ಭೋಜನ

**ಋ**

ಋಷಿ : ಮುನಿ, ಸಂತ, ಸಾಧು

**ಎ**

ಎತ್ತರ : ಮೇಲೆ

**ಏ**

ಏರಿ : ಕೆರೆ
ಏಳಿಗೆ : ಉನ್ನತಿ

**ಐ**

ಐಕ್ಯ : ಒಗ್ಗಟ್ಟು
ಐರಾವತ : ಇಂದ್ರನ ಆನೆಯ ಹೆಸರು

**ಒ**

ಒಂಟಿ : ಏಕಾಂಗಿ, ಒಬ್ಬ
ಒಡೆಯ : ಯಜಮಾನ, ಮಾಲಿಕ

**ಓ**

ಓಲೆ : ತಾಳೆಗರಿ, ಪತ್ರ, ಕಿವಿಗೆ ಹಾಕಿಕೊಳ್ಳುವ ಆಭರಣ

**ಕ**

ಕಲಿ : ತಿಳಿ, ಧೀರ
ಕಾಗದ : ಹಾಳೆ, ಪತ್ರ, ಪೇಪರ್ರು



Tamil 4th-std_Term3.indd 175 12-07-2019 16:23:35

| | | |
|---|---|---|
| ಕೃಷಿ | : | ವ್ಯವಸಾಯ, ಬೇಸಾಯ |
| ಕಸುಬು | : | ಕೆಲಸ, ಕಾರ್ಯ |
| ಕಿರೀಟ | : | ತಲೆಗೆ ಧರಿಸುವ ಆಭರಣ |
| ಕ್ರೀಡೆ | : | ಆಟ |
| **ಖ** | | |
| ಖಡ್ಗ | : | ಕತ್ತಿ |
| **ಗ** | | |
| ಗರ್ವ | : | ಅಹಂಕಾರ, ಸೊಕ್ಕು |
| ಗ್ರಾಮ | : | ಹಳ್ಳಿ, ಊರು |
| ಗ್ರಾಮೀಣ | : | ಹಳ್ಳಿಗೆ ಸಂಬಂಧಿಸಿದ |
| ಗ್ರಂಥಾಲಯ | : | ಪುಸ್ತಕಾಲಯ |
| **ಚ** | | |
| ಚಾತುರ್ಯ | : | ಚಾಣಾಕ್ಷತೆ, ಚತುರತೆ |
| **ಛ** | | |
| ಛತ್ರಿ | : | ಕೊಡೆ |
| ಛಲ | : | ಹಠ |
| **ತ** | | |
| ತಾಳ್ಮೆ | : | ಸಮಾಧಾನ |
| ತೀರ್ಪು | : | ತೀರ್ಮಾನ, ನಿರ್ಣಯ |
| ತಾಳು | : | ನಿಧಾನಿಸು |
| **ನ** | | |
| ನವೀನ | : | ಹೊಸತು |
| ನೈಸರ್ಗಿಕ | : | ಸ್ವಾಭಾವಿಕ |
| **ಪ** | | |
| ಪ್ರತ್ಯೇಕ | : | ಬೇರೆಯಾದ |
| ಪ್ರತಿಮೆ | : | ವಿಗ್ರಹ |
| ಪ್ರಸಿದ್ಧ | : | ಹೆಸರಾಂತ |
| **ಮ** | | |
| ಮೂಕ | : | ಮಾತನಾಡದಿರುವುದು |
| ಮಲೆ | : | ಬೆಟ್ಟ |
| ಮುಗಿಲು | : | ಮೋಡ, ಮೇಘ |
| **ವ** | | |
| ವರ್ತಕ | : | ವ್ಯಾಪಾರಿ |
| ವಿಪತ್ತು | : | ಆಪತ್ತು |
| **ಸ** | | |
| ಸವಾರಿ | : | ಪ್ರಯಾಣ ಮಾಡುವುದು, ಸಂಚರಿಸುವುದು |
| ಸಂಪತ್ತು | : | ಐಶ್ವರ್ಯ, ಸಿರಿ |
| ಸವಿ | : | ರುಚಿಯಾದ |
| ಸಂಗ್ರಹಿಸು | : | ಒಟ್ಟುಗೂಡಿಸು |
| **ಹ** | | |
| ಹಗೆ | : | ಶತ್ರು, ವೈರಿ |
| ಹಾರ | : | ಮಾಲೆ, ಸರ |
| ಹಿಮಗಿರಿ | : | ಮಂಜಿನ ಬೆಟ್ಟ |

| ಸಾಮರ್ಥ್ಯದ ಭಾಗ | ಸಾಮರ್ಥ್ಯ | ಪಾಠದ ಸಂಖ್ಯೆ |
|---|---|---|
| **ಕೇಳುವುದು** | | |
| 1. | ಭಾವನಾತ್ಮಕವಾಗಿ ಹಾಡಿ, ಕೇಳಿ ತಿಳಿದುಕೊಳ್ಳುವುದು. | 1, 4 |
| 2. | ನಮ್ಮ ಸುತ್ತಮುತ್ತ ನಡೆಯುವ ಸಂಭಾಷಣೆಯನ್ನು ಕೇಳಿ ಅರ್ಥೈಸಿಕೊಳ್ಳುವುದು. | 2, 5 |
| 3. | ಆಡು ಭಾಷೆಯಲ್ಲಿರುವ ಒಗಟುಗಳು, ವರ್ಣನೆಗಳು, ಭಾಷಾ ಆಟಗಳ ನಿಯಮಗಳು ಮುಂತಾದವುಗಳನ್ನು ಕೇಳಿ ಅರ್ಥೈಸಿಕೊಳ್ಳುವುದು. | 9 |
| **ಮಾತನಾಡುವುದು** | | |
| 1. | ಕೇಳಿ ತಿಳಿದ ಕಥೆಗಳನ್ನು ನಿರಂತರವಾಗಿ, ನಿರರ್ಗಳವಾಗಿ ಮಾತನಾಡುವುದು | 3 |
| 2. | ಕವಿತೆಗಳನ್ನು ರಾಗವಾಗಿ, ಭಾವನಾತ್ಮಕವಾಗಿ, ಲಯ ಬದ್ಧವಾಗಿ ಹಾಡುವುದು | 1, 4 |
| 3. | ಕೇಳಿ ತಿಳಿದ ಕಥೆ, ಕಥನ-ಕವನದ ಶೀರ್ಷಿಕೆ, ಮಾಂತ್ರಿಕ ಕಥೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವುದು ಮತ್ತು ಅವುಗಳ ಬಗ್ಗೆ ಚರ್ಚಿಸುವುದು. | 3, 6 |
| **ಓದುವುದು** | | |
| 1. | ಸ್ವರಾಕ್ಷರಗಳನ್ನು ಲೋಪ-ದೋಷಗಳಿಲ್ಲದಂತೆ ಓದುವುದು. | 2, 8 |
| 2. | ಸರಳ ವಾಕ್ಯಗಳನ್ನು ನಿರರ್ಗಳವಾಗಿ, ಓದುವುದು | 2, 8 |
| 3. | ಲೇಖನ ಚಿಹ್ನೆಗಳನ್ನು ತಿಳಿದು, ಅವುಗಳನ್ನು ಅನುಸರಿಸಿ ಓದುವುದು | 2, 8 |
| 4. | ಸಂದರ್ಭಕ್ಕನುಸಾರವಾಗಿ ಹೊಸ ಪದಗಳ ಅರ್ಥವನ್ನು ತಿಳಿದು ಓದುವುದು | 2, 6, 8 |



Tamil 4th-std_Term3.indd 177 12-07-2019 16:23:36

| ಸಾಮರ್ಥ್ಯದ ಭಾಗ | ಸಾಮರ್ಥ್ಯ | ಪಾಠದ ಸಂಖ್ಯೆ |
|---|---|---|
| **ಬರೆಯುವುದು** | | |
| 1. | ಸರಿಯಾದ ಆಕಾರದಲ್ಲಿ ಸ್ಥಳ ಬಿಟ್ಟು ಬರೆಯುವುದು | ಎಲ್ಲವೂ |
| 2. | ಸರಳವಾದ ಲೇಖನ ಪತ್ರಗಳನ್ನು ಸಂಭಾಷಣೆಗಳು, ಕಥೆಗಳು, ಕವನಗಳನ್ನು ಬರೆಯುವುದು | ಎಲ್ಲವೂ |
| 3. | ಒಗಟುಗಳು ಮತ್ತು ಚುಟುಕುಗಳಿಗೆ ಉತ್ತರಗಳನ್ನು ಬರೆಯುವುದು. | 9 |
| **ಎಲ್ಲವೂ** | | |
| 1. | ಅಕ್ಷರಗಳ ವಿಧಗಳು | 3 |
| 2. | ಏಕವಚನ, ಬಹುವಚನಗಳ ವ್ಯತ್ಯಾಸಗಳನ್ನು ತಿಳಿಯುವುದು | 5 |
| **ಓದಿ ತಿಳಿ** | | |
| 1. | ಮಕ್ಕಳಿಗೆ ಶಬ್ದಕೋಶವನ್ನು ಉಪಯೋಗಿಸಿ ಪಾಠವನ್ನು ಬೋಧಿಸುವುದು. | |
| 2. | ಮಕ್ಕಳಿಗಾಗಿ ಒಗಟುಗಳು, ಭಾಷಾ ಆಟಗಳನ್ನು ಆಡಿಸಿ ಸಂತೋಷ ಪಡಿಸುವುದು | 3, 4 |
| 3. | ಚಿತ್ರಕಥೆಗಳನ್ನು ಓದುವುದು | 3 |
| **ರಚನಾ ಸಾಮರ್ಥ್ಯ** | | |
| 1. | ಒಂದೇ ಪದದಿಂದ ಹಲವಾರು ಹೊಸ ಪದಗಳನ್ನು ರಚಿಸುವುದು. | ಎಲ್ಲವೂ |
| **ಸಹ ಮನೋಭಾವನೆ** | | |
| 1. | ಇತರ ಜೀವಿಗಳಲ್ಲಿಯೂ ಪ್ರೀತಿ ತೋರಿಸುವುದು. | 2 |
| 2. | ಸಹಕಾರ ಮನೋಭಾವ | 8 |
| 3. | ಪರೋಪಕಾರ | 2 |



Tamil 4th-std_Term3.indd 178 12-07-2019 16:23:37

# Kannada Reader – Class 4
# List of Authors and Reviewers


**Academic Advisor**
Dr.P.Kumar
Joint Director (Syllabus)
TNSCERT,Chennai

**Reviewer**

Dr. Tamil Selvi
M.A., Ph.D., D.Litt.,
Professor and Head
Department of Kannada
University of Madras, Marina
Chennai – 600 005.

**Sub : Co-ordinator**

K. Chandrashekar
DIET, Lecturer
Chennai – 600 005.

P. Venkatesha,
Headmaster, PUPS,
Gummalapuram, Thalli Block,
Kirishnagiri Dt.

**Authors**

1. D.Mahadeva. Headmaster
   P.U.S.School, Singanapuram,
   Thalavadi Tk,
   Erode Dt
2. K.Jayaram. Headmaster
   P.U.P.School, Palayam,
   Thalavadi Tk,
   Erode Dt
3. M.Shivamallu. Headmaster
   P.U.P.School, Kamayanapuram,
   Thalavadi Tk,
   Erode Dt
4. K.Shivaswamy. Headmaster
   P.U.P.School, Honganapuram,
   Thalavadi Tk,
   Erode Dt
5. M. Gurumallappa,
   B.T.Asst.Kannada,
   P.U.M.School, Thalavadi,
   Erode Dt
6. M. Sreenivasa
   B.T.Asst.Kannada,
   P.U.M.School, Doddagajanur,
   Thalavadi Tk,
   Erode Dt
7. N.Subramanya
   SG Asst. Teacher
   P.U.P.School, Mallayanapuram,
   Thalavadi Tk,
   Erode Dt
8. K.Mahadevaswamy
   P.U.M.School, Aralavadi,
   Thalavadi Tk,
   Erode Dt

## Art and Design Team

**Graphics & Layout**
Rajesh Thangappan
Selva Kumar
Sridhar V
Vinoth kumar V
Poornachandran T.K.

**In-House**
QC - Jerald Wilson

**Co-ordination**
Ramesh Munisamy



This book has been printed on
80 GSM Elegant Maplitho paper.
Printed by offset at :





Tamil 4th-std_Term3.indd 179 12-07-2019 16:23:37

# Notes



Tamil 4th-std_Term3.indd 180

12-07-2019 16:23:37